

SAPTHAGIRI (KANNADA)
SPIRITUAL ILLUSTRATED MONTHLY
Volume:03, Issue: 8 Pages:56
March - 2024, Price Rs.20/-
ತಿರುಮಲ ತಿರುಪತಿ ದೇವಸ್ಥಾನಗಳು
ಸಪ್ತಗಿರಿ
ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ
ಮಾರ್ಚ್ 2024
ಬೆಲೆ ರೂ. 20/-
ತಿರುಮಲೆ
ಸ್ವಾಮಿಯವರ ತೆಪ್ಪೋತ್ಸವಗಳು
20-3-2024 ರಿಂದ
24-03-2024 ರ ವರೆಗೆ
SIVAPRASAD







22-01-2024 ರಂದು ಅಯೋಧ್ಯೆಯಲ್ಲಿ ನಡೆದ ಬಾಲರಾಮನ ವಿಗ್ರಹ ಪ್ರತಿಷ್ಠೆ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಿರುಮಲೆ ತಿರುಪತಿ ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀಭೂಮನ ಕರುಣಾಕರ ರೆಡ್ಡಿಯವರು



16-01-2024 ರಂದು ತಿರುಪತಿ ರಾಮಚಂದ್ರ ಪುಷ್ಕರಣಿಯಲ್ಲಿ ನಡೆದ ಕೋಟಿ ಹನುಮಾನ್ ಚಾಲಿಸಾ ಪಾರಾಯಣ ಮಹಾಯಜ್ಞದಲ್ಲಿ ಶ್ರೀ ಸೀತಾರಾಮ, ಶ್ರೀ ಆಂಜನೇಯ ಸ್ವಾಮಿಯವರಿಗೆ ನೀರಾಜನ ಸಮರ್ಪಿಸುತ್ತಿರುವ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಭೂಮನ ಕರುಣಾಕರರೆಡ್ಡಿಯವರು



21-01-2024 ರಂದು ತಿರುಮಲೆ ನಾದನೀರಾಜನ ಮಂಡಪದಲ್ಲಿ ನಡೆದ ಶ್ರೀಮದ್ರಾಮಾಯಣ, ಅಯೋಧ್ಯಾಕಾಂಡ ಅಖಂಡ ಪಾರಾಯಣದ 6 ನೇ ಪ್ರಸಂಗದ ದೃಶ್ಯ






19-01-2024 ರಿಂದ 22-01-2024 ರ ವರೆಗೆ ಅಯೋಧ್ಯೆಯಲ್ಲಿ ನಡೆದ ಬಲರಾಮನ ವಿಗ್ರಹ ಪ್ರತಿಷ್ಠಾ ಕಾರ್ಯಕ್ರಮಕ್ಕೆ ತಿರುಮಲೆ ಶ್ರೀವಾರಿ ಸೇವಾ ಸದನ್ - 1 ರಿಂದ ಸ್ವಾಮಿಯವರ ಪ್ರಸಾದವಾದ ಲಡ್ಡುಗಳನ್ನು ಕಳುಹಿಸುತ್ತಿರುವ ದೃಶ್ಯಮಾಲಿಕೆ. ಈ ಕಾರ್ಯಕ್ರಮದಲ್ಲಿ ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಾಣಾಧಿಕಾರಿ ಶ್ರೀ.ವಿ.ವೀರಬ್ರಹ್ಮ ಐ.ಎ.ಎಸ್., ಪ್ರಧಾನ ಪಿ. ಆರ್. ಓ. ಡಾ॥ ರವಿ ಮತ್ತು ಇತರ ಅಧಿಕಾರಿಗಳು ಪಾಲ್ಗೊಂಡರು



22-01-2024 ರಂದು ತಿರುಪತಿ ಅನ್ನಮಾಚಾರ್ಯ ಕಳಾ ಮಂದಿರದಲ್ಲಿ ಅಯೋಧ್ಯೆ ಬಾಲರಾಮನ ವಿಗ್ರಹ ಪ್ರತಿಷ್ಠೆ ಸಂದರ್ಭವಾಗಿ ಅನ್ನಮಾಚಾರ್ಯ ಪ್ರಾಜೆಕ್ಟ್ ಕಳಾಕಾರರಿಂದ ನಿರ್ವಹಿಸಿದ ಅನ್ನಮಯ್ಯ ಸಂಕೀರ್ತನೆ ಅಖಂಡ ಮಹಾಯಜ್ಞ ಕಾರ್ಯಕ್ರಮದ ದೃಶ್ಯಮಾಲಿಕೆ



22-01-2024 ರಂದು ತಿರುಮಲೆ ಧರ್ಮಗಿರಿಯಲ್ಲಿ ವೇದ ವಿಜ್ಞಾನ ಪೀಠದವರಿಂದ ನಿರ್ವಹಿಸಿದ ಸಂಪೂರ್ಣ ವಾಲ್ಮೀಕಿ ರಾಮಾಯಣ ಪಾರಾಯಣದ ಕಾರ್ಯಕ್ರಮದ ದೃಶ್ಯಮಾಲಿಕೆ

# ಭಗವದ್ಗೀತೆ



**ದೇಹಿನೋಽಸ್ಮಿನ್ ಯಥಾ ದೇಹೇ ಕೌಮಾರಂ ಯೌವನಂ ಜರಾ।**
**ತಥಾ ದೇಹಾಂತರ ಪ್ರಾಪ್ತಿಃ ಧೀರಸ್ತತ್ರನ ಮುಹ್ಯತಿ ॥**

**(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -13)**

**ಜೀವನಿಗೆ ಈ ದೇಹದಲ್ಲಿ ಬಾಲ್ಯ, ಪ್ರಾಯ, ಮುಪ್ಪು ಹೇಗೆ ಹಾಗೆ ಬೇರೆ ದೇಹ ಬರುವುದು ಈ ವಿಷಯದಲ್ಲಿ ಜಾಣರು ಕೆಂಗೆಡುವುದಿಲ್ಲ.**




**ಬಂದೆವಯ್ಯ ಗೋವಿಂದ ಶೆಟ್ಟಿ**
**ಇಂದು ನಿಮ್ಮ ಹರಿವಾಣ ಪ್ರಸಾದವುಂಟೆನಲಾಗಿ**
**ಅಪ್ಪಾಲು ಅತಿರಸ ತುಪ್ಪ ಕಜ್ಜಾಯವು**
**ಒಪ್ಪುವ ಯಾಲಕ್ಕಿ ಶುಂಠಿ ಮೆಣಸು**
**ಅಪ್ಪರೂಪವಾದ ಕಜ್ಜಾಯ ರಾಶಿಗಳ**
**ಛಪ್ಪನ್ನದೇಶಕೆ ಮಾರುವ ಶೆಟ್ಟಿ**
**ಒಡೆದ ಮಡಕೆಯನ್ನು ಬಿಡದೆ ನಾಮವ ಮಾಡಿ**
**ಕೊಡುವೆ ನೀ ಕಾಸಿಗೆ ಒಂದೊಂದನು**
**ಒಡಲು ತುಂಬಿ ಮಿಕ್ಕ ಅನ್ನವ ಮಾರಿಸಿ**
**ಒಡವೆಯ ಗಳಿಸುವ ಕಡುಲೋಭಿ ಶೆಟ್ಟಿ**
**ಶೇಷಗಿರಿಯ ಮೇಲೆ ಇದ್ದ ತಿಮ್ಮಶೆಟ್ಟಿ**
**ದೇಶಕೆ ಪ್ರಸಾದವ ಕಳಿಸುವ ಶೆಟ್ಟಿ**
**ಆಶೆಯಿಂದ ಹಣಕಾಸು ಗಳಿಸುವ ಆದಿ**
**ಕೇಶವ ನಾರಾಯಣನೆಂಬ ಶೆಟ್ಟಿ**

**- ಶ್ರೀ ಕನಕದಾಸರು**

(ಒಂಬತ್ತನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

ವೃಷಾದ್ರಿಹಯಸಾದಿನಃ ಪ್ರಬಲದೋರ್ಮರು ತ್ಪ್ರೇಂಖಿತ ಸ್ತ್ವಿಷಾ ಸ್ಫುಟತತಟದ್ಗುಣಸ್ತ್ವ ದವಸೇಕಸಂಸ್ಕಾರವಾನ್।
ಕರಿಷ್ಯತಿ ದಯೇ ಕಲಿಪ್ರಬಲಘರ್ಮನಿರ್ಮೂಲನಃ ಪುನಃ ಕೃತಯುಗಾಂಕುರಂ ಭುವಿ ಕೃಪಾಣಧಾರಾಧರಃ॥ 90॥

ಮೇಘುವು ಸಮುದ್ರದಿಂದ ಅತ್ಯಂತ ತಣ್ಣಗಿರುವ ನೀರನ್ನು ಪೂರ್ಣವಾಗಿ ತುಂಬಿಕೊಂಡು ದೊಡ್ಡ ಗಾಳಿಯ ಸಹಾಯದಿಂದ ಆಕಾಶದಲ್ಲಿ ಒಂದಾಗಿ ಸೇರಿ, ಇನ್ನೇನು ಸ್ವಲ್ಪ ಹೊತ್ತಿನಲ್ಲಿಯೇ ಮಳೆಯನ್ನು ಸುರಿಸುವುದೆಂಬುದಕ್ಕೆ ಗುರುತಾಗಿರುವ ದೊಡ್ಡ ದೊಡ್ಡ ಮಿಂಚುಗಳಿಂದ ಕೂಡಿರುವುದಾಗಿ ಚೆನ್ನಾಗಿ ಮಳೆಯನ್ನು ಸುರಿಸಿ ಗ್ರೀಷ್ಮ ಕಾಲದಿಂದುಂಟಾಗಿರುವ ಮಹಾತಾಪದಿಂದ ಒಣಗಿ ನಾಶವಾದ ಪೈರುಗಳನ್ನೂ ಭೂಮಿಯನ್ನೂ ತಂಪಾಗಿ ಮಾಡಿ ಮತ್ತೆ ಪೈರುಗಳ ಮೊಳಕೆಯನ್ನುಂಟು ಮಾಡಿ ಲೋಕಕ್ಕೆ ಯಾವ ರೀತಿಯಾಗಿ ಪರಮಕ್ಷೇಮವನ್ನುಂಟು ಮಾಡುವುದೋ, ಹಾಗೆಯೇ ಭಗವಂತನಾದ ಶ್ರೀನಿವಾಸನ, ಮುಂದೆ ಬರುವ, ಕಲ್ಕಿ ಅವತಾರದಲ್ಲಿ ಕೈಯಲ್ಲಿ ಹಿಡಿದಿರುವ ಕತ್ತಿಯೆಂಬ ಮೇಘುವೂ ಕೂಡ ಲೋಕಕ್ಷೇಮವನ್ನುಂಟು ಮಾಡುವುದು. ಈ ಕತ್ತಿಗೆ ಭಗವಂತನ ದಯೆಯಿಂದ ನೆನೆಸುವಿಕೆಯೇ ಎಣ್ಣೆಯನ್ನು ಹಾಕುವಂತಹ ಸಂಸ್ಕಾರವೆನಿಸುವುದು. ಮೇಘುವು ನೀರನ್ನು ತುಂಬಿಕೊಂಡಂತೆಯೂ ಆಗುವುದು. ಎಣ್ಣೆಯನ್ನು ಹಾಕಿ ಸಂಸ್ಕರಿಸದಿದ್ದರೆ ಕತ್ತಿಯು ಕೆಲಸವನ್ನು ಮಾಡಲಾರದು. ಮೇಘುವು ನೀರನ್ನು ತುಂಬಿಕೊಳ್ಳದಿದ್ದರೆ ಮಳೆಯನ್ನು ಸುರಿಸಲಾರದು. ಈ ಕತ್ತಿಯೆಂಬ ಮೇಘುವು ಭಗವಂತನ ಪ್ರಬಲವಾದ ಕೈಯಿನ ಬೀಸುವಿಕೆಯಿಂದುಂಟಾದ ಗಾಳಿಯಿಂದ ಚಲಿಸುವುದು. ಪಳಪಳನೆ ಮಿಂಚುವುದರಿಂದ ಮಿಂಚುಕೋಲಿನಂತಿರುವುದು. ದಯೆಯಿಂದ ಚೆನ್ನಾಗಿ ನೆನೆದಿರುವುದರಿಂದ ಈ ಕತ್ತಿಯೆಂಬ ಮೇಘುವು ದಯೆಯೆಂಬ ಮಳೆಯನ್ನೇ ಸುರಿಸುವುದು. ಅಂದರೆ ಆ ಕತ್ತಿಯಿಂದ ಸಂಹರಿಸಲ್ಪಟ್ಟವರೆಲ್ಲರೂ ಪರಮಪುರುಷನ ದಯೆಯಿಂದ ಸದ್ಗತಿಯನ್ನೇ ಹೊಂದುವರು. ಹೆಚ್ಚು ಹೆಚ್ಚಾಗಿ ದುಷ್ಕೃತ್ಯಗಳನ್ನು ಮಾಡುವುದಕ್ಕೆ ಅವಕಾಶವನ್ನು ಕೊಡದಂತೆ ಅವರನ್ನು ಸಂಹರಿಸಿ, ಸದ್ಗತಿಯನ್ನುಂಟು ಮಾಡುವುದೆಂಬುವುದು ದಯಾಕಾರ್ಯವಲ್ಲವೇ! ಆದ್ದರಿಂದ ಆ ಕತ್ತಿಯು ದಯೆಯನ್ನು ವರ್ಷಿಸುವುದೆಂಬುದರಲ್ಲಿ ಸಂದೇಹವೇನು? ಹೀಗೆ ದಯಾವರ್ಷವುಂಟಾದ ಕೂಡಲೇ ಕಲಿಯುಗದ ಪ್ರಭಾವದಿಂದ ಉಂಟಾದ ತಾಪಗಳು ನಾಶವಾಗಿ ಮತ್ತೆ ಅತ್ಯಂತ ಧರ್ಮಮಯವಾದ ಕೃತಯುಗದ ಅಂಕುರವು ಉಂಟಾಗುವುದು. ಇದಿಷ್ಟೂ ದಯಾದೇವಿಯಿಂದುಂಟಾಗಬಹುದಾದ ಉಪಕಾರಗಳೇ, ಈ ಅವತಾರದಲ್ಲಿ ದಯಾದೇವಿಯು ಭಗವಂತನ ಕತ್ತಿಯಲ್ಲಿ ಪ್ರವೇಶಿಸಿ ಮೇಲೆ ತಿಳಿಸಿದ ಕಾರ್ಯಗಳನ್ನು ಮಾಡುತ್ತಾಳೆ.

ಹೀಗೆ ಭಗವಂತನ ಎಲ್ಲ ಅವತಾರಗಳೂ ಆಯಾಯ ಅವತಾರಗಳಲ್ಲಿ ಉಂಟಾದ ಕಾರ್ಯಗಳೂ ದಯಾಕಾರ್ಯಗಳೇ ಎಂದು ನಿರೂಪಿಸಿ, ಒಂಭತ್ತು ದಶಕಗಳಿಂದಲೂ ದಯೆಯಿಂದ ಲೋಕಕ್ಕೆ ಉಂಟಾದ ಉಪಕಾರಗಳನ್ನೂ ಆಚಾರ್ಯರು ಹಲವಾರು ರೀತಿಗಳಿಂದ ನಿರೂಪಿಸಿರುವರು.

ದಯಾಪ್ರವಾಹದಿಂದ ತಮಗೆ ಆಗಬೇಕಾದ ಉಪಕಾರವನ್ನು ಮುಂದಿನ ದಶಕದಲ್ಲಿ ಪ್ರಾರ್ಥಿಸುವರು.

ಒಂಭತ್ತನೆಯ ದಶಕವು ಮುಗಿದುದು.

ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸ ಪತ್ರಿಕೆ

ಶ್ರೀ ಶೋಭಕೃತ್ ನಾಮಸಂವತ್ಸರ ಮಾಘ - ಫಾಲ್ಗುಣ ಮಾಸ ಸಂಚಿಕೆ

ಸಂಪುಟ : 03 ಮಾರ್ಚ್ - 2024 ಸಂಚಿಕೆ : 08




ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ


**ಗೌರವ ಸಂಪಾದಕರು**
ಎ.ವಿ. ಧರ್ಮಾರೆಡ್ಡಿ, ಐ.ಡಿ.ಇ.ಎಸ್.
ಕಾರ್ಯನಿರ್ವಹಣಾಧಿಕಾರಿ, (ಎಫ್.ಎ.ಸಿ.)
ತಿ.ತಿ.ದೇ., ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ ಕೆ. ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ. ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ . ಪಿ. ರಾಮರಾಜು, ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ., ಮುದ್ರಣಾಲಯ, ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ. ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್,
ಸಹಾಯ ಛಾಯಗ್ರಹಣ, ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.



**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ಓದಬಹುದು.


## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 06 |
| ಮಹಾಶಿವರಾತ್ರಿ | -ಭೂಮನ ಕರುಣಾಕರ ರೆಡ್ಡಿ | 07 |
| ಹರಿಕಥಾಮೃತಸಾರ ಮಹಿಮೆ ಬಲು ಅಪಾರ (ವಿಭೂತಿ ಸಂಧಿ) | -ಶ್ರೀಮತಿ. ಪ್ರಿಯಾಪ್ರಾಣೇಶ ಹರಿದಾಸ | 10 |
| ಸೂರ್ಯರಶ್ಮಿ ಸ್ಪರ್ಶಿಸುವ ಮೈಸೂರಿನ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ | -ಶ್ರೀಮತಿ. ವಾರುಣಿ | 14 |
| ಆನೆಕನ್ನಂಬಾಡಿಯ ಶ್ರೀಕೇಶವ ದೇವಾಲಯ | -ಕೆಂಗೇರಿ ಚಕ್ರಪಾಣಿ | 16 |
| ಹೋಳಿಹಬ್ಬ | - ಬೆಳವಾಡಿ ಅಶ್ವತ್ಥನಾರಾಯಣ | 19 |
| ವೈದಿಕಸಂಸ್ಕೃತಿಯ ಪ್ರವರ್ತಕ ಮನು | - ಮೂರ್ತಿರಾಮನಾಥಪುರ | 23 |
| ಶ್ರೀ ವೇಂಕಟೇಶ್ವರ ಸ್ವಾಮಿ ಆಲಯ | -ದಿ॥ ಶ್ರೀನಿವಾಸನ್ ಬಿ.ಎನ್. | 24 |
| ಶ್ರೀ ವೇಂಕಟೇಶ್ವರ ಧಾರ್ಮಿಕ ಸಮ್ಮೇಳನ | - | 31 |
| ಓಂ ನಮೋ ಭಗವತೇ ರುದ್ರಾಯ | -ಹನುಮಂತ ಮ. ದೇಶಕುಲಕರ್ಣಿ | 41 |
| ಸ್ತ್ರೀ ಶಕ್ತಿಯ ವೈಜ್ಞಾನಿಕ ಹಿನ್ನೆಲೆ | -ಅನಿಲ್ ಎಸ್.ಪಿ. ರೈಕರ್ | 43 |
| ರಾಶಿ ಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ | 46 |
| ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು | - ಡಾ॥ ಅನಸೂಯ ಎಸ್. ರಾಜೀವ್ | 47 |
| ನೀತಿಕಥೆ - ಜಾಗರಣೆ ಮತ್ತು ಉಪವಾಸ | - ಎ.ಆರ್. ರಘುರಾಮ | 48 |
| ಚಿತ್ರಕಥೆ -ಕುಬೇರನ ಗರ್ವಭಂಗ | - ಶ್ರೀನಿವಾಸದೀಕ್ಷಿತರು | 52 |


ಮುಖಚಿತ್ರ - ತಿರುಮಲ ಸ್ವಾಮಿಯವರ ತೆಪ್ಪೋತ್ಸವಗಳು
ಹಿಂಬದಿಚಿತ್ರ - ಶ್ರೀ ಗೋವಿಂದರಾಜಸ್ವಾಮಿಯವರ ಪಟ್ಟಮಹಿಷಿ ಶ್ರೀ ಪುಂಡರೀಕವಲ್ಲಿ ಅಮ್ಮನವರು


ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ



| | |
|---|---|
| ಬಿಡಿ ಪ್ರತಿ | ರೂ. 20/- |
| ವಾರ್ಷಿಕ ಚಂದಾ | ರೂ. 240/- |
| ಆಜೀವ ಚಂದಾ | ರೂ. 2400/- (12 ವರ್ಷಗಳು) |
| ವಿದೇಶಿ ವಾರ್ಷಿಕ ಚಂದಾ | ರೂ. 1030/- |

# ಸಂಪಾದಕೀಯ

# ಶಕ್ತಿಯೇ ಜಗದಾಧಾರ!!

"ನ ಸ್ತ್ರೀ ರತ್ನಂ ಸಮಂ ರತ್ನಂ'' ಎಂದು ಹೇಳುತ್ತಾರೆ. ಇದರ ಅರ್ಥ, ಸ್ತ್ರೀಗೆ ಸಮಾನವಾದ ಆಭರಣವಿಲ್ಲ. ಸಮಸ್ತ ಲೋಕಗಳಿಗೆ ಆಧಾರಭೂತಳಾದವಳು ಈ ಶಕ್ತಿ! ಆ ಶಕ್ತಿಯನ್ನೇ ಆದಿಪರಾಶಕ್ತಿ ಎಂದು ಕರೆಯುತ್ತೇವೆ. ಪರಮೇಶ್ವರನೇ ತನ್ನ ಶರೀರದಲ್ಲಿನ ಅರ್ಧ ಭಾಗವನ್ನು ಆಕೆಗೆ ನೀಡಿ ಅರ್ಧನಾರೀಶ್ವರನಾದ. ಹೆಂಗಸರು ಅಬಲೆಯರಲ್ಲ ಸಬಲೆಯರು ಎಂದು ಅನೇಕ ಮಹಿಳಾಮಣಿಗಳು ನಿರೂಪಿಸಿದ್ದಾರೆ. ಭೂಮಿಯಲ್ಲಿನ ಅರ್ಧ ಭಾಗವೇ ಸ್ತ್ರೀಯಾಗಿದ್ದಾಳೆ. ಸ್ತ್ರೀಯು ದೇವರ ಅತ್ಯಂತ ಶಕ್ತಿವಂತವಾದ ಮತ್ತು ಅಂದವಾದ ಸೃಷ್ಟಿ ಎಂದು ಹೇಳಬಹುದು. ಪ್ರತಿಯೊಬ್ಬರ ಜೀವನದಲ್ಲೂ ಸ್ತ್ರೀ ಆಧಾರವಾಗಿದ್ದಾಳೆ. ಸ್ತ್ರೀ ಎನ್ನುವವಳು ಪ್ರೇಮ, ಆಪ್ಯಾಯತೆ, ವಾತ್ಸಲ್ಯ, ಶ್ರದ್ಧೆ ಶಕ್ತಿ ಮೊದಲಾದ ಪಾತ್ರವನ್ನು ಪೋಷಿಸುತ್ತಾಳೆ. ಅವುಗಳಲ್ಲಿ ಮುಖ್ಯವಾದಳು ತಾಯಿ''?

ಹಿಂದಿನ ಕಾಲದಿಂದಲೂ ಇಂದಿನ ಆಧುನಿಕ ಕಾಲದವರೆಗೂ ಸಮಾಜದ ಅಭಿವೃದ್ಧಿಯಲ್ಲಿ ಮಹಿಳೆಯ ಪಾತ್ರ ಬಹಳವಾಗಿಯೇ ಇದೆ ಎನ್ನುವುದರಲ್ಲಿ ಅತಿಶಯೋಕ್ತಿಯಿಲ್ಲ. ಲೋಪಾಮುದ್ರೆ, ಯಮಿ, ಘೋಷ, ಅವಪಾತ ಮೊದಲಾದ ಋಷಿಮಣಿಯರು ವೇದಗಳಲ್ಲಿ ಋಕ್ಕುಗಳಿಗೆ ಭಾಷ್ಯಗಳನ್ನು ಬರೆದರು. ಮೈತ್ರೇಯಿ, ಗಾರ್ಗೇಯಿ, ವಾಚಕ್ನವಿ ಮೊದಲಾದವರು ವೇದಪಂಡಿತರಾಗಿ ಚರ್ಚೆಗಳಲ್ಲಿ ಪಾಲ್ಗೊಂಡರು. ರಾಮಾಯಣದಲ್ಲಿ ಕೈಕೇಯಿಯು ದಶರಥನಿಗೆ ಯುದ್ಧದಲ್ಲಿ ಸಹಾಯ ಮಾಡಿದಳೆಂದು ಎಲ್ಲರಿಗೂ ತಿಳಿದಿರುವ ವಿಷಯವೇ ಆಗಿದೆ! ನರಕಾಸುರನ ವಧೆಯಲ್ಲಿ ಸತ್ಯಭಾಮೆಯ ಪಾತ್ರ ಎಷ್ಟು ಮುಖ್ಯವಾಗಿತ್ತೆಂದು ಬಿಡಿಸಿ ಹೇಳಬೇಕಾಗಿಲ್ಲ. ಆಂಧ್ರ ಪ್ರಾಂತವನ್ನು ಆಳಿದ ಶಾತವಾಹನರ ಕಾಲದಲ್ಲಿ ಗೌತಮೀ ಪುತ್ರ ಶಾತಕರ್ಣಿ, ವಾಸಿಷ್ಠೀ ಪುತ್ರ ಪುಲೋಮಾವಿ ಅವರುಗಳ ತಾಯಿಯರಿಗೆ ಬಹಳವೇ ಮಹತ್ವವನ್ನು ನೀಡಿದ್ದರು. ಕಾಕತೀಯರ ಚರಿತ್ರೆಯನ್ನು ನೋಡಿದಾಗ, ಅವರ ಹೆಗ್ಗಳಿಕೆಯನ್ನು ಇಮ್ಮಡಿಗೊಳಿಸಿದ ರಾಣಿರುದ್ರಮದೇವಿ ಶೌರ್ಯಕ್ಕೆ ಪ್ರತೀಕವಾಗಿ ನಿಂತಿದ್ದಾಳೆ. ಸಾಹಿತ್ಯದಲ್ಲಿ ಹೆಸರುವಾಸಿಯಾಗಿದ್ದ, ರಾಮಾಯಣವನ್ನು ತೆಲುಗಿನಲ್ಲಿ ಅನುವಾದ ಮಾಡಿದ ಮೊಲ್ಲ, ಮಧುರಾವಿಜಯವನ್ನು ಬರೆದ ಗಂಗಾದೇವಿ, ಸುಭದ್ರಾ ಕಲ್ಯಾಣವನ್ನು ಬರೆದ ತಾಳ್ಳಪಾಕ ತಿಮ್ಮಕ್ಕ, ವೆಂಕಟಾಚಲ ಮಹಾತ್ಮೆಯನ್ನು ಬರೆದ ತರಿಗೊಂಡ ವೆಂಗಮಾಂಬ, ಮೊದಲಾದ ಮಹಿಳೆಯರು ಅನೇಕರನ್ನು ನಾವು ಸಾಹಿತ್ಯದ ಜಗತ್ತಿನಲ್ಲಿ ಪ್ರಸಿದ್ಧಿಯಾದವರನ್ನು ನೋಡಬಹುದಾಗಿದೆ.

ಕರ್ನಾಟಕದಲ್ಲಿ ಮನೆಮಾತಾಗಿರುವ ಕಿತ್ತೂರುರಾಣಿ ಚೆನ್ನಮ್ಮ ಚಿತ್ರದುರ್ಗದ ವನಕೆ ಓಬವ್ವ ಹಾಗೂ ಆಧುನಿಕ ಕಾಲದಲ್ಲಿ **"ಮಾನವ ಗಣಕ ಯಂತ್ರ"** ವೆಂದೇ ಹೆಸರು ಪಡೆದಿದ್ದ ಶಕುಂತಲಾ ದೇವಿ, ದಾಸಸಾಹಿತ್ಯದಲ್ಲಿ ತಮ್ಮದೇ ಛಾಪು ಮೂಡಿಸಿದ್ದ ಹೆಳವನಕಟ್ಟೆ ಗಿರಿಯಮ್ಮ, ವಚನಗಳನ್ನು ತಮ್ಮದೇ ಶೈಲಿಯಲ್ಲಿ ರಚಿಸಿ ಜನರಲ್ಲಿ ಜಾಗೃತಿ ಮೂಡಿಸಿದ್ದ ಅಕ್ಕಮಹಾದೇವಿ ಹೀಗೆ ಹತ್ತು ಹಲವಾರು ಮಹಿಳಾಮಣಿಗಳನ್ನು ನಾವು ಆದರ್ಶವಾಗಿ ತೆಗೆದುಕೊಳ್ಳಬಹುದು. ವಿದ್ಯೆ ಸ್ವಾವಲಂಬನೆ ಮಹಿಳಾ ಸಾಧಿಕಾರತೆಗೆ ಆಧಾರ ಸ್ತಂಭಗಳಾಗಿವೆ. ಪ್ರತಿಯೊಬ್ಬ ಮಹಿಳೆಯೂ ವಿದ್ಯಾಭ್ಯಾಸ ಮಾಡಿದಾಗಲೇ ಇತರರ ಮೇಲೆ ಆಧಾರಗೊಳ್ಳುವುದನ್ನು ಬಿಟ್ಟು ಸ್ವತಂತ್ರವಾಗಿ ಬದುಕಲು ಸಾಧ್ಯವಾಗುತ್ತದೆ. ಅದಕ್ಕೇ ಪ್ರತಿವರ್ಷವೂ ಮಾರ್ಚ್ 8 ರಂದು ಮಹಿಳಾ ದಿನಾಚರಣೆಯನ್ನು ಆಚರಿಸುತ್ತೇವೆ.

ಇನ್ನು ಸಕಲ ಸಂಪತ್ತುಗಳಿಗೆ ಅಧಿದೇವತೆಯಾದ ಶ್ರೀ ಮಹಾಲಕ್ಷ್ಮೀದೇವಿಯನ್ನು ಪೂಜಿಸಿದರೆ ಅಷ್ಟೈಶ್ವರ್ಯಗಳು ಪ್ರಾಪ್ತಿಯಾಗುತ್ತವೆ. ನಿತ್ಯಸತ್ಯ ಸ್ವರೂಪಿಣಿಯಾದ ಆ ತಾಯಿಯ ಅನುಗ್ರಹದಿಂದಲೇ ನಾವು ಶಾಶ್ವತವಾದ ಆನಂದವನ್ನು ಪಡೆಯಲು ಸಾಧ್ಯವಾಗುತ್ತದೆ. ಆ ಜಗನ್ಮಾತೆಯು ಹುಟ್ಟಿದ ದಿನ ಫಾಲ್ಗುಣ ಹುಣ್ಣಿಮೆ ಸರ್ವಸಾಕ್ಷಿಯಾದ ಈ ಭಗವದ್ದರ್ಶನದ ಶಕ್ತಿಯನ್ನು ಲಕ್ಷ್ಮೀದೇವಿಯೆಂದು ಉಪಾಸನೆ ಮಾಡುವುದು. ಈ ಲಕ್ಷ್ಮೀದೇವಿಯ ಪೂಜೆಯಲ್ಲಿ ಪ್ರತ್ಯೇಕತೆ. ಎಲ್ಲರೂ ಆನಂದವನ್ನು ಐಶ್ವರ್ಯವನ್ನು ಜ್ಞಾನವನ್ನು ಆಧಾರವಾಗಿಟ್ಟುಕೊಂಡು ಜೀವನವನ್ನು ನಡೆಸುತ್ತಾರೆ. ಹೀಗೆ ಎಲ್ಲರಿಗೂ ಲಕ್ಷ್ಯವಾದ ಜ್ಞಾನ, ಆನಂದ, ಐಶ್ವರ್ಯಗಳ ಸಾಕಾರರೂಪವೇ ಲಕ್ಷ್ಮೀದೇವಿ, ಆ ಮಹಾಲಕ್ಷ್ಮೀಯನ್ನು ಪೂಜಿಸುವುದು ಎಲ್ಲರ ಕರ್ತವ್ಯವಾಗಿದೆ.

ಅದೇ ರೀತಿ ಜ್ಞಾನಾನಂದವೆನ್ನುವುದು ಬ್ರಹ್ಮಸ್ವರೂಪ, ಏಕರೂಪ, ಅಖಂಡ ಜ್ಯೋತಿರ್ಮಯ ರೂಪ, ಆದಿ, ಅಂತ್ಯ ರಹಿತವಾದದ್ದು. ತ್ರಿಕಾಲಾತೀತವಾದುದು, ಅದು ಅಚಲವಾದುದು, ನಿರಂಜನ, ಕಾಲಕ್ಕೆ ಸರಿಯಾದ ಅಳತೆ ಇಲ್ಲವೆಂದರೆ ಕಾಲಾತೀತ ಜ್ಞಾನದ ಆದಿ ಅಂತ್ಯಗಳನ್ನು ಅರ್ಥ ಮಾಡಿಕೊಳ್ಳುವುದು ಅರ್ಥರಹಿತವಾದುದು. ಲಿಂಗರೂಪವನ್ನು ಅಳೆಯಬೇಕೆಂದುಕೊಂಡ ಬ್ರಹ್ಮ ವಿಷ್ಣುವಿನ ಕಥೆ ಈ ವಿಷಯವನ್ನೇ ತಿಳಿಸುತ್ತಿದೆ. ಶಿವ ತತ್ವವೂ ಕೂಡಾ ನಮಗೆ, ಮಹಾಚೈತನ್ಯದಲ್ಲಿನ ಭಾಗವೇ ಈ ಸ್ಥೂಲಸಂಸಾರಿಕ ರೂಪವೆಂದು ತಿಳಿಸುತ್ತಿದೆ. ಪೂರ್ಣಕಾಮನಾದ ಮಾನವನೇ ಪರಮೇಶ್ವರನಿಗೆ ಪ್ರೀತಿಪಾತ್ರನಾದವನು. ಈ ರೀತಿ ಅನೇಕ ಅರ್ಥಗಳೂ, ಅನೇಕ ದೇವತೆಗಳ ಬಗೆಗೆ ಇನ್ನೂ ಹೆಚ್ಚು ಹೆಚ್ಚು ತಿಳಿದುಕೊಳ್ಳಬಹುದು. ಮಹರ್ಷಿಗಳ ಹೃದಯವೇ ಇಂದು ಮಹಾಕ್ಷೀರಸಾಗರದಂತದ್ದು . ಅದರಲ್ಲಿ ಭಕ್ತಿ ಕುಸುಮಗಳನ್ನು ಅರ್ಪಿಸಿ, ಮಥನ ಮಾಡಿದರೆ, ಕೊನೆಗೆ ಅಮೃತವು ಉದಯಿಸದೇ ವಿಧಿಯಿಲ್ಲ. ಈ ಮಾಸದಲ್ಲಿ ಬರುವ ಮಹಾಶಿವರಾತ್ರಿ ಪರ್ವದಿನದಂದು ಆ ಆದಿ ದಂಪತಿಗಳನ್ನು ಸ್ಮರಿಸಿ ಧನ್ಯರಾಗೋಣ !!


**ಲೋಕಾಃ ಸಮಸ್ತಾಸ್ಸುಖಿನೋ ಭವಂತು !!**

# ಮಹಾ ಶಿವರಾತ್ರಿ




ತಿರುಪತಿ ಒಂದು ಮಹಾ ಪುಣ್ಯಕ್ಷೇತ್ರ. ಅಗಣಿತ ಮಹಿಮೆಗಳ ನಿಲಯ, ಪಾಪವಿನಾಶಿನಿ. ತಿರುಪತಿಯನ್ನು ಕಲಿಯುಗ ವೈಕುಂಠವೆಂದು ಪುರಾಣಗಳು ಸಾರುತ್ತವೆ. ಪ್ರಸ್ತುತದಲ್ಲಿ ಬೆಟ್ಟದ ಮೇಲಿನ ಭಾಗವನ್ನು ತಿರುಮಲೆಯೆಂದು, ಬೆಟ್ಟದ ಕೆಳಗಿರುವ ನಗರವನ್ನು ತಿರುಪತಿ ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆದಿವೆ. ಆದರೆ ಪೂರ್ವದಲ್ಲಿ ಮೇಲಿನ ಮತ್ತು ಕೆಳಗಿನ ಎರಡು ಪ್ರಾಂತಗಳನ್ನು ತಿರುಪತಿ ಕ್ಷೇತ್ರವೆಂದೇ ಸಂಪ್ರದಾಯಜ್ಞರು ಭಾವಿಸುತ್ತಿದ್ದರು.

ಈ ತಿರುಪತಿ ಕ್ಷೇತ್ರದಲ್ಲಿ ಹರಿಹರ ಎಂಬ ಭೇದ ಇಲ್ಲ. ಬೆಟ್ಟದ ಕೆಳಗಿನ ಪ್ರಾಂತದಲ್ಲಿ ಕಪಿಲತೀರ್ಥ ಸರೋವರ ತೀರದಲ್ಲಿ ಕಾಮಾಕ್ಷಿ ಸಮೇತನಾದ ಶ್ರೀ ಕಪಿಲೇಶ್ವರನ ದಿವ್ಯ ಸನ್ನಿಧಿ ಇದೆ. ಇದು ಬೆಟ್ಟ ಹತ್ತುವಾಗ ಕಾಣಸಿಗುವ ಮೊದಲನೇ ದೇವಾಲಯ. ಆದ್ದರಿಂದಲೇ ಶ್ರೀವೆಂಕಟೇಶ್ವರನ ಸಹಸ್ರನಾಮದಲ್ಲಿ "ಉಪತ್ಯಕಾ ಪ್ರದೇಶಸ್ಥ ಶಂಕರ ಧ್ಯಾತ ಮೂರ್ತಯೇ ನಮಃ" (ಅಂದರೆ ಬೆಟ್ಟ ಹತ್ತುವ ಪ್ರದೇಶದಲ್ಲಿರುವ ಶಿವನನ್ನು ಧ್ಯಾನಿಸಿದ ಮಹಿಮಾನ್ವಿತ) ಎಂಬ ನಾಮವು ಸಹಸ್ರನಾಮದಲ್ಲಿ ಒಂದಾಗಿದೆ. ಈ ಸಂದರ್ಭದಲ್ಲಿ ಸ್ಮರಿಸಬೇಕಾದ ಮುಖ್ಯ ಅಂಶವೆಂದರೆ ವೇಂಕಟಾಚಲಮಹಾತ್ಮ್ಯೆಯಲ್ಲಿ ಶ್ರೀನಿವಾಸನು ತನ್ನ ಕಲ್ಯಾಣಕ್ಕಾಗಿ ವಕುಳ ಮಾತೆಯನ್ನು ಆಕಾಶರಾಜನ ಹತ್ತಿರ ಮಾತುಕತೆಗೆ ಕಳುಹಿಸಿರುವುದು. ಆ ಸಮಯದಲ್ಲಿ ಶ್ರೀನಿವಾಸನು ವಕುಳಮಾತೆಯೊಂದಿಗೆ "ಬಾಲಕನಾದ ಶ್ರೀನಿವಾಸನು ಕಾಮಾಕ್ಷಿ ವರದರಾಜರ ಆಶೀರ್ವಾದವನ್ನು ಕೋರುತ್ತಿದ್ದಾನೆ ಎಂದು ತಿಳಿಸು" ಎಂದನು. ವಕುಳಮಾತೆಯು ಶ್ರೀನಿವಾಸನ ಆಜ್ಞೆಯನ್ನು ಪಾಲಿಸಲು ಆಕಾಶರಾಜ ನೆಲೆಸಿದ್ದ ನಾರಾಯಣ ವನಕ್ಕೆ ತೆರಳಿ ಶ್ರೀನಿವಾಸ ಕಲ್ಯಾಣಕ್ಕೆ ಶ್ರೀಕಾರವನ್ನು ಹಾಕಿದಳು. ಶಿವನು ಜ್ಞಾನಪ್ರದಾತ. ಶ್ರೀಹರಿಯು ಮೋಕ್ಷಪ್ರದಾತ. ಮೋಕ್ಷವನ್ನು ಹೊಂದಲು ಜ್ಞಾನವೇ ಅವಶ್ಯಕವಲ್ಲವೇ.



– ಮೂಲ. ಭೂಮನ ಕರುಣಾಕರ ರೆಡ್ಡಿ
ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು



ಸಾಮಾನ್ಯವಾಗಿ ಶಿವಾಲಯದಲ್ಲಿ ವಿಷ್ಣುವು,ವಿಷ್ಣುವಿನಾಲಯದಲ್ಲಿ ಶಿವನು ಕ್ಷೇತ್ರಪಾಲಕರಾಗಿರುವುದು ತಿಳಿದ ಅಂಶವೇ ತಿರುಮಲೆ ಶ್ರೀ ವೈಷ್ಣವಾಲಯದ ಕ್ಷೇತ್ರಪಾಲಕ ರುದ್ರನು. ತಿರುಮಲೆಯಲ್ಲಿ ಮಹಾಶಿವರಾತ್ರಿಯನ್ನು ಕ್ಷೇತ್ರಪಾಲಕೋತ್ಸವ ಎಂದು ಆಚರಿಸುತ್ತಾರೆ.

ಸ್ವಾಮಿಯವರ ಆಲಯದಿಂದ ಆಗ್ನೇಯ ಮೂಲೆಯಲ್ಲಿ ಎರಡು ಕಿಲೋಮೀಟರ್ ದೂರದಲ್ಲಿರುವ ಗೋಗರ್ಭ ತೀರ್ಥದ ತೀರದಲ್ಲಿ ಕ್ಷೇತ್ರಪಾಲಕನು ರುದ್ರನು ವಿರಾಜಮಾನನಾಗಿದ್ದಾನೆ. ಪ್ರತಿ ಮಹಾಶಿವರಾತ್ರಿಯಂದು ಆ ಕ್ಷೇತ್ರಪಾಲಕನಿಗೆ ನಮಕ ಚಮಕಗಳಿಂದ ಅಭಿಷೇಕಾದಿಗಳನ್ನು ನಡೆಸುವುದು ಅನಾದಿ ಕಾಲದಿಂದ ಬಂದಿರುವ ಸಂಪ್ರದಾಯ.

ಮಾಘ ಬಹುಳ ಚತುರ್ದಶಿಯಂದು ಅರ್ಧರಾತ್ರಿ ಸಮಯದಲ್ಲಿ ಮಹಾಶಿವರಾತ್ರಿ ಹಬ್ಬವನ್ನು ಆಚರಿಸಲಾಗುತ್ತದೆ. ಲಿಂಗ ಮಹಾಪುರಾಣದಲ್ಲಿ ಮಹಾಶಿವರಾತ್ರಿ ವ್ರತವನ್ನು ವಿವರಿಸಲಾಗಿದೆ. ಸ್ಕಾಂದ ಪುರಾಣಾಂತರ್ಗತ ಬ್ರಹ್ಮೋತ್ತರ ಖಂಡದಲ್ಲಿ ಲಿಂಗ ಕಾರಣದಲ್ಲಿ ಶಿವರಾತ್ರಿ ಮಹಿಮೆಯನ್ನು ತಿಳಿಸುವ ಮುಖ್ಯವಾದ ಕಥೆ ಇದೆ.

ಇದನ್ನು ಶಿವರಾತ್ರಿ ವ್ರತವನ್ನು ಆಚರಿಸುವ ಭಕ್ತರು ಭಕ್ತಿ,ಶ್ರದ್ಧೆಗಳಿಂದ ಶ್ರವಣ ಮಾಡುತ್ತಾರೆ. ಶಿವಲಿಂಗವು ಸಾಕಾರ, ನಿರಾಕಾರ ಪೂಜಾವಿಧಿಗಳಿಗೆ ಸಮನ್ವಯ ಸ್ವರೂಪವಾಗಿದೆ. ಶಿವರಾತ್ರಿಯಂದು ಶಿವಲಿಂಗ ಆರಾಧನೆಯೇ ಪ್ರಧಾನ.ಅನಾದಿ ಕಾಲದಿಂದಲೂ ಉಪವಾಸ,ಜಾಗರಣೆಗಳಿಂದ ರಾತ್ರಿಯ ವೇಳೆ ನಾಲ್ಕು ಯಾಮಗಳಲ್ಲಿಯೂ ಶಿವನ ಅಭಿಷೇಕ, ಪೂಜೆ ಮಾಡುವುದರಿಂದ ಪಾಪಗಳು ಪರಿಹಾರವಾಗುತ್ತವೆ.

ಶಿವನು ಸೃಷ್ಟಿಯ ಮೂಲ, ಮಾಘ ಬಹುಳ ಚತುರ್ದಶಿ ಎಂದು ಅರ್ಧರಾತ್ರಿಯಲ್ಲಿ ಬ್ರಹ್ಮ, ವಿಷ್ಣುಗಳ ಕಲಹವನ್ನು ಅಂತ್ಯಗೊಳಿಸಲು ಶಿವನು ಅಗ್ನಿಲಿಂಗ ರೂಪದಲ್ಲಿ ಪ್ರಥಮ ಬಾರಿಗೆ ಅವಿರ್ಭವಿಸಿದನು. ಆದ್ದರಿಂದ ಆ ದಿನವನ್ನು ಮಹಾಶಿವರಾತ್ರಿಯಾಗಿ ಆಚರಿಸಲಾಗುತ್ತದೆ. ಆದರೆ ಈ ಶಿವರಾತ್ರಿಗಳನ್ನು 5 ವಿಧಗಳಾಗಿ ಪುರಾಣಜ್ಞರು ವರ್ಗೀಕರಿಸಿದ್ದಾರೆ.

**1. ನಿತ್ಯ ಶಿವರಾತ್ರಿ :** ಪ್ರತಿನಿತ್ಯ ಶಿವಾರಾಧನೆಗೆ ಸಂಕಲ್ಪಿಸುವುದು, ಪೂಜಿಸುವುದು, ರಾತ್ರಿ ಶಿವಸ್ಮರಣೆಯೊಂದಿಗೆ ನಿದ್ರಿಸುವುದು.

**2. ಪಕ್ಷ ಶಿವರಾತ್ರಿ :** ಪ್ರತಿ ಶುಕ್ಲ,ಕೃಷ್ಣ ಪಕ್ಷಗಳಲ್ಲಿ ಬರುವ ಚತುರ್ದಶಿ ರಾತ್ರಿಯಲ್ಲಿ ಶಿವಾರಾಧನೆಗೆ ಸಂಕಲ್ಪಿಸುವುದು, ಪೂಜಿಸುವುದು, ರಾತ್ರಿ ಶಿವ ಸ್ಮರಣೆಯೊಂದಿಗೆ ನಿದ್ರಿಸುವುದು.


**3. ಮಾಸ ಶಿವರಾತ್ರಿ:** ಪ್ರತಿ ಮಾಸ ಕೃಷ್ಣ ಪಕ್ಷದಲ್ಲಿ ಬರುವ ಚತುರ್ದಶಿ ರಾತ್ರಿಯಲ್ಲಿ ಶಿವಾರಾಧನೆಗೆ ಸಂಕಲ್ಪಿಸುವುದು, ಪೂಜಿಸುವುದು, ರಾತ್ರಿ ಶಿವ ಸ್ಮರಣೆಯೊಂದಿಗೆ ನಿದ್ರಿಸುವುದು.

**4. ಮಹಾಶಿವರಾತ್ರಿ :** ಮಾಘಮಾಸ ಬಹುಳ ಚತುರ್ದಶಿಯಂದು ಪುರಾಣಗಳು ತಿಳಿಸಿರುವಂತೆ ಶಿವ ಪೂಜಾವಿಧಿಯನ್ನು ನಿರ್ವಹಿಸುವುದು.

**5. ಯೋಗ ಶಿವರಾತ್ರಿ :** ಜ್ಞಾನಿಯು ತನ್ನ ಚಿತ್ತವನ್ನು ಪರಮ ಶಿವನಲ್ಲಿ ಇರಿಸಿ,ಲೌಕಿಕವಾದ ಪ್ರಪಂಚವನ್ನು ವಿಸ್ಮರಿಸಿ ಜೀವಿಸುವುದು. ಹೀಗೆ ಶಿವರಾತ್ರಿಯಂದು ಅವರವರ ಶಿವಭಕ್ತಿಗನುಸಾರ ಮಾನವ ಜನ್ಮವನ್ನು ಸಾರ್ಥಕಗೊಳಿಸಿಕೊಳ್ಳಬೇಕೆಂದು ಮಹರ್ಷಿಗಳು ಉಪದೇಶಿಸಿದ್ದಾರೆ.

ಈ ಐದು ಶಿವರಾತ್ರಿಗಳಲ್ಲಿ ಮಹಾಶಿವರಾತ್ರಿಯನ್ನು ಭಾರತೀಯರೆಲ್ಲರೂ ವಿವಿಧ ವಿಧಾನಗಳಲ್ಲಿ ಶಿವ ಆರಾಧನೆಯನ್ನು ಆಚರಿಸುತ್ತಾರೆ. ಶಿವನಿಗೆ ಪ್ರಿಯ ವಸ್ತುಗಳಾದ ರುದ್ರಾಕ್ಷಿಗಳು,ಭಸ್ಮ ಮತ್ತು ಪಂಚಾ ಬಿಲ್ವಗಳಲ್ಲಿ ಒಂದಾದ (ತುಳಸಿ ಬಿಲ್ವ,ಪತ್ರೆ, ಇಂದ್ರಾಣಿ, ಉತ್ತರೇಣು, ಬೇಲದ ಎಲೆ) ಬಿಲ್ವ ಪತ್ರೆಗಳನ್ನು ಬಳಸುತ್ತಾರೆ. ಬಿಲ್ವ ಪತ್ರೆಯ ಸ್ಪರ್ಶ,ವಾಸನೆ ಆರೋಗ್ಯಕ್ಕೆ ಒಳ್ಳೆಯದು. ಅದಲ್ಲದೇ, ಬಿಲ್ವಪತ್ರೆರಸ,ಕಷಾಯಗಳು-ಉಷ್ಣಶಮನ, ಪೈತ್ಯಶಮನ ಹಾಗೂ ಉಬ್ಬಸವನ್ನು, ಮಧುಮೇಹವನ್ನು, ರಕ್ತದೊತ್ತಡವನ್ನು

ಕಡಿಮೆ ಮಾಡುವ ಔಷಧಿಯ ಗುಣವುಳ್ಳದ್ದೆಂದು ಹಿರಿಯರು ಹೇಳಿದ್ದಾರೆ. ಪುರಾಣಗಳು ಶಿವ ಪೂಜೆ ಮಹಿಮೆಯನ್ನು ವಿಸ್ತಾರ ವಾಗಿ ಪ್ರಬೋಧಿಸುತ್ತವೆ. ಮಾನವ ಜನ್ಮವನ್ನು ನೀಡಿರುವು ದಕ್ಕಾಗಿ ಕೃತಜ್ಞತೆಯನ್ನು ಅರ್ಪಿ ಸಲು ಜೀವಿತಾವಧಿಯಲ್ಲಿ ಒಂದು ಸಾರಿಯಾದರೂ ಶಿವರಾತ್ರಿ ವ್ರತ ವನ್ನು ಆಚರಿಸಬೇಕೆಂದು ಸಾರುವ ನಾಣ್ಣುಡಿಯೇ "ಜನ್ಮ ಕ್ಕೊಂದು ಶಿವರಾತ್ರಿ". ಈ ಶಿವ ರಾತ್ರಿಯಂದು ದ್ವಾದಶ ಜ್ಯೋತಿ ರ್ಲಿಂಗ ಕ್ಷೇತ್ರಗಳನ್ನು ದರ್ಶಿಸು ವುದು ಅಥವಾ ಕಾಶಿ, ಶ್ರೀಶೈಲ, ಶ್ರೀಕಾಳಹಸ್ತಿಯಂತಹ ಯಾವುದೋ ಒಂದು ಮಹಾಕ್ಷೇತ್ರವನ್ನು ದರ್ಶಿ ಸುವುದು ಕೂಡ ನಿರಂತರ



ವಾಗಿ ನಡೆದು ಬಂದಿರುವ ಭಾರತೀಯ ಸಂಪ್ರದಾಯವಾ ಗಿದೆ. ನಮ್ಮ ಅಖಂಡ ಭಾರತ ದೇಶದಲ್ಲಿ ವಿವಿಧ ಆಚರಣೆಗಳು, ವೇಷ ಭೂಷಣಗಳು, ಮಂತ್ರೋ ಚ್ಚಾರಣೆಗಳಿಂದ ಜೀವಂತವಾ ಗಿರುವ ಇಂತಹ ಮಹಾ ಹಬ್ಬ ಗಳು, ಭಾರತೀಯರಲ್ಲಿ ಒಂದು ಏಕಾತ್ಮತೆಯನ್ನು ತರುತ್ತವೆ. ಅನಂತ ಕಾಲ ಪ್ರವಾಹದಲ್ಲಿ ಶಿವ ರಾತ್ರಿಯನ್ನು ಒಂದು ಮಹಾ ಹಬ್ಬವಾಗಿ ಆಚರಿಸಲ್ಪಡುತ್ತಿದೆ. ಇಂತಹ ಶಿವರಾತ್ರಿಯಂದು ನಮ್ಮ ಪೂರ್ವಿಕರು ಆಚರಿಸು ತ್ತಿದ್ದ ಶಿವರಾಧನಾ ಸಂಪ್ರದಾಯ ವನ್ನು ಮುಂದುವರೆಸೋಣ, ಪಾವನರಾಗೋಣ.

**ಅನುವಾದ: ಎಸ್. ವಸಂತ ಮಾಧವ**

## ತಿರುಪತಿಯಲ್ಲಿ ದರ್ಶನೀಯ ಆಲಯಗಳು

**ಶ್ರೀ ಗೋವಿಂದರಾಜಸ್ವಾಮಿ ಆಲಯ:** ಇತಿಹಾಸದ ಪ್ರಕಾರ ಈ ಕ್ಷೇತ್ರವನ್ನು ಶ್ರೀವೈಷ್ಣವಾಚಾರ್ಯರಾದ ರಾಮಾನುಜರು ಪ್ರತಿಷ್ಠಿಸಿದರೆಂದು ಪ್ರತೀತಿ. ಗೋವಿಂದರಾಜ ಸ್ವಾಮಿ ಆದಿಶೇಷನಮೇಲೆ ಶಯನಭಂಗಿಯಲ್ಲಿ ದರ್ಶನ ಕೊಡುತ್ತಾರೆ. ಆಂಡಾಳ್, ಪಾರ್ಥಸಾರಥಿ ಮತ್ತು ವೆಂಕಟೇಶ್ವರಸ್ವಾಮಿ ಗುಡಿಗಳು ಗೋವಿಂದರಾಜಸ್ವಾಮಿ ಆಲಯ ಪ್ರಾಂಗಣದಲ್ಲಿವೆ. ವಿಜಯನಗರ ರಾಜರ ಶಿಲ್ಪಕಳಾಚಾತುರ್ಯಕ್ಕೆ ಪ್ರಸಿದ್ಧಿಯಾಗಿದೆ ಈ ಆಲಯ.

ದೂರವಾಣಿ ಸಂಖ್ಯೆ: 0877-2264592.

**ಶ್ರೀ ಕೋದಂಡರಾಮಸ್ವಾಮಿ ಆಲಯ:** ತಿರುಪತಿ ರೈಲ್ವೇನಿಲ್ದಾಣದಿಂದ ಒಂದು ಕಿಲೋಮೀಟರು ದೂರದಲ್ಲಿರುವ ಈ ಆಲಯದಲ್ಲಿ ಕೋದಂಡ ರಾಮಸ್ವಾಮಿ ನೆಲೆಸಿದ್ದಾನೆ. ರಾವಣ ಸಂಹಾರದ ನಂತರ ಸೀತಾಲಕ್ಷ್ಮಣರೊಡನೆ ಶ್ರೀರಾಮನು ಈ ಸ್ಥಳದಲ್ಲಿ ಕೆಲವು ಕ್ಷಣ ಇದ್ದನೆನಪಿಗಾಗಿ ಈ ಆಲಯ ನಿರ್ಮಿಸ ಲಾಗಿದೆ.

ದೂರವಾಣಿ ಸಂಖ್ಯೆ- 0877-2264584

**ಶ್ರೀ ಕಪಿಲೇಶ್ವರಸ್ವಾಮಿ ಆಲಯ:** ತಿರುಪತಿ ಪಟ್ಟಣಕ್ಕೆ 3 ಕಿ.ಮೀ ದೂರದಲ್ಲಿ ಪ್ರಸಿದ್ಧಶೈವಕ್ಷೇತ್ರವಿದೆ. ಕಪಿಲ ಮಹರ್ಷಿ ಪೂಜಿಸಿದ ಶಿವಲಿಂಗವಾದುದರಿಂದ ಕಪಿಲೇಶ್ವರ ನೆಂದು ಇಲ್ಲಿರುವ ತೀರ್ಥ ಕಪಿಲತೀರ್ಥ ಎಂದು ಕರೆಯಲಾಗಿದೆ.

ದೂರವಾಣಿ ಸಂಖ್ಯೆ- 0877-2264587

**ಅಲಮೇಲು ಮಂಗಾಪುರ (ತಿರುಚಾನೂರು):**


ತಿರುಪತಿಗೆ 5 ಕಿ.ಮೀ. ದೂರದಲ್ಲಿರುವ ಪ್ರಾಚೀನವಾದ ಕ್ಷೇತ್ರ ತಿರುಚಾನೂರು. ಇದನ್ನೇ ಅಲಮೇಲುಮಂಗಾಪುರವೆಂದು ಕರೆಯುತ್ತಾರೆ. ಶ್ರೀ ವೆಂಕಟೇಶ್ವರಸ್ವಾಮಿಯ ಪತ್ನಿಯಾದ ಶ್ರೀ ಪದ್ಮಾವತಿ ಅಮ್ಮನವರಿಗೆ ಇಲ್ಲಿ ಪೂಜೆ ನಡೆಯುತ್ತಿವೆ. ತಿರುಮಲೆಗೆ ಬಂದ ಯಾತ್ರಿಕರು ತಿರುಚಾನೂರು ಅಮ್ಮನವರನ್ನು ದರ್ಶಿಸಿದರೆ ತಮ್ಮ ಯಾತ್ರೆ ಫಲವಂತವಾಗುತ್ತದೆಯೆಂದು ಪ್ರಸಿದ್ಧಿ. ಕಾರಣ ತಿರುಮಲೆಯ ಯಾತ್ರಿಕರು, ತಿರುಚಾನೂರುಗೆ ಹೋಗಿ ಶ್ರೀ ಪದ್ಮಾವತಿಯನ್ನು ಪೂಜಿಸುತ್ತಾರೆ. ತಿರುಚಾನೂರಿನಲ್ಲಿರುವ ಪವಿತ್ರ ಪುಷ್ಕರಿಣಿ "ಪದ್ಮಸರೋವರ" ದಲ್ಲಿ ಶ್ರೀ ಪದ್ಮಾವತಿ ಅಮ್ಮನವರು ಆವಿರ್ಭವಿಸಿದಳೆಂದು ಸ್ಥಳ ಪುರಾಣ.

ದೂರವಾಣಿ ಸಂಖ್ಯೆ- 0877-2264586.

# ಹರಿಕಥಾಮೃತ ಸಾರ ಮಹಿಮೆ ಬಲು ಅಪಾರ

## (ವಿಭೂತಿ ಸಂಧಿ)

- ಶ್ರೀಮತಿ. ಪ್ರಿಯಾಪ್ರಾಣೇಶ ಹರಿದಾಸ
80504 36752



ಹರಿಕಥಾಮೃತಸಾರ ಓದಿದಷ್ಟು ಹೊಸ ಹೊಸ ಚಿಂತನೆಗೆ ದಾರಿ ಮಾಡಿಕೊಡುತ್ತದೆ. ಹೀಗಾಗಿ ಇದು ನಿತ್ಯ ನೂತನ, ಹರಿಕಥಾಮೃತಸಾರದಲ್ಲಿ ಎಲ್ಲ ದೇವರಗಳ ಗುಣ ಗಳನ್ನು ಮಂಗಳಾಚರಣ ಸಂಧಿಯಲ್ಲಿ ಕೇಳಿದ್ದೀರಿ ಹಾಗೇ ಶ್ರೀ ಹರಿಯ ಕಾರುಣ್ಯವನ್ನು ಕರುಣಾಸಂಧಿಯಲ್ಲಿ ಮತ್ತು ಅಣು ತೃಣಾದಿಗಳಲ್ಲಿನ ಸರ್ವ ವ್ಯಾಪ್ತತೆಯ ಬಗ್ಗೆ ವ್ಯಾಪ್ತಿ ಸಂಧಿಯಲ್ಲಿ ಬಂದಿದೆ. ಇನ್ನು ನಾವು ನಿತ್ಯ ಸೇವಿಸುವ ಆಹಾರದ ಚಿಂತನೆ ಯಲ್ಲಿ ಭಗವದ್ರೂಪಗಳ ಚಿಂತನೆ ತಿಳಿಸಿದ್ದಾರೆ.

**ಇನ್ನು ವಿಭೂತಿ ಸಂಧಿ ಓದಿ....**


"ವಿಭೂತಿ"ಎಂದರೆ ವಿಶಿಷ್ಟ ರೂಪ. ಭಗವಂತ ನೆಲೆಸಿ ರುವ ಪರಿ. ಅವನ ಬಗೆಬಗೆಯ ವಿಭೂತಿ ರೂಪಗಳ ಚಿಂತನೆ ವಿಭೂತಿ ಸಂಧಿಯಲ್ಲಿ ಭಗವಂತನ ಸನ್ನಿಧಾನ ಎಲ್ಲಡೆ ಇರುವು ದನ್ನು ಶ್ರೀಜಗನ್ನಾಥದಾಸರು ಹೇಳಿದ್ದಾರೆ. ಅಲ್ಲದೆ ಭಗವಂತನ ವೈಭವ ಗುಣ ವರ್ಣನೆ ಮಾಡಿದ್ದಾರೆ.

"ಶ್ರೀ ತರುಣಿವಲ್ಲಭನ ಪರಮವಿಭೂತಿ ರೂಪವ ಕಂಡ
ಕಂಡಲ್ಲೀ ತೆರದಿ ಚಿಂತಿಸುತ ಮನದಲಿ ನೋಡು ಸಂಭ್ರಮದಿ।
ನೀತಿ ಸಾಧಾರಣ ವಿಶೇಷ ಸಜಾತಿ ನೈಜಾಹಿತವು ಸಹಜ
ವಿಜಾತಿ ಖಂಡಾಖಂಡ ಬಗೆಗಳನರಿತು ಬುಧರಿಂದ ॥೧॥

ನೀತ, ಸಾಧಾರಣ,ವಿಶೇಷ ಸಜಾತಿ,ನೈಜ,ಆಹಿತ ಸಹಜ, ವಿಜಾತಿ,ಖಂಡ ಅಖಂಡ ಎಂಬ ಹತ್ತು ತರಹದ ವಿಭೂತಿ ರೂಪಗಳಿವೆ. ಇವುಗಳನ್ನು ಜ್ಞಾನಿಗಳಿಂದ ತಿಳಿಯಬೇಕು. ನೀತ ದಲ್ಲಿ ತನ್ನ ಹೃದಯದಲ್ಲಿದ್ದ ಬಿಂಬ ಮೂರ್ತಿ ಮತ್ತು ಪ್ರತಿಮೆ ಗಳಲ್ಲಿ ಸೂರ್ಯ ಚಂದ್ರಮಂಡಲಗಳಲ್ಲಿ ಭಗವದ್ರೂಪ, "ಸಾಧಾ ರಣ ಅಂದರೆ ಅಣು,ತೃಣುವಿನಲ್ಲಿ ವ್ಯಾಪಿಸಿರುವ ಜಡ ಚೇತನ ರಲ್ಲಿರುವ ಭಗವಂತ ಚಿಂತನೆ. ವಿಶೇಷ ಅಂದರೆ ವಿಶೇಷ ಆವೇಶವುಳ್ಳವರಾದ ಲಕ್ಷ್ಮಣ, ಪ್ರಲ್ಹಾದರಾಜ, ಬಲರಾಮ ಅರ್ಜುನ, ಯತಿಗಳು,ಅಪರೋಕ್ಷ ಜ್ಞಾನಿಗಳು ಹೀಗೆ ಮುಂತಾ ದವರಲ್ಲಿನ ಅಂತರ್ಯಾಮಿ ಭಗವಂತನನ್ನು ಸ್ಮರಿಸಬೇಕು. "ನೈಜ" ಎಂದರೆ ಸಾಲಿಗ್ರಾಮದಿ ಭಗವಂತನ ಗುಣ ಚಿಂತನೆ,

ಆಹಿತ ಎಂದರೆ ಜ್ಞಾನಿಗಳಲ್ಲಿರುವ ರೂಪ, ಸಹಜ ಎಂದರೆ ಕಾರ್ಯ ಮತ್ತು ಕಾರಣಗಳಲ್ಲಿರುವ ರೂಪ ಇನ್ನು ವಿಜಾತಿ ಎಂದರೆ ಭಿನ್ನರಾದ ಬ್ರಹ್ಮ ರುದ್ರಾದಿಗಳಲ್ಲಿ ಮತ್ತು ಅಕ್ಷರ ಗಳಲ್ಲಿನ ರೂಪ "ಖಂಡ"ಎಂದರೆ ಒಂದೊಂದು ಅಗಳಿನಲ್ಲಿ ರುವ ಭಗವಂತನ ರೂಪ,"ಅಖಂಡ"ಎಂದರೆ ಸಾಲಿಗ್ರಾಮಾ ದಿಗಳಲ್ಲಿರುವ "ವಿಭೂತಿ ರೂಪ, ಹೀಗೆ ಭಗವಂತನು ಇರುವ ಸನ್ನಿಧಾನವನ್ನು ಮನಸ್ಸಿನಲ್ಲಿ ಚಿಂತಿಸಬೇಕು. ಪಂಚಭೂತ ಗಳಲ್ಲಿನ ಹರಿಯ ರೂಪಗಳನ್ನು ತಿಳಿಸುತ್ತ ಮುಂದಿನ ನುಡಿ ಯಲ್ಲಿ :-

"ಪ್ರತಿಮೆ ಶಾಲಗ್ರಾಮ ಗೋಭ್ಯಾಗತ ಅತಿಥಿ ಶ್ರೀತುಳಸಿ
ಪಿಪ್ಪಲ ಯತಿ ವನಸ್ಥ ಗೃಹಸ್ಥ ವಟು ಯಜಮಾನ ಸ್ವಪರಜನ।
ಪೃಥಿವಿ ಜಲ ಶಿಖಿ ಪವನ ತಾರಾ ಪಥ ನವಗ್ರಹ ಯೋಗ
ಕರಣ ಭ ತಿಥಿ ಸಿತಾಸಿತ ಪಕ್ಷ ಸಂಕ್ರಮಣವನಧಿಷ್ಠಾನ"3॥



ಅಂದರೆ ನಾವು ನಿತ್ಯ ಪೂಜೆ ಮಾಡುವ ಪ್ರತಿಮೆ ಸಾಲಿಗ್ರಾಮ ಅಥವಾ ಆಕಳು ಅನಿರೀಕ್ಷಿತವಾಗಿ ಬಂದ ಅತಿಥಿ (ಅಭಾಗ್ಯತರ) ಶ್ರೀತುಳುಸಿ, ಅಶ್ವತ್ ವೃಕ್ಷ, ಸನ್ಯಾಸಿಗಳು, ಗೃಹಸ್ಥಾಶ್ರಮಿಗಳು ಹಾಗೆ ಭೂಮಿ ನೀರು ಅಗ್ನಿವಾಯು ಆಕಾಶ ನವಗ್ರಹಗಳು, ಯೋಗ ಕರಣ ನಕ್ಷತ್ರ ಅತಿಥಿಗಳು ಶುಕ್ಲಪಕ್ಷ, ಕೃಷ್ಣಪಕ್ಷ ಹೀಗೆ ಪ್ರತಿಯೊಂದರಲ್ಲಿ ಭಗವಂತನ ಅಧಿಷ್ಠಾನಗಳು ಇವೆ.

ಶಾಲಿಗ್ರಾಮಗಳಲ್ಲಿ 5535 ಪ್ರತಿಮೆಗಳಲ್ಲಿ 513 ಉಪಕರಣಗಳಲ್ಲಿ 52114,ನೀರಿನಲ್ಲಿ 24, ಶ್ರೀತುಳಸಿಯಲ್ಲಿ 5317, ಪುಷ್ಪದಲ್ಲಿ 161, ದೀಪದಲ್ಲಿ 13, ಗಂಧದಲ್ಲಿ 403 ಹೀಗೆ ಪೂಜೆಯ ಸಾಮಾಗ್ರಿಯಲ್ಲಿ ಹಿರಿಯ ರೂಪವನ್ನು ಚಿಂತಿಸಬೇಕು. ಇಲ್ಲಿಯವರೆಗೆ ಭಗವಂತನ ರೂಪಗಳ ಚಿಂತನೆ ಆಯಿತು.

ಇನ್ನು ನಮ್ಮ ದೇಹದೊಳಗಿನ ಹರಿಯ ಚಿಂತನೆಯನ್ನು ತಿಳಿಯಬೇಕು. ನಮ್ಮ ಹೃದಯದ ಅಷ್ಟದಳದ ಕಮಲದಲ್ಲಿ ನೆಲಸಿ ಎಂಟು ದಿಕ್ಕಿಗೂ ಸಂಚರಿಸುತ್ತಾ ಒಳಗೆ ಇದ್ದು ದುಷ್ಟರಿಗೆ ದುರ್ಬುದ್ಧಿ ಕೊಟ್ಟು ಮತ್ತು ಶಿಷ್ಟರಿಗೆ ಸುಜ್ಞಾನವನ್ನು ಕೊಟ್ಟು ಕರ್ಮ ಧರ್ಮಗಳನ್ನು ಮಾಡಿಸುತ್ತಾನೆ. ಸಂಪತ್ತು ಶರೀರ ಮನೆ ಮಡದಿ ಮಗ ಮಿತ್ರ ಚಿತ್ತ ಬುದ್ಧಿ ಇಂದ್ರಿಯ ಜ್ಞಾನಕರ್ಮ ಪ್ರತಿಯೊಂದು ಅವನ ಸಂಕಲ್ಪದಂತೆ ನಡೆಯುವುದೆಂಬುದು ಅರಿತು ಸರ್ವ ಜಡ ಚೇತನರಲ್ಲಿ ಹರಿಯು ಇರುತ್ತಾನೆ ಎಂಬುವುದನ್ನು ತಿಳಿಯಬೇಕು.

ಅದ್ವೈತತ್ರಯಗಳ ಚಿಂತನೆಯನ್ನು ತಿಳಿಸುತ್ತಾರೆ.

1) ಭಾವಾದ್ವೈತ ಎಂದರೆ ಕಾರ್ಯ ಕಾರಣಾದಿಗಳಲ್ಲಿರುವ ಹರಿಯ ರೂಪಗಳು.

2. ದ್ರವಾದ್ವೈತ ಎಂದರೆ ಸಕಲ ದ್ರವ್ಯ ಪದಾರ್ಥಗಳಲ್ಲಿ ಸತಿಸುತ ಸಂಬಂಧಗಳಲ್ಲಿ ಹರಿಯ ರೂಪ ಮತ್ತು ಹರಿ ಅಧೀನವೆಂದು ಚಿಂತಿಸುವುದು.

3. ಕ್ರಿಯಾದ್ವೈತ ಎಂದರೆ ಸಕಲ ಕ್ರಿಯೆಗಳು ಹರಿಯಿಂದಲೇ ನಡೆಯುವುದು ಎಂದು ಚಿಂತಿಸುವುದು.

ಕೇಶವ ಮೂರ್ತಿಯ ವಿರಾಟ ರೂಪವನ್ನು ಹೃದಯ ಮಂದಿರದಲ್ಲಿ ಸ್ಥಾಪಿಸಿ ಚಿಂತಿಸುತ್ತಾ ನಿಶ್ಚಲ ಭಕುತಿ ಮಾಡುತ್ತಾ ಯಾವುದೇ ಆಪತ್ತು ಮತ್ತು ಬಾಧೆಯಾದರೂ ಹೆದರದೆ ಹರಿಯನ್ನು ಚಿಂತಿಸಿದರೆ ಹರಿ ಒಲೆಯುವನು. ದೇಹದ ಇಂದ್ರಿಯಗಳಲ್ಲಿರುವ ಗೋಲಕಗಳ ಹರಿಯೇ ಮಂದಿರ ಇಂದ್ರಿಯಗಳನ್ನು ಸ್ವಚ್ಛ ಮಾಡುವುದೇ ಹರಿಯ ಅಭಿಷೇಕ ಭೋಗ ವಿಷಯಗಳು ಹರಿಗೆ ಮೆತ್ತನೆಯ ಗಾದೆ ನಾವು ಮಾಡುವ ಪಾಪ ಕರ್ಮಗಳು ದೇವರಿಗೆ ಪಾದುಕೆ ಎಂದು ಸಮರ್ಪಿಸಬೇಕು. ದೇಹಕ್ಕೆ ಲೇಪಿಸಿಕೊಳ್ಳುವ ಸುಗಂಧದ ದ್ರವ್ಯಗಳು ಪುಣ್ಯ ಕರ್ಮಗಳು ಶಾಸ್ತ್ರ ಶ್ರವಣಾದಿಗಳು ಶ್ರೀತುಳಸಿ ಹಾಗೆ ಮನಸ್ಸಿನ ಒಳ್ಳೆಯ ವಿಚಾರವೇ ದೇವರಿಗೆ ಪುಷ್ಪ, ನಮ್ಮ ಸಿಟ್ಟು ದೇವರಿಗೆ ಧೂಪಾರ್ತಿ, ಭಕ್ತಿಯೇ ದೇವರಿಗೆ ಆಭರಣ, ವಿಶಾಲ ಬುದ್ಧಿಯೇ ಛತ್ರ, ಉತ್ತಮವಾದ ಜ್ಞಾನವೇ ದೀಪ, ಹರಿ ಗುಣ ಸಂಕೀರ್ತನೆ ದೇವರಿಗೆ ಮಂಗಳಾರತಿ, ನಿತ್ಯದಲ್ಲಿ ನಾವು ಮಾಡುವ ಮಾತು ಮತ್ತು ಕರ್ಮ, ಅಡ್ಡಾಡುವುದು ಎಲ್ಲವು ಪ್ರದಕ್ಷಿಣೆ ಎಂದು ಪೂರ್ಣ ಹರಿಗೆ ಆ ಅಧೀನವೆಂದು ಚಿಂತಿಸಬೇಕು. ನಾಲ್ಕು ವಿಧ ಚತುರ ಪುರುಷಾರ್ಥ ಮಾರ್ಗವಾಗುತ್ತದೆ.

ಗೋಳಕವೆ ಕುಂಡಾಗ್ನಿ ಕರಣವು

"ಮೇಲೋದಗಿಬಹ ವಿಷಯ ಸಮಿಧೆಯು
ಗಾಳಿ ಯತ್ನವು ಕಾಮ ಧೂಮವು ಸನ್ನಿಧಾನರ್ಚಿ।
ಮೇಲನವೆ ಪ್ರಜ್ವಾಲೆ ಕಿಡಿಗಳುತೂಳಿದಾನಂದಗಳೆ
ತತ್ತತ್ಕಾಲ ಮಾತುಗಳೆಲ್ಲ ಮಂತ್ರಾಧ್ಯಾತ್ಮಯಜ್ಞವಿದು ॥೧೮॥

ನಮ್ಮ ಇಂದ್ರಿಯದ ಗೋಳಕವೆ ಅಗ್ನಿಕೊಂಡ

ಇಂದ್ರಿಯಗಳೆ ಅಗ್ನಿ, ನಾವು ನಾವುಗಳು ಭೋಗಿಸುವಂತಹ ವಿಷಯಗಳೆ ಕಟ್ಟಿಗೆ ನಾವು ಮಾಡುವ ಪ್ರಯತ್ನವೇ

ಗಾಳಿ ಅದರ ಇಚ್ಛೆಯೆ ಹೋಗೆ ಸಂವಿಧಾನವೇ ಚಿಕ್ಕ ಜ್ವಾಲೆಗಳು ಇಚ್ಛೇಯ ಹೊಗೆ ವಿಷಯ ಭೋಗಗಳೆ ಸಮ್ಮಿಲನ ಎಂದು ಹೇಳಿದ್ದಾರೆ.

ಈ ಶರೀರ ಭಗವಂತನಿಗೆ ಪಟ್ಟಣ.

ದೇಹಕ್ಕೆ ಮಧುಸೂಧನ ಎಂಬ ಹೆಸರು ಇದ್ದ ಹಾಗೆ ಪೂರ್ವದ ಬಾಗಿಲು ಅಂದರೆ ಕಣ್ಣು ಮೂಗು ಬಾಯಿ ದಕ್ಷಿಣ ಉತ್ತರದ ಬಾಗಿಲು ಎರಡು ಕಿವಿಗಳು ಗುದ ಮತ್ತು ಉಪಸ್ಥಗಳು ಪಶ್ಚಿಮದ ಬಾಗಿಲುಗಳು ಆರು ಕಮಲದ ಮನೆ ಹೃದಯವೇ ದೇವರ ಮಂಟಪ. ಸತ್ತ್ವ, ರಜ, ತಮ ಎಂಬ ಮೂರು ಗುಣಗಳೇ ಕಲಶ.

ಹೀಗೆ ನಮ್ಮ ಶರೀರದ ಸಪ್ತಧಾತುಗಳು ಮತ್ತು ನಾಡಿಗಳು ಪ್ರತಿಯೊಂದನ್ನು ಭಗವಂತನ ಚಿಂತನೆಯಲ್ಲಿ ವರ್ಣಿಸಿದ್ದಾರೆ. ಈ ದೇಹವೆಂಬ ಮಧುಸೂದನ ಪಟ್ಟಣಕ್ಕೆ ಸೂರ್ಯಚಂದ್ರರು ದ್ವಾರಪಾಲಕರು, ಮನಸ್ಸಿನಲ್ಲಿ ಬರುವ ನೂರಾರು ವಿಚಾರಗಳು ಸೈನಿಕರು ವಿಷಯ ಪದಾರ್ಥಗಳೇ ನಿತ್ಯ ಬಳಸುವ ಸರಕು ಪದಾರ್ಥಗಳೇ ನಿತ್ಯ ಬಳಸುವ ಸರಕು ಪದಾರ್ಥಗಳು ತೆರಿಗೆ ಸ್ವೀಕರಿಸುವ ಹರಿಯೇ ಅಧಿಕಾರಿ.

ಉರುಪರಾಕ್ರಮನರಮನೆಗೆ ದಶ
ಕರಣಗಳು ಕನ್ನಡಿಯ ಸಾಲುಗ
ಳರವಿದೂರನ ಸದ್ವಿಹಾರಕೆ ಚಿತ್ತ ಮಂಟಪವು ।
ಮರಳಿ ಬೀಸುವ ಶ್ವಾಸಗಳು ಚಾ
ಮರ ವಿಲಾಸಿನಿ ಬುದ್ಧಿ ದಾಮೋ
ದರಗೆ ಸಾಷ್ಟಾಂಗ ಪ್ರಣಾಮಗಳೇ ಸುಶಯನಗಳು ॥೨೨॥

ಭಗವಂತನ ಸನ್ನಿಧಾನ ಹೊಂದಿರುವ ಮನೆಗೆ 10 ಇಂದ್ರಿಯಗಳ ಕನ್ನಡಿ ಸಾಲುಗಳು,ಮನಸ್ಸೆ ಒಂದು ಮಂಟಪ ನಾವು ಉಸಿರಾಡುವ ಗಾಳಿಯೇ ಚಾಮರ ಸೇವೆ ಚಂಚಲ ಬುದ್ಧಿಯೇ ನರ್ತಕಿ ಮಲಗುವುದೇ ಒಂದು ದಾಮೋದರನಿಗೆ ನಮಸ್ಕಾರಗಳು ಎಂದು ನಿತ್ಯದಲ್ಲಿ ಚಿಂತಿಸಬೇಕು ದೇವ ಎಂಬ ರಥಕ್ಕೆ ಮಾತರಿಚಶ್ವ ಸಾರಥಿ.

ವಾರಿಜಭವಾಂಡವೇ ಸುಮಂಟಪ
ಮೇರುಗಿರಿ ಸಿಂಹಾಸನವು ಭಾ
ಗೀರಥಿಯೆ ಮಜ್ಜನವು ದಿಗ್ವಸ್ತ್ರಗಳು ನುಡಿ ಮಂತ್ರ ।
ಭೂರುಹಜ ಪಹಲಪುಷ್ಪ ಗಂಧ
ಸಮೀರ ಶಶಿರವಿ ದೀಪ ಭೂಷಣ
ತಾರಕೆಗಳೆಂದರ್ಪಿಸಲು ಕೈಗೊಂಡು ಮನ್ನಿಸುವ ॥28॥

ಭಗವಂತನ ವಿರಾಟ ರೂಪವನ್ನು ಸೃಷ್ಟಿಗೆ ಹೋಲಿಸಿದ್ದಾರೆ. ಬ್ರಹ್ಮಾಂಡವೇ ಮಂಟಪ, ಮೇರು ಪರ್ವತವೇ ಸಿಂಹಾಸನ ಹರಿಯುವ ಗಂಗೆ ಅಭಿಷೇಕ, ದಿಕ್ಕುಗಳ ವಸ್ತ್ರಗಳು ನಡೆಯುವ ನುಡಿಗಳೆಲ್ಲ ಮಂತ್ರಗಳು,ಗಿಡದಲ್ಲಿರುವ ಫಲ ಪುಷ್ಪಗಳು ಸಮರ್ಪಣೆ ಬೀಸುವ ಗಾಳಿ, ಗಂಧ, ಸೂರ್ಯಚಂದ್ರರೇ ದೀಪಗಳು ನಕ್ಷತ್ರಗಳೇ ಆಭರಣಗಳೆಂದು ಸ್ಮರಿಸಬೇಕು. ನಾವುಗಳು ಮಾಡುವ ಪ್ರತಿ ಕರ್ಮಗಳು ಲಕ್ಷ್ಮಿಪತಿನಾರಾಯಣನಿಗೆ ಅನುಸಂಧಾನ ಪೂರ್ವಕವಾಗಿ ಮಾಡಿ ಸಮರ್ಪಿಸಬೇಕು ಎಲ್ಲ ಅಷ್ಟದಿಕ್ಕುಗಳಲ್ಲಿ ಹಂಸ ನಾಮಕನಾದ ಹರಿಯು ಅವ್ಯಕ್ತಾತ್ಮನಾಗಿ ಕಾರ್ಯನಿರ್ವಹಿಸುತ್ತಾನೆ.

ಪರಿಯಿಡಾವತ್ಸರನು ಸಂವತ್ಸರದೊಳನಿರುದ್ಧಾದಿ ರೂಪದ
ಧರಿಸಿ ಬಾರ್ಹಸ್ಪತ್ಯ ಸೌರಭ ಚಾಂದ್ರಮನು ಎನಿಸಿ
ಇರುತಿಹ ಜಗನ್ನಾಥ ವಿಟ್ಠಲ
ಸ್ಮರಿಸುವವರನು ಸಂತಯಿಪ
ನೆಂದುರು ಪರಾಕ್ರಮನುಚಿತ ಸಾಧನ ಯೋಗ್ಯತೆ ಯನರಿತು ॥40॥

ಭಗವಂತ ಪರಿವತ್ಸರದಲ್ಲಿ ಅನಿರುದ್ಧನಾಗಿ ಇಡಾವತ್ಸರದಲ್ಲಿ ಪ್ರದ್ಯುಮ್ನನಾಗಿ,ವತ್ಸರದಲ್ಲಿ ಸಂಕರ್ಷಣನಾಗಿ, ಅನುವತ್ಸರದಲ್ಲಿ ವಾಸುದೇವನಾಗಿ,ಸಂವತ್ಸರದಲ್ಲಿ ನಾರಾಯಣನಾಗಿ ಇರುತ್ತಾನೆ.

ಹೀಗೆ ಅನಿರುದ್ಧ ಪ್ರದ್ಯುಮ್ನ, ಸಂಕರ್ಷಣ ವಾಸುದೇವ, ನಾರಾಯಣ ಎಂಬ ಪಂಚರೂಪಾತ್ಮಕನಾದ ಭಗವಂತ ಕಾರ್ಯಕಾರಣನಾಗಿ ತನ್ನನ್ನು ಸ್ಮರಿಸುವರ ಸಾಧನೆ ಮತ್ತು ಯೋಗ್ಯತೆಯನ್ನು ತಿಳಿದು ದಂಡಿಸಿ ರಕ್ಷಿಸಿ ಸಂತೈಸುವನು. ಹೀಗೆ ವಿಭೂತಿ ಸಂಧಿಯಲ್ಲಿ ಅನಂತರೂಪಾತ್ಮಕನಾದ ಅನಂತ ಗುಣಗಳ ಮಹಿಮನಾದ ಭಗವಂತನ ವಿಭೂತಿ ರೂಪವನ್ನು ತಿಳಿದೇವು.

ಇನ್ನು ಮುಂದೆ ಹರಿಕಥಾಮೃತಸಾರದ ಆರನೇ ಸಂಧಿಯಾದ ಪಂಚಮಹಾಯಜ್ಞ ಜೀವನ ಸೃಷ್ಟಿಸುವ ರೀತಿಯನ್ನು ಹೇಳಿದ್ದಾರೆ.

**- ಮುಂದುವರಿಯುವುದು**





## ಶ್ರೀನಿವಾಸಮಂಗಾಪುರಂ
## ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ
## ಬ್ರಹ್ಮೋತ್ಸವಗಳು

**2024, ಫೆಬ್ರವರಿ 28 ರಿಂದ ಮಾರ್ಚ್ 08 ರ ವರೆಗೆ**

**28-02-2024 ಬುಧವಾರ**
ಹಗಲು : -
ರಾತ್ರಿ : ಸೇನಾಧಿಪತಿ ಉತ್ಸವ,
ಅಂಕುರಾರ್ಪಣೆ

**29-02-2024 ಗುರುವಾರ**
ಹಗಲು: ಧ್ವಜಾರೋಹಣ,
ರಾತ್ರಿ: ದೊಡ್ಡಶೇಷವಾಹನ

**01-03-2024 ಶುಕ್ರವಾರ**
ಹಗಲು: ಚಿಕ್ಕಶೇಷವಾಹನ
ರಾತ್ರಿ: ಹಂಸವಾಹನ

**02-03-2024 ಶನಿವಾರ**
ಹಗಲು: ಸಿಂಹವಾಹನ
ರಾತ್ರಿ: ಮುತ್ತಿನಚಪ್ಪರವಾಹನ

**03-03-2024 ಭಾನುವಾರ**
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಸರ್ವಭೂಪಾಲವಾಹನ

**04-03-2024 ಸೋಮವಾರ**
ಹಗಲು: ಪಲ್ಲಕ್ಕಿಯಲ್ಲಿ ಮೋಹಿನೀ ಅವತಾರೋತ್ಸವ
ರಾತ್ರಿ: ಗರುಡವಾಹನ

**05-03-2024 ಮಂಗಳವಾರ**
ಹಗಲು: ಹನುಮದ್ವಾಹನ,
ರಾತ್ರಿ: ಗಜವಾಹನ

**06-03-2024 ಬುಧವಾರ**
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ

**07-03-2024 ಗುರುವಾರ**
ಹಗಲು: ರಥೋತ್ಸವ
ರಾತ್ರಿ: ಅಶ್ವವಾಹನ

**08-03-2024 ಶುಕ್ರವಾರ**
ಹಗಲು: ಚಕ್ರಸ್ನಾನ,
ರಾತ್ರಿ: ಧ್ವಜಾವರೋಹಣ.



## ತಿರುಪತಿ
## ಶ್ರೀ ಕಪಿಲೇಶ್ವರ ಸ್ವಾಮಿಯವರ
## ಬ್ರಹ್ಮೋತ್ಸವಗಳು

**2024, ಫೆಬ್ರವರಿ 29 ರಿಂದ ಮಾರ್ಚ್ 10 ರ ವರೆಗೆ**

**29-02-2024 ಗುರುವಾರ**
ಹಗಲು : -
ರಾತ್ರಿ : ಮೂಷಿಕವಾಹನದಲ್ಲಿ ವಿನಾಯಕಸ್ವಾಮಿ,
ಅಂಕುರಾರ್ಪಣೆ

**01-03-2024 ಶುಕ್ರವಾರ**
ಹಗಲು: ಧ್ವಜಾರೋಹಣ,
ರಾತ್ರಿ: ಹಂಸ ವಾಹನ

**02-03-2024 ಶನಿವಾರ**
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ.

**03-03-2024 ಭಾನುವಾರ**
ಹಗಲು: ಭೂತವಾಹನ
ರಾತ್ರಿ: ಸಿಂಹವಾಹನ

**04-03-2024 ಸೋಮವಾರ**
ಹಗಲು : ಮಕರವಾಹನ
ರಾತ್ರಿ : ಶೇಷವಾಹನ

**05-03-2024 ಮಂಗಳವಾರ**
ಹಗಲು: ತಿರುಚ್ಚಿ ಉತ್ಸವ
ರಾತ್ರಿ: ಅಧಿಕಾರನಂದಿ ವಾಹನ

**06-03-2024 ಬುಧವಾರ**
ಹಗಲು: ವ್ಯಾಘ್ರವಾಹನ
ರಾತ್ರಿ: ಗಜವಾಹನ

**07-03-2024 ಗುರುವಾರ**
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಅಶ್ವವಾಹನ

**08-03-2024 ಶುಕ್ರವಾರ**
ಹಗಲು: ರಥೋತ್ಸವ
ರಾತ್ರಿ: ನಂದಿವಾಹನ (ಮಹಾಶಿವರಾತ್ರಿ)

**09-03-2024 ಶನಿವಾರ**
ಹಗಲು: ಪುರುಷಾಮೃಗ ವಾಹನ
ರಾತ್ರಿ: ಕಲ್ಯಾಣೋತ್ಸವ,ತಿರುಚ್ಚಿಉತ್ಸವ

**10-03-2024 ಭಾನುವಾರ**
ಹಗಲು: ಸೂರ್ಯಪ್ರಭವಾಹನದಲ್ಲಿ
ನಟರಾಜಸ್ವಾಮಿ,ತ್ರಿಶೂಲಸ್ನಾನ
ರಾತ್ರಿ: ಧ್ವಜಾವರೋಹಣ
ರಾವಣಾಸುರ ವಾಹನ

# ಸೂರ್ಯರಶ್ಮಿ ಸ್ಪರ್ಶಿಸುವ ಮೈಸೂರಿನ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ

- ಶ್ರೀಮತಿ. ವಾರುಣಿ
99160 22982



ಭಾರತೀಯ ಪುರಾತನ ವಾಸ್ತುಶೈಲಿಯ ದೇವಾಲಯಗಳು ಒಂದಿಲ್ಲೊಂದು ನೈಸರ್ಗಿಕ, ದೈವಿಕ, ಆಧ್ಯಾತ್ಮಿಕ ಮಹತ್ತನ್ನು ಒಳಗೊಂಡು ಆ ಮೂಲಕ ಶ್ರದ್ಧಾಭಕ್ತಿ ಪಸರಿಸುವ ಕೇಂದ್ರಗಳಾಗಿರುತ್ತವೆ. ಅವುಗಳ ಸಾಲಿಗೆ ಸೇರುವ ಬಹು ವಿಶೇಷ ಮತ್ತು ಅಪರೂಪದ ಆಲಯವೊಂದು ಕನ್ನಡನಾಡಿನ ಸಾಂಸ್ಕೃತಿಕ ರಾಜಧಾನಿ ಮೈಸೂರಿನಲ್ಲಿದೆ. ಲಿಂಗಾಂಬುಧಿ ಕೆರೆ ಆವರಣದಲ್ಲಿ 1828 ರಲ್ಲಿ ಲೋಕಾರ್ಪಣೆಗೊಂಡ ಈ ದೇವಾಲಯ ಇತಿಹಾಸ ಮತ್ತು ಯದು ವಂಶದ ರಾಜರ ಪರಂಪರೆಗೆ ಪ್ರತೀಕವಾಗಿ ನಿಂತಿದೆ.

ಪವಿತ್ರ, ಪರಿಶುದ್ಧ ಮತ್ತು ಪ್ರಶಾಂತ ಪರಿಸರದಲ್ಲಿರುವ ಮನೋನಿಯಾಮಕ ಶ್ರೀಮಹಾಲಿಂಗೇಶ್ವರನ ಸನ್ನಿಧಿಯು ರಾಜಋಷಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಮಹತ್ತರ ಕೊಡುಗೆಗಳಲ್ಲಿ ಒಂದು. ಇದಕ್ಕೆ ಒಂದು ಪ್ರಸಂಗವೂ ಕಾರಣವಾಗಿದೆ. ದಟ್ಟ ಕಾಡಾಗಿದ್ದ ಈ ಪ್ರದೇಶಕ್ಕೆ ಒಮ್ಮೆ ರಾಜರು ಬೇಟೆಗೆ ಬಂದಾಗ ಅವರ ಕಿರೀಟ ಕಳೆದು ಹೋಗುತ್ತದೆ. ಕುಲದೇವತೆ ಚಾಮುಂಡೇಶ್ವರಿಯನ್ನು ಪ್ರಾರ್ಥಿಸಿದ ನಂತರ ಕಿರೀಟ ಮರು ಪ್ರಾಪ್ತಿಯಾಗುತ್ತದೆ. ಕಿರೀಟ ದೊರೆತ ಜಾಗದಲ್ಲಿ ಶ್ರೀಚಾಮುಂಡೇಶ್ವರಿ ಸಮೇತ ಶಿವನ ವಿಗ್ರಹ ಪ್ರತಿಷ್ಠಾಪಿಸುವೆ ಎಂಬ ಸಂಕಲ್ಪವನ್ನು ಅವರು ಮಾಡುತ್ತಾರೆ. ಮೊದಲು ದೇಗುಲ ನಿರ್ಮಾಣ ಪೂರ್ಣಗೊಳಿಸಿ ಕಾಶಿಯಿಂದ 4 ಸಾಲಿಗ್ರಾಮ ಶಿಲಾಲಿಂಗ ತರಿಸುತ್ತಾರೆ. ವರುಣ, ಹುಯಿಲಾಳು,ಚಾಮರಾಜನಗರ ಮತ್ತು ಈ ಸನ್ನಿಧಿಯಲ್ಲಿ ಲಿಂಗಗಳು ಪೂಜಾಸ್ಥಾನ ಅಲಂಕರಿಸುತ್ತವೆ. ಗಣೇಶ, ಚಂಡೀಕೇಶ್ವರರನ್ನೂ ಇಲ್ಲಿ ದರ್ಶನ ಮಾಡಬಹುದು. ಪೂರ್ವಾಭಿಮುಖ ವಿಶಾಲ ಮುಖಮಂಟಪ, ಗರ್ಭಗುಡಿ, ಪ್ರದಕ್ಷಿಣಾ ಪಥಗಳು ಭಕ್ತರನ್ನು ಆಕರ್ಷಿಸುತ್ತವೆ.

ಶ್ರೀಮಹಾಲಿಂಗೇಶ್ವರ ದೇವಾಲಯಕ್ಕೆ 160ಎಕರೆ ಭೂಮಿದತ್ತಿ ನೀಡುವ ಮಹಾರಾಜರು ಇಲ್ಲಿ ಕುದುರೆಲಾಯ, ಆನೆಲಾಯ, ಕುಸ್ತಿ ಅಖಾಡ ನಿರ್ಮಿಸಿ ವೈವಿಧ್ಯಮಯ ಚಟುವಟಿಕೆ ಕೇಂದ್ರವನ್ನಾಗಿಸುತ್ತಾರೆ. ಇದಕ್ಕೆ ಸಾಕ್ಷಿಯಾಗಿ ದೇಗುಲದ ಪ್ರವೇಶದ್ವಾರದಲ್ಲಿ ಗಣಪತಿ ಮೂರ್ತಿ ಸಹಿತ ಶಿಲಾಶಾಸನವಿದೆ.

### ನಿತ್ಯವೂ ದುರ್ಗಾ ಸಪ್ತಶತಿ ಪಾರಾಯಣ

ಶೈವಾಗಮ ಪದ್ಧತಿಯಲ್ಲಿ ನಿತ್ಯವೂ ದೇಗುಲದಲ್ಲಿ ಮಹಾಲಿಂಗೇಶ್ವರನಿಗೆ ಷೋಡಶೋಪಚಾರ ಪೂಜಾಕೈಂಕರ್ಯ ನಡೆಯುತ್ತದೆ. ಜೇಷ್ಠಬಹುಳ ನವಮಿ ರೇವತಿ ನಕ್ಷತ್ರದಲ್ಲಿ ಶ್ರೀಮಹಾಲಿಂಗೇಶ್ವರನ ಜಾತ್ರೋತ್ಸವ ವಿಜೃಂಭಣೆಯಿಂದ ನಡೆಯುತ್ತದೆ. ಶಿವರಾತ್ರಿಗೆ 5



ಯಾಮದ ಶಾಸ್ತ್ರೋಕ್ತ ಪೂಜೆ, ಏಕ ಶತವಾರ ರುದ್ರಾಭಿಷೇಕ ಸಮೇತ ಸಹಸ್ರನಾಮಾರ್ಚನೆಗೆ ಇರುತ್ತದೆ. ಈ ಸಂದರ್ಭಕ್ಕೆ 25,000 ಭಕ್ತರು ಸಾಕ್ಷಿಯಾಗುತ್ತಾರೆ.

ಅಂದು ಲಕ್ಷ ರುದ್ರಾಕ್ಷಿಯಿಂದ ದೇವಾಲಯವನ್ನು ಸಿಂಗರಿಸುವುದು,ಸಂಗೀತೋತ್ಸವ ನಡೆಸುವುದು ಸಂಪ್ರದಾಯವೇ ಆಗಿದೆ. ಕಾರ್ತಿಕದ ಪ್ರತಿ ಸೋಮವಾರ ದೀಪೋತ್ಸವ, ಪ್ರದೋಷ, ನಿತ್ಯ ದುರ್ಗಾ ಸಪ್ತಶತಿ ಪಾರಾಯಣ ನಡೆಯುವ ಕಾರಣ ಭಕ್ತರ ಸಂಕಲ್ಪ ಶೀಘ್ರ ಫಲ ಕೊಡುತ್ತದೆ ಎನ್ನಲಾಗಿದೆ. ಇದಲ್ಲದೇ ಡಿಸೆಂಬರ್ ಅಂತ್ಯದಲ್ಲಿ ಸಾವಿರಾರು ಭಕ್ತರ ಸಮ್ಮುಖ ಶ್ರೀ ಶತಚಂಡಿಕಾ ಹೋಮ ನಡೆಸಲಾಗುತ್ತದೆ ಎಂದು ವಿವರಿಸುತ್ತಾರೆ ಪ್ರಧಾನ ಅರ್ಚಕ ಮೋಹನ್.

**ಲಿಂಗಕ್ಕೆಸೂರ್ಯ ಕಿರಣದ ಅಭಿಷೇಕ:**

ದೇಶದ ಕೆಲವೇ ಕೆಲವು ಈಶ್ವರ ದೇವಾಲಯಗಳಲ್ಲಿ ಮಕರ ಸಂಕ್ರಾಂತಿ ದಿನದಂದು ಸೂರ್ಯಕಿರಣಗಳು ಲಿಂಗವನ್ನು ಸ್ಪರ್ಶಿಸುವ ಕೌತುಕ ಜರುಗುತ್ತದೆ. ಅವೆಲ್ಲವೂ ಭರ್ಜರಿ ಪ್ರಚಾರವನ್ನೂ ಪಡೆಯುತ್ತವೆ. ಆದರೆ ಮೈಸೂರಿನ ಈ ದೇವಾಲಯದಲ್ಲಿ ವೈಶಾಖ ಮತ್ತು ಧನುರ್ಮಾಸದ ತಲಾ 7 ದಿನದಂದು ಸೂರ್ಯಕಿರಣಗಳು ಲಿಂಗದ ಮೇಲೆ ನೇರವಾಗಿ ಬೀಳುತ್ತವೆ. ದಿನಕರನು ಸಾಕ್ಷಾತ್ ಶಿವನಿಗೆ ಕಿರಣಾಭಿಷೇಕ ಮಾಡುವುದನ್ನು ನೋಡುವುದೇ ಒಂದು ಮಹಾಭಾಗ್ಯ. ಪ್ರಚಾರದ ಕೊರತೆಯಿಂದ ಈ ಕೌತುಕ ಬಹಳ ಜನರಿಗೆ ತಿಳಿದಿಲ್ಲ. ತಿಳಿದ ಕೆಲವೇ ಭಕ್ತರು ಈ ನೈಸರ್ಗಿಕ-ದೈವಿಕ ಕೌತುಕವನ್ನು ಕಂಡು ಧನ್ಯತೆ ಮೆರೆಯುತ್ತಾರೆ. ಸೂರ್ಯೋದಯ ಕಾಲಕ್ಕೆ ವಿವಿಧ ಸೇವೆಗಳನ್ನು ಮಾಡಿದರೆ ಪುಣ್ಯ ಲಭಿಸುವುದೆಂದು ನಂಬಿದ್ದಾರೆ.

**ಸ್ವಚ್ಛ - ಸುಂದರ ಪರಿಸರ:**

ಮಹಾಲಿಂಗೇಶ್ವರ ದೇವಾಲಯದ ದೇಗುಲದ ಸುತ್ತಲೂ ಸ್ವಚ್ಛ-ಸುಂದರ ಹಸಿರು ಪರಿಸರವಿದೆ.ಬಿಲ್ವ, ರುದ್ರಾಕ್ಷಿ, ಭದ್ರಾಕ್ಷಿ,ಬನ್ನಿ ಸೇರಿದಂತೆ ಪವಿತ್ರ ವೃಕ್ಷ ಸಂಕುಲವಿದೆ. ಭಕ್ತ ಮಲ್ಲೇಶ್ ಅವರು ದೈವಿಕ ವನ ನಿರ್ಮಿಸಿದ್ದು ಹತ್ತಾರು ಬಗೆಯ ಫಲ, ಪುಷ್ಪಗಳು ಇಲ್ಲಿಯೇ ಪೂಜೆಗಾಗಿ ದೊರುಕುತ್ತಿವೆ. ಶತಮಾನಗಳ ಹಿಂದೆ ಮೈಸೂರು ದಸರಾ ಉತ್ಸವದ ದಿಬ್ಬಣ ಈ ದೇಗುಲದಿಂದಲೇ ಹೊರಡುತ್ತಿತ್ತು. ಇಲ್ಲಿದ್ದ ಕುಸ್ತಿ ಅಖಾಡದಲ್ಲಿ ರೋಚಕ ಪಂದ್ಯಾಟಗಳು ನಡೆಯುತ್ತಿದ್ದವಂತೆ. ದೇಗುಲ ನಿರ್ವಹಣೆಗೆ 160 ಎಕರೆ ಜಮೀನು ಇತ್ತು, ಆದರೆ ಇಂದು ಕೇವಲ 5 ಎಕರೆ ಮಾತ್ರ ಉಳಿದುಕೊಂಡಿದೆ. ಇದಕ್ಕಾಗಿ ಶಾಸಕ ರಾಮದಾಸ್ ಅವರ ತಾಯಿ ಸರೋಜಮ್ಮ ಸಾಕಷ್ಟು ಶ್ರಮಿಸಿದ್ದಾರೆಂದು ಭಕ್ತರು ಸ್ಮರಿಸಿಕೊಳ್ಳುತ್ತಾರೆ. ಸುತ್ತಮುತ್ತಲ ಗ್ರಾಮಸ್ಥರು ದೇಗುಲಕ್ಕೆ ನಡೆದುಕೊಳ್ಳುತ್ತಾರೆ. 50 ಕ್ಕೂ ಹೆಚ್ಚು ಸ್ವಯಂ ಸೇವಕರ ತಂಡ ದೇವರ ಸೇವೆಗೆ ಕಟಿಬದ್ಧವಾಗಿರುವುದು ಗಮನಾರ್ಹ.



## ರಸಪ್ರಶ್ನೆಗಳು

## ಜನವರಿ 2024 ತಿಂಗಳ ರಸಪ್ರಶ್ನೆಯ ಉತ್ತರಗಳು

1. ಎರಡು ವರ್ಷಗಳಿಗೊಮ್ಮೆ
2. ಎಳ್ಳು ಬೆಲ್ಲ
3. ಋಗ್ವೇದದಲ್ಲಿ
4. ಪುಷ್ಯಮಾಸದಲ್ಲಿ
5. ಮಾರ್ಗಶಿರ
6. ಮಾರ್ಗಶಿರ್ಷ ಬಹುಳ ದ್ವಾದಶಿ
7. ಜನವರಿ
8. ಘಟೋತ್ಕಚನ
9. ಸೂರ್ಯದೇವ
10. ಸಾರಪುಷ್ಕರಣಿ
11. ವಿಪ್ರನಾರಯಣ
12. ವೈಕುಂಠ
13. ಅವಬೃಥಸ್ನಾನ
14. ದೇವರನ್ನು
15. ಹಸುವಿನ ಸಗಣಿಯಿಂದ

**ವಿಜೇತರು**
**ಎನ್. ಎಸ್. ಶುಭಾಷಿಣಿ**
**IM 26012208580181**

ಕರ್ನಾಟಕದ ವೈಷ್ಣವ ಕ್ಷೇತ್ರಗಳು

40

# ಆನೆಕನ್ನಂಬಾಡಿಯ ಶ್ರೀ ಕೇಶವ ದೇವಾಲಯ




-ಕೆಂಗೇರಿ ಚಕ್ರಪಾಣಿ
94483 86886

ಹಾಸನ ಜಿಲ್ಲೆಯ, ಹೊಳೆನರಸೀಪುರ ತಾಲ್ಲೂಕಿನ ಒಂದು ಪುರಾತನ ಗ್ರಾಮ ಆನೆಕನ್ನಂಬಾಡಿ. ಶಾಸನದಲ್ಲಿ ಆನೆಯ ಕಣ್ಣಬಾಡಿ ಎಂದು ಕರೆದಿದ್ದು,ಕ್ರಿ.ಶ.1242 ರ ಹೊಯ್ಸಳರ ಸೋಮೇಶ್ವರ ಶಾಸನದಲ್ಲಿ ಮಹಾಪ್ರಧಾನಿ ಕಂಬಯ್ಯನಾಯಕನಿಗೆ ಹಲವಾರು ಹಳ್ಳಿಗಳ ಆದಾಯವನ್ನು ನೀಡಿರುವ ದಾಖಲೆ ಸಿಗುತ್ತದೆ. ಚಾಕನಬೀಡು, ಮಾಕಬ್ಬೆಹಳ್ಳಿ, ಗುರು ಗುಂಜೆಯಹಳ್ಳಿ, ಮೈಸೂರು (ಈಗಿನಹಳ್ಳಿ ಮೈಸೂರು)ಒಳಗೊಂಡ ಆನೆಕನ್ನಂಬಾಡಿಯೆಂಬ ಊರನ್ನು ಊರಿನ ಬ್ರಾಹ್ಮಣೋತ್ತಮರಿಗೆ ನೀಡಿ ಅಲ್ಲಿ ಋಗ್ವೇದ,ಯಜುರ್ವೇದ, ಸಾಮವೇದಗಳ ಪಾರಾಯಣಕ್ಕೆ ಹಾಗೂ ಸೋಮೇಶ್ವರನು ಪ್ರತಿಷ್ಠೆ ಮಾಡಿಸಿದ ಶ್ರೀಚನ್ನಕೇಶ್ವರ ದೇವರಿಗೆ, ದೇವೇಶ್ವರ,ಜಲೇಶ್ವರ,ಕಂಬೇಶ್ವರ ದೇವರಿಗೆ ದತ್ತಿ ಬಿಟ್ಟಿರುವ ಮಾಹಿತಿ ಇಲ್ಲಿ ದೊರೆತಿರುವ ತಾಮ್ರ ಶಾಸನದಲ್ಲಿ ದೊರೆಯುತ್ತದೆ. ಇದರಿಂದ ಹೊಯ್ಸಳರ ಕಾಲದಲ್ಲಿ ಇದು ಒಂದು ಪ್ರಮುಖ ಅಗ್ರಹಾರವಾಗಿತ್ತು ಮತ್ತು ಇಲ್ಲಿ ವೇದಗಳನ್ನು ಅಭ್ಯಾಸ ಮಾಡುವ ವಿದ್ವಾಂಸರಿದ್ದರು ಎಂಬ ಸಂಗತಿ ತಿಳಿಯುವುದು.



## ಶ್ರೀ ಕೇಶವ ದೇವಾಲಯ



ಆನೆಕನ್ನಂಬಾಡಿಯ ಊರನಡುವಿರುವ ಶ್ರೀಕೇಶವ ದೇವಾಲಯವು ಹೊಯ್ಸಳರ ಕಾಲಕ್ಕೆ ಸೇರಿದ್ದು, ಕ್ರಿ.ಶ. 1242 ರ ಸುಮಾರಿನಲ್ಲಿ ಹೊಯ್ಸಳರ ದೊರೆ ಸೋಮೇಶ್ವರನ ಕಾಲದ ರಚನೆ. ದೇವಾಲಯವು ತ್ರಿಕೂಟಾಚಲವಾಗಿದ್ದು ಪ್ರಧಾನ ಗರ್ಭಗುಡಿಯಲ್ಲಿ ಚನ್ನಕೇಶವ, ಉತ್ತರ ಗರ್ಭಗುಡಿಯಲ್ಲಿ ಲಕ್ಷ್ಮೀ ನರಸಿಂಹಸ್ವಾಮಿ ಮತ್ತು ದಕ್ಷಿಣ ಗುಡಿಯಲ್ಲಿ ಕೊಳಲು ಗೋಪಾಲಕೃಷ್ಣರ ಕಲಾತ್ಮಕ ಮೂರ್ತಿಗಳಿವೆ. ನವರಂಗದ ಮಧ್ಯದಲ್ಲಿ ತಿರುಗಣೆಯಿಂದ ಮಾಡಿದ ನಾಲ್ಕು ಕಂಬಗಳಿವೆ. ಇಲ್ಲಿ ಒಟ್ಟು ಒಂಬತ್ತು ವಿತಾನಗಳಿದ್ದು (ಭುವನೇಶ್ವರಿ) ಬಹಳ ಅಂದವಾಗಿವೆ. ಮಧ್ಯದ ಭುವನೇಶ್ವರಿಯು ಬಹಳ ಆಳವಾಗಿದ್ದು ನಡುವೆ ಬಾಳೆಯ ಮೊಗ್ಗು ಇದೆ. ದೇವಾಲಯದ ಹೊರ ಭಿತ್ತಿಯಲ್ಲಿ ಸಣ್ಣ ದೇವತೆಗಳ ಮೂರ್ತಿಗಳಿವೆ. ದೇವಾಲಯಕ್ಕೆ ಇದ್ದ ಹಳೆಯ ಶಿಖರವು ನಾಶವಾಗಿದ್ದರಿಂದ ಇತ್ತೀಚೆಗೆ ಹೊಸ ಶಿಖರವನ್ನು ನಿರ್ಮಿಸಿದ್ದಾರೆ. ದೇವಾಲಯದ ಪ್ರವೇಶದಲ್ಲಿ ಜಗತಿಯಿರುವ ಸಣ್ಣ ಮುಖ ಮಂಟಪವಿದೆ.

ಆನೆಕನ್ನಂಬಾಡಿಯ ಕೇಶವ ದೇವಾಲಯವನ್ನು ಸ್ಥಳೀಯವಾಗಿ ನಾರಾಯಣ ಸ್ವಾಮಿ ದೇವಾಲಯವೆಂದು ಕರೆಯುವರು. ಕರ್ನಲ್ ಮೆಕೆಂಜಿ ಸಂಗ್ರಹಿಸಿರುವ (19 ನೇ ಶತಮಾನದ ಮೊದಲ ಭಾಗ) ಆನೆಕನ್ನಂಬಾಡಿ ಕೈಫಿಯತ್ತಿನಲ್ಲಿ ಈ ದೇವಾಲಯದ ವಿವರಣೆ ದೊರೆಯುತ್ತದೆ. ಕೈಫಿಯತ್ತಿನಲ್ಲಿಯೂ ಕೇಶವ ದೇವಾಲಯವನ್ನು ನಾರಾಯಣಸ್ವಾಮಿ ದೇವಾಲಯ ಎಂದೇ ಕರೆಯಲಾಗಿದೆ. ಇದರಲ್ಲಿ ಕೇಶವ ದೇವಾಲಯದ ವಿನ್ಯಾಸದ ವಿವರಗಳನ್ನು ಸಂಪೂರ್ಣವಾಗಿ ನೀಡಿದ್ದು, ದೇವಾಲಯಕ್ಕೆ ಬಳಸುವ ಪಾರಿಭಾಷಿಕ ಶಬ್ದಗಳನ್ನು ಬಳಸಿದ್ದಾರೆ. ಆನೆಕನ್ನಂಬಾಡಿ ಕೈಫಿಯತ್ತು ದೇವಾಲಯವನ್ನು ವಿವರಿಸುವ ಅಪರೂಪದ ದಾಖಲೆಯಾಗಿದೆ.

ಈ ದೇವಾಲಯದ ಪ್ರಧಾನ ಗರ್ಭಗುಡಿಯಲ್ಲಿರುವ ಕೇಶವನು ಬಹಳ ಆಕರ್ಷಕವಾಗಿರುವನು. ಸುಮಾರು ಆರು ಅಡಿ ಎತ್ತರದ ಕೇಶವನು ಸಮಭಂಗಿಯಲ್ಲಿ ನಿಂತಿದ್ದು, ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳಲ್ಲಿ ಪ್ರಥಮವಾಗಿ ಬರುವ ಮೂರ್ತಿಯಾಗಿರುವನು. ದೇವನು ಕ್ರಮವಾಗಿ ಮೇಲಿನ ಬಲಗೈಯಲ್ಲಿ ಶಂಖ, ಮೇಲಿನ ಎಡಗೈಯಲ್ಲಿ ಚಕ್ರ, ಕೆಳಗಿನ ಎಡಗೈಯಲ್ಲಿ ಗದೆ ಮತ್ತು ಕೆಳಬಲಗೈಯಲ್ಲಿ ಪದ್ಮವನ್ನು ಧರಿಸಿರುವನು.

ಕಿರೀಟ ಮಕುಟವನ್ನು ಧರಿಸಿರುವ ಸ್ವಾಮಿಯ ಕಿರೀಟದ ಹಿಂದೆ ಪ್ರಭಾಚಕ್ರವಿದೆ. ಕೇಶವನು ಧರಿಸಿರುವ ವಸ್ತ್ರ ಭುಜಕೀರ್ತಿ ಕೈಕಡಗ, ಇಳೇವಸ್ತ್ರ, ಬೆರಳಿಗೆ ಧರಿಸಿರುವ ಉಂಗುರ, ಉಪವೀತ, ಯಜ್ಞೋಪವೀತ, ಕೊರಳಿಗೆ ಧರಿಸಿರುವ ಮಾಲೆಗಳು ಬಹಳ ಆಕರ್ಷಕವಾಗಿದೆ. ಕೇಶವನ ಶಿರದ ಸುತ್ತಲೂ ಇರುವ ಪ್ರಭಾವಳಿಯಲ್ಲಿ ದಶಾವತಾರದ ಸಣ್ಣ ಮೂರ್ತಿಗಳಿವೆ. ದೇವನ ಇಕ್ಕೆಲಗಳಲ್ಲಿ ಅವನ ಪತ್ನಿಯರಾದ ಶ್ರೀದೇವಿ,ಭೂದೇವಿಯರ ಸಣ್ಣ ಮೂರ್ತಿಗಳಿವೆ. ದೇವಾಲಯದ ಉತ್ತರ ಗರ್ಭಗುಡಿಯಲ್ಲಿರುವ ಲಕ್ಷ್ಮೀ ನರಸಿಂಹನ ಶಿಲ್ಪವು ಮತ್ತೊಂದು ಸುಂದರ ಮೂರ್ತಿಯಾಗಿರುವುದು. ಒಂದು ಪೀಠದ ಮೇಲೆ ಆಸೀನನಾಗಿರುವ ನರಸಿಂಹನ ಎಡ ತೊಡೆಯ ಮೇಲೆ ಶ್ರೀಲಕ್ಷ್ಮಿಯು ಆಸೀನಳಾಗಿರುವಳು. ಪ್ರಭಾವಳಿಯಲ್ಲಿ ದಶಾವತಾರದ ಕೆತ್ತನೆಯಿದೆ. ಸ್ವಾಮಿಯ ಪೀಠದಲ್ಲಿ ಪೂರ್ಣಕುಂಭ ಕಳಶವಿದೆ.



ಈ ದೇವಾಲಯದ ದಕ್ಷಿಣ ಗರ್ಭಗುಡಿಯಲ್ಲಿರುವ ಕೊಳಲು ಗೋಪಾಲಕೃಷ್ಣನ ಮೂರ್ತಿಯು ಸುಂದರ ವಾದ ಹೊಯ್ಸಳರ ಕಲಾಕೃತಿ ಸುಮಾರು ಆರು ಅಡಿಗಳು ಎತ್ತರವಿರುವ ವೇಣುಗೋಪಾಲನು ಕತ್ತರಿ ಕಾಲನ್ನು ಹಾಕಿ ಕೊಂಡು ತ್ರಿಭಂಗಿಯಲ್ಲಿರುವನು.

ತಮಾಲ ವೃಕ್ಷದ ಕೆಳಗೆ ಕೊಳಲು ನುಡಿಸುತ್ತಿರುವ ವೇಣುಗೋಪಾಲನ ಕೊಳಲು ಅದಕ್ಕೆ ಕಟ್ಟಿರುವ ಕುಚ್ಚು, ನೇತಾಡುತ್ತಿರುವಂತೆ ನೈಜವಾಗಿ ಮೂಡಿಸಲಾಗಿದೆ.

ಗೋಪಾಲನ ಇಕ್ಕೆಲಗಳಲ್ಲಿ ಗೋಪಾಲಕರು, ವಾದ್ಯಕಾರರು, ಮುರಳಿಯ ಗಾನಕ್ಕೆ ಮನಸೋತಂತೆ ತಲೆಯೆತ್ತಿ ನೋಡುತ್ತಿರುವ ಗೋವುಗಳು ಬಹಳ ಸುಂದರ ವಾಗಿ ಶ್ರೇಷ್ಠ ಮಟ್ಟದಲ್ಲಿ ಕಂಡರಿಸಲಾಗಿದೆ. ನವರಂಗದಲ್ಲಿ ಕೇಶವನ ಗುಡಿಯ ಇಕ್ಕೆಲಗಳಲ್ಲಿ ಇದೇ ಕಾಲಘಟ್ಟಕ್ಕೆ ಸೇರುವ ಗಣಪತಿ ಮತ್ತು ಮಹಿಷಮರ್ದಿನಿಯರ ಮೂರ್ತಿ ಗಳನ್ನಿರಿಸಲಾಗಿದೆ.

ಆನೆಕನ್ನಂಬಾಡಿಯ ಕೇಶವ ದೇವಾಲಯವು ಸಂಪೂರ್ಣ ಹಾಳಾಗಿ ನೆಲಕಚ್ಚುವ ಹಂತವನ್ನು ತಲುಪಿತ್ತು. ದೇವಾಲಯವನ್ನು ಪ್ರಾಚೀನ ದೇವಾಲಯಗಳ ಸಂರಕ್ಷಣೆ ಯಲ್ಲಿ ತೊಡಗಿರುವ ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್ ಮತ್ತು ಸ್ಥಳೀಯರ ನೆರವಿನಿಂದ ಮೂಲ ಸ್ವರೂಪಕ್ಕೆ ಧಕ್ಕೆಯಾಗದಂತೆ ಜೀರ್ಣೋದ್ಧಾರ ಮಾಡಲಾಗಿದೆ. ಕೇಶವನ ದೇವಾಲಯದ ಜೀರ್ಣೋ ದ್ಧಾರಕ್ಕೆ ಬಹಳ ಶ್ರಮಿಸಿದವರು ಆನೆಕನ್ನಂಬಾಡಿಯ ಸ್ಥಳೀಯ ನಿವಾಸಿಗಳಾದ,ಪೋಲೀಸ್ ಇಲಾಖೆಯ ನಿವೃತ್ತ ಅಧಿಕಾರಿ ಶ್ರೀವಿಶ್ವನಾಥ್‌ರವರು, ಶ್ರೀಯುತರು ತಮ್ಮ ಊರಿನ ಸುಂದರ ದೇವಾಲಯವನ್ನು ಉಳಿಸಬೇಕೆಂಬ ಮಹತ್ವಾಕಾಂಕ್ಷೆಯಿಂದ ಆಸಕ್ತಿ ವಹಿಸಿ, ಧರ್ಮೋತ್ಥಾನ ಟ್ರಸ್ಟ್, ಜೊತೆ ಕೈಜೋಡಿಸಿ ದೇವಾಲಯವು ಕಾಲ ಗರ್ಭಕ್ಕೆ ಸೇರಿ ಇತಿಹಾಸ ಸೇರುವುದನ್ನು ತಪ್ಪಿಸುವ ಮಹತ್ ಕಾರ್ಯವನ್ನು ಮಾಡಿದ್ದಾರೆ.

ಈ ನಿಟ್ಟಿನಲ್ಲಿ ಶ್ರೀ ವಿಶ್ವನಾಥ್ ರವರು ಅಭಿನಂದ ನಾರ್ಹರು.

**ಹೀಗೆ ಬನ್ನಿ:**

ಹಾಸನ ಜಿಲ್ಲೆ, ಹೊಳೆ ನರಸೀಪುರ ತಾಲ್ಲೂಕು, ಆನೆಕನ್ನಂಬಾಡಿಯ ತಾಲ್ಲೂಕು ಕೇಂದ್ರದಿಂದ ಸುಮಾರು 25 ಕಿ.ಮೀ. ದೂರದಲ್ಲಿದೆ. ಮೈಸೂರು-ಹಾಸನ ರಸ್ತೆಯಲ್ಲಿ ಸಿಗುವ ದೊಡ್ಡ ಹಳ್ಳಿಯಿಂದ 3 ಕಿ.ಮೀ. ದೂರದಲ್ಲಿ ಆನೆಕನ್ನಂಬಾಡಿಯಿದೆ. ಕೆ.ಆರ್.ನಗರ ಕಡೆಯಿಂದ ಬರುವ ಪ್ರವಾಸಿಗರು ಚುಂಚನಕಟ್ಟೆ, ಮಿರ್ಲೆ,ಸಾಲಿಗ್ರಾಮ,ಕೇರಳಾಪುರದ ದೇವಾಲಯಗಳನ್ನು ದರ್ಶಿಸಿ ಕೇರಳಾಪುರದಿಂದ 23 ಕಿ.ಮೀ.ದೂರವಿರುವ ಆನೆಕನ್ನಂಬಾಡಿ ಯನ್ನು ತಲುಪಬಹುದು ಅಥವಾ ಮೈಸೂರು - ಕೆ.ಆರ್.ನಗರ - ಭೇರ್ಯ, ದೊಡ್ಡಹಳ್ಳಿಯ ಮೂಲಕವು ಕೇಶವ ದೇವಾಲಯವಿರುವ ಆನೆಕನ್ನಂಬಾಡಿಯನ್ನು ತಲುಪಬಹುದು.


## STATEMENT ABOUT OWNERSHIP AND OTHER PARTICULARS ABOUT

**SAPTHAGIRI**

**(MONTHLY)**
**FORM IV**

*See Rule 8*

| | | |
|---|---|---|
| 1. Place of Publication | : | TIRUPATI |
| 2. Periodicity of its Publication | : | Monthly |
| 3. Printer's Name | : | Sri P. Ramaraju, M.A. |
| Whether citizen of India | : | Yes |
| Address | : | S.O.,T.T.D.Press Compound, K.T.Road, Tirupati. |
| 4. Publisher's Name | : | Dr. K. Radha Ramana, M.A.,M.Phil., Ph.D. |
| Whether citizen of India | : | Yes |
| Address | : | Chief Editor Office, T.T.D.Press Compound ,K.T.Road, Tirupati. |
| 5. Editor's Name | : | Dr. V.G.Chokkalingam, M.A., Ph.D. |
| Whether citizen of India | : | Yes |
| Address | : | Chief Editor Office, T.T.D.Press Compound ,K.T.Road, Tirupati. |
| 6. Name and address of individuals who own the News paper and partners or share holders holding more than one percent of the Total Capital | } | Tirumala Tirupati Devasthanams |

*I, K. Radha Ramana, hereby declare that the particulars given above are true to the best of my knowledge and belief.*

TIRUPATI
Date : 29-2-2024

**(Sd.) Dr. K. Radha Ramana**
*Signature of the Publisher*



# ಹೋಳಿ ಹಬ್ಬ

– ಬೆಳವಾಡಿ ಅಶ್ವತ್ಥನಾರಾಯಣ
8105915747

ಭಾರತ ದೇಶವು ಅನೇಕ ಧರ್ಮದ ಜನರಿರುವ ದೇಶ ವಾಗಿರುವುದು. ಭಾರತೀಯ ಸಂಸ್ಕೃತಿಯು ಒಂದು ಸಮ್ಮಿಶ್ರ ಜೀವನ ಪದ್ಧತಿಯಾಗಿರುವುದು.

ಅನೇಕತೆಯಲ್ಲಿ ಏಕತೆ,ವೈವಿಧ್ಯತೆಯಲ್ಲಿ ಏಕತೆ ಇಲ್ಲಿನ ವಿಶೇಷವಾಗಿರುವುದು. ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಅನೇಕ ಹಬ್ಬಗಳನ್ನು ಆಚರಿಸುತ್ತಾ ಬಂದಿರುವುದು ಗಮ ನಾರ್ಹ.

ಹಬ್ಬಗಳು ಮಾನವನ ಜೀವನದ ಅವಿಭಾಜ್ಯ ಅಂಗ ಗಳಾಗಿವೆ.

ಮಾನವನು ಸುಧಾರಿತ ರೀತಿಯಲ್ಲಿ ಬದುಕಲು ಪ್ರಾರಂಭಿಸಿದಾಗಲೇ ಹಬ್ಬಗಳು ಸಹ ಆಚರಣೆಯಲ್ಲಿ ಬಂದವು.

ಸಾರ್ವಜನಿಕವಾಗಿ ಉತ್ಸವ, ಜಾತ್ರೆ, ಕೆಲವು ಹಬ್ಬಗಳು ಆಚರಣೆಗೆ ಬಂದವು. ಅವುಗಳಲ್ಲಿ ಹೋಳಿಹಬ್ಬ ಸಹ ಒಂದು.

ಹೋಳಾಕ, ಹೋಳಿಕ ಹೋಳೀ, ಫಾಲ್ಗುನಿಕಾ, ವಸಂ ತೋತ್ಸವ, ಕಾಮನಹಬ್ಬ, ಕಾಮನ ಹುಣ್ಣಿಮೆ, ಕಾಮದಹನ ಹೂತಾಶನೀ ಹುಣ್ಣಿಮೆ ಇತ್ಯಾದಿ ಹೆಸರುಗಳಿಂದ ಕರೆಯಲ್ಪ ಡುವ ಈ ಹಬ್ಬ ಭಾರತದೇಶದ ಎಲ್ಲ ಕಡೆಗಳಲ್ಲಿಯೂ ಆಚರಿ ಸಲ್ಪಡುವ ಒಂದು ಪ್ರಸಿದ್ಧ ಪರ್ವ ಹಬ್ಬವನ್ನು ಆಚರಿಸುವ ದಿವಸ ಮತ್ತು ಆಚರಣೆಯ ವಿಧಾನಗಳಲ್ಲಿ ವ್ಯತ್ಯಾಸಗಳಿದ್ದರೂ ಆಚರಣೆ ಮಾತ್ರ ಇಡೀ ದೇಶದಲ್ಲಿ ಕಂಡು ಬರುತ್ತದೆ.

ಕೆಲವು ಕಡೆಗಳಲ್ಲಿ ವಸಂತ ಪಂಚಮಿ ಮಾಘ ಶುಕ್ಲ ಪಂಚಮಿಯಿಂದ ಪ್ರಾರಂಭ ಮಾಡಿದರೂ ಫಾಲ್ಗುಣ ಪೂರ್ಣಿಮೆ ಯಂದೇ ಹಬ್ಬದ ವಿಶೇಷವಾದ ಆಚರಣೆ,ಸೌದೆಯ ರಾಶಿಯನ್ನು ಸುಡುವುದು, ಗುಲಾಬಿ ವರ್ಣದ ನೀರನ್ನು ಎರಚಾಡುವುದು, ಸಂತೋಷ ಸಂಭ್ರಮದ ಕುಣಿದಾಟ, ಇತ್ಯಾದಿಗಳು ಸಾಮಾನ್ಯ ವಾಗಿ ಎಲ್ಲ ಕಡೆಗಳಲ್ಲೂ ಕಂಡು ಬರುತ್ತದೆ. ವಂಗ ದೇಶದಲ್ಲಿ ಮಾತ್ರ ಅಂದು ಶ್ರೀಕೃಷ್ಣನಿಗೆ ಡೋಲೋತ್ಸವವನ್ನು ಮಾಡುವ ರೂಢಿಯೂ ಇದೆ.

ಹೀಗೆ ಹೋಳೀ ಹಬ್ಬದ ಆಚರಣೆಯ ವಿಧಿಗಳಲ್ಲಿ ವೈವಿಧ್ಯ ವಿದ್ದರೂ ಹಬ್ಬದ ಆಚರಣೆಯು ಮಾತ್ರ ದೇಶದ ಎಲ್ಲಾ ಕಡೆ ಗಳಲ್ಲೂ ಕಂಡು ಬರುತ್ತದೆ.

ಭಾರತ ದೇಶದ ಅತ್ಯಂತ ಪ್ರಮುಖವಾದ ಪರ್ವಗಳಲ್ಲಿ ಇದು ಒಂದು ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಈ ಹಬ್ಬವನ್ನಾಚರಿಸಲು ಅನೇಕ ಪೌರಾಣಿಕ ಕಾರಣಗಳು ಇವೆ.

1)ಕಾಮದಹನದ ಕಥೆ
2)ಹೋಳಿಕಾ ತ್ಯಾಗದ ಕಥೆ
3)ರಘುರಾಜನ ರಾಜ್ಯದಲ್ಲಿ ಮಕ್ಕಳನ್ನು ಪೀಡಿಸುತ್ತಿದ್ದ ನರಭಕ್ಷಕಿ ರಾಕ್ಷಸಿ ಢುಂಢಿಯ ಕಥೆ ಇತ್ಯಾದಿ.

**1) ಕಾಮದಹನ ಕಥೆ ಇಂತಿದೆ :**

ಭಗವಾನ್ ಶಿವನು ತನ್ನ ಮೂರನೆಯ ಕಣ್ಣಾದ ಫಾಲ ನೇತ್ರವನ್ನು ತೆರೆದು ಕಾಮದೇವನನ್ನು ದಹಿಸಿ ಭಸ್ಮಮಾಡಿದ ಕಥೆಯು ಪುರಾಣಗಳಲ್ಲಿ ಕಂಡು ಬರುವುದು. ಕಥೆಯ ಹಿನ್ನೆಲೆ- ತಾರಕಾಸುರನ ಕಾಟದಿಂದ ದೇವತೆಗಳು ಕಂಗಾಲಾದರು. ಬ್ರಹ್ಮನನ್ನು ಕಂಡು ತಾರಕಾಸುರನ ಅಂತ್ಯದ ಬಗ್ಗೆ ಕೇಳಿದರು. ಶಿವನ ಪುತ್ರನಿಂದಲೇ ತಾರಕಾಸುರನ ವಧೆ ಸಾಧ್ಯವೆಂದು ಬ್ರಹ್ಮ ತಿಳಿಸಿದನು. ಆ ಸಮಯದಲ್ಲಿ ಶಿವನು ಯೋಗ ಸಮಾಧಿಯಲ್ಲಿದ್ದನು. ಆಗ ದಾಕ್ಷಾಯಿಣಿ, ಪಾರ್ವತಿಯಾಗಿ ಜನಿಸಿ ಹಿಮಾಲಯದಲ್ಲಿ ತಪಸ್ಸಿನಲ್ಲಿದ್ದಳು.

ದೇವತೆಗಳು ಪರಶಿವನ ಯೋಗದ ಸಮಾಧಿ ಭಂಗವನ್ನು ಮಾಡುವ ಕಾರ್ಯಕ್ಕೆ ರತಿ ಮನ್ಮಥರನ್ನು ಕಳಿಸಿದರು. ಅವರು ಪಾರ್ವತೀ ದೇವಿಯನ್ನು ಕಂಡು ತಾವು ಬಂದ ಕಾರಣ ಹೇಳಿದರು. ಸುಂದರ ಪರಿಸರ ನಿರ್ಮಿಸಿ ಹೂ ಬಾಣಗಳಿಂದ ಮನ್ಮಥನು ಶಿವನ ಮೇಲೆ ಬಾಣ ಪ್ರಯೋಗ ಮಾಡಿದನು. ಶಿವನ ಯೋಗ ಸಮಾಧಿಗೆ ಭಂಗವಾಗಿ ಮೂರನೇ ಕಣ್ಣಿನಿಂದ ಕಾಮನನ್ನು ಭಸ್ಮಮಾಡಿದನು. ಪಾರ್ವತಿಯನ್ನು ನೋಡಲೇ ಇಲ್ಲ. ರತಿಯು ಪತಿಯನ್ನು ಬದುಕಿಸಬೇಕೆಂದು ಪಾರ್ವತಿಯನ್ನು ಬೇಡಿಕೊಂಡಳು. ಪಾರ್ವತಿಯು ತಪಸ್ಸಿನಿಂದ ಶಿವನನ್ನು ಒಲಿಸಿಕೊಂಡಳು ಮತ್ತು ಮನ್ಮಥನನ್ನು ಬದುಕಿಸಬೇಕೆಂದು ಕೇಳಿಕೊಂಡಳು ಅದರಂತೆ ಪರಮೇಶ್ವರನು ರತಿಯನ್ನು ಸಮಾಧಾನ ಪಡಿಸಿ ಮನ್ಮಥನನ್ನು ಅನಂಗನಾಗಿ ಎಲ್ಲರ ಹೃದಯದಲ್ಲಿರುವಂತೆ ಮಾಡಿದನು. ಲೋಕ ಕಲ್ಯಾಣಾರ್ಥವಾಗಿ ಭಸ್ಮವಾದ ಕಾಮನನ್ನು ಮತ್ತೆ ರತಿಗೆ ಪತಿಯಾಗುವಂತೆ ಪರಶಿವನು ಕರುಣೆಯಿಂದ ಹರಸಿದನು.

ಈ ರೀತಿಯಲ್ಲಿ ಶಿವನಿಂದ ಕಾಮನು ಭಸ್ಮವಾದ ದಿನವಾದ್ದರಿಂದ ಫಾಲ್ಗುಣ ಪೌರ್ಣಮಿಯನ್ನು ಕಾಮನ ಹುಣ್ಣಿಮೆ, ಹೂತಾಶನೀ ಹುಣ್ಣಿಮೆ ಎಂದು ಕರೆದಿದ್ದಾರೆ. ಈ ಘಟನೆಯ ನೆನಪಿಗಾಗಿ ಕಾಮನ ಗೊಂಬೆಯನ್ನು ಮಾಡಿ ಸುಟ್ಟು ಭಸ್ಮ ಧರಿಸುತ್ತಾರೆ.

ವಸಂತೋತ್ಸವ ಸಮಯದಲ್ಲಿ ಈ ಹಬ್ಬ ಬರುವುದು. ಹುಣ್ಣಿಮೆಯ ದಿನ ರತಿ-ಮನ್ಮಥರನ್ನು ಮಂಟಪದಲ್ಲಿಟ್ಟು ಪೂಜಿಸುತ್ತಾರೆ. ಪಂಚಮಿಯಂದು ಕಾಮದಹನ ಮಾಡಿ ಓಕಳಿಯಾಡುವುದು,ಬಣ್ಣ ಎರಚಿಕೊಳ್ಳುವುದು, ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ರೂಢಿಯಲ್ಲಿದೆ. ಉತ್ತರ ಭಾರತದಲ್ಲಿ ಬಿಳಿವಸ್ತ್ರ ಧರಿಸಿ, ಸಿಹಿ ಹಂಚಿ ಬಣ್ಣ ಹಚ್ಚಿಕೊಂಡು ಬಣ್ಣದ ನೀರಿನಿಂದ ಸಿಂಪಡಿಸಿಕೊಳ್ಳುತ್ತ ಪಿಚಕಾರಿಯಿಂದ ಬಣ್ಣದ ನೀರಿನಿಂದ ಹೊಡೆದುಕೊಳ್ಳುತ್ತ ಹಾಡುತ್ತಾ ನಲಿಯುತ್ತಾರೆ.

ಸಮೂಹ ನೃತ್ಯದಲ್ಲಿ ತೊಡಗುತ್ತಾರೆ. ಉತ್ತರ ಕರ್ನಾಟಕದಲ್ಲಿ ಓಕಳಿ ದಿನವನ್ನು ರಂಗಪಂಚಮಿ ಎಂದು ಕರೆಯುತ್ತಾರೆ.

"ಕಾಮವು": - ಕಾಮ, ಕ್ರೋಧ, ಲೋಭ,ಮೋಹ, ಮದ, ಮಾತ್ಸರ್ಯ ಎಂಬ ಅರಿಷಡ್ವರ್ಗದಲ್ಲಿ ಸೇರಿ ಬಂದಾಗ ತ್ಯಾಜ್ಯ. ಅದೇ "ಕಾಮವು": ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಪುರುಷಾರ್ಥಚತುಷ್ಟಯವರ್ಗದಲ್ಲಿ ಸೇರಿ ಬಂದಾಗ ಅದು ಪೂಜ್ಯ.

ಪ್ರಕೃತಪರ್ವದಲ್ಲಿ ಕಾಮನನ್ನು ಪೂಜಿಸುವುದು ಮತ್ತು ಸುಟ್ಟು ಹಾಕುವುದು ಎರಡೂ ಧರ್ಮಸಮ್ಮತವೇ ಆಗಿದೆ. ಆತನು ಧರ್ಮಕ್ಕೆ ಅನುಕೂಲವಾಗಿ ಬಂದಾಗ ಅರ್ಥಿಗಳು ಆತನನ್ನು ಆರಾಧಿಸಬೇಕು. ತಪಸ್ಸಂಯಮಕ್ಕೆ ವಿರೋಧವಾಗಿ ಬಂದಾಗ ಆತನನ್ನು ಧ್ವಂಸಮಾಡಬೇಕು ಎಂಬ ಪಾಠವನ್ನು ಈ ಪದ್ಧತಿಯು ನಮಗೆ ಮನವರಿಕೆ ಮಾಡಿ ಕೊಡುತ್ತದೆ. ಆದ್ದರಿಂದ ಅದು ಕಾಮ ಪೂಜೆಯ ಹಬ್ಬ ಮತ್ತು ಕಾಮದಹನದ ಹಬ್ಬ ಎರಡೂ ಆಗುತ್ತದೆ.

ಪರಮೇಶ್ವರನನ್ನು ಒಲಿಸಿಕೊಳ್ಳಲು ನಮ್ಮ ಮನದ ಐಹಿಕ ಕಾಮನೆಗಳನ್ನು ಸುಟ್ಟು ಪರಿಶುದ್ಧರಾಗಿ, ಧರ್ಮ ಕರ್ಮ, ಜ್ಞಾನಗಳನ್ನು ಪಡೆಯಬೇಕೆಂಬುದು ಈ ಹಬ್ಬದ ಹಿಂದಿರುವ ಉದ್ದೇಶವಾಗಿರುವುದು.

**2. "ಹೋಳಿಕಾ ತ್ಯಾಗದ ಕಥೆ :**

"ಹೋಳಿಕೋತ್ಸವ" ಎಂತಲೂ ಕರೆಯಲ್ಪಡುವ ಈ ಹಬ್ಬ ಅತ್ಯಂತ ಜನಪ್ರಿಯವಾದದು ಇಡೀ ರಾಷ್ಟ್ರದಲ್ಲಿ ಅಪ್ಪಟ

ಮನರಂಜನೆಯೇ ಮುಖ್ಯ ಲಕ್ಷಣವಾಗಿರುವ ಈ ಹಬ್ಬದಲ್ಲಿ ಹಿಂದೂ ಸಮಾಜದ ಎಲ್ಲಸ್ತರಗಳ ಜನರೂ ಪಾಲ್ಗೊಳ್ಳುತ್ತಾರೆ.

ಹಿಂದೆ "ಹೋಳಿಕಾ" ಎಂದು ಕರೆಯಲಾಗುತ್ತಿದ್ದ ಈ ಹಬ್ಬ ಬಹಳ ಪ್ರಾಚೀನವಾದದ್ದು. ಜೈಮಿನಿಯ ಪೂರ್ವಮೀಮಾಂಸಾಸೂತ್ರಗಳು "ಕಾಠಕ ಗುಹ್ಯ ಸೂತ್ರಗಳು" ಇಂಥಾ ಪ್ರಾಚೀನ ಧಾರ್ಮಿಕ ಗ್ರಂಥಗಳಲ್ಲಿ ಈ ಹಬ್ಬದ ಉಲ್ಲೇಖ ಇರುವುದರಿಂದ ಕ್ರಿಸ್ತಪೂರ್ವ ಅನೇಕ ಶತಮಾನಗಳಿಂದ ಇದರ ಆಚರಣೆ ಇದ್ದಿರಬೇಕು. ಮೊದಮೊದಲು ವಿವಾಹಿತ ಸ್ತ್ರೀಯರು "ರಾಕಾ" ಎಂದು ಕರೆಯಲ್ಪಡುವ ಪೂರ್ಣಚಂದ್ರನನ್ನು ಆರಾಧಿಸುತ್ತ ತಮ್ಮ ಕುಟುಂಬಗಳ ಕ್ಷೇಮಕ್ಕಾಗಿ ಆಚರಿಸುತ್ತಿದ್ದ ಹಬ್ಬ ಇದು.

ಫಾಲ್ಗುಣ ಪೂರ್ಣಿಮೆಯನ್ನು ವರ್ಷದ ಕೊನೆಯ ದಿನವೆಂದು ಪರಿಗಣಿಸಲಾಗುತ್ತಿತ್ತು. ಹೊಸ ವರ್ಷದ ವಸಂತ ಋತು ಮರುದಿನದಿಂದ ಪ್ರಾರಂಭವಾಗುತ್ತಿತ್ತು . ಈ ಕಾರಣದಿಂದ ಪೂರ್ಣಿಮಾ ಚಂದ್ರನ ಆರಾಧನೆಯನ್ನೊಳಗೊಂಡ ಹೋಳಿಕಾ ಹಬ್ಬ ಮರುದಿನ ಬರುವ ಹೊಸ ವರ್ಷದ ವಸಂತವನ್ನು ಸಂಭ್ರಮದಿಂದ ಕುಣಿದು ಬರಮಾಡಿಕೊಳ್ಳುವ ಹಬ್ಬವಾಗಿತ್ತು. ಬಹುಶಃ ಈ ಕಾರಣಕ್ಕಾಗಿಯೇ ಈ ಹಬ್ಬ "ವಸಂತ ಮಹೋತ್ಸವ ಮತ್ತು ಕಾಮಮಹೋತ್ಸವ" ಎಂದು ಪ್ರಸಿದ್ಧವಾಯಿತೆಂದು ತಿಳಿದು ಬರುತ್ತದೆ.

**"ಹೋಲಿಕಾ ತ್ಯಾಗದ ಕಥೆ ಈ ರೀತಿಯಿದೆ"**

ಹಿಂದೆ ಹಿರಣ್ಯಕಶಿಪು ಎಂಬ ರಾಕ್ಷಸನಿದ್ದನು. ಅವನ ಸಹೋದರಿ"ಹೋಲಿಕಾ"ಅಗ್ನಿಯಿಂದಲೇ ಆಕೆಯ ಮರಣವಾಗಲಿ ಎಂದು ಶಾಪವಿತ್ತು. ಹಿರಣ್ಯಕಶಿಪು ಕ್ರೂರ ರಾಕ್ಷಸನಾದರೂ ಅವನ ಮಗ ಹರಿಭಕ್ತನಾಗಿದ್ದನು. ತನ್ನ ವೈರಿಯ ಭಕ್ತನಾದ ಮಗನನ್ನು ಕೊಲ್ಲಿಸಲು ಹಿರಣ್ಯಕಶಿಪು ನಾನಾ ವಿಧ ಪ್ರಯತ್ನ ಮಾಡಿದನು. ಪರ್ವತದಿಂದ ಬೀಳಿಸಿದನು,ವಿಷ ಕುಡಿಸಿದನು,ಬೆಂಕಿಯಿಂದ ಸುಡಲು ನಿರ್ಧರಿಸಿದನು, ಯಾವುದೂ ಸಫಲವಾಗಲಿಲ್ಲ. ವಿಷ್ಣುಭಕ್ತ ಬಾಲಕ ಪ್ರಹ್ಲಾದನನ್ನು ಕೊಲ್ಲಲು ಹವಣಿಸಿದ ದಾನವ ರಾಜ, ಹಿರಣ್ಯಕಶಿಪುವಿನ ಸೋದರಿ "ಹೋಲಿಕಾ" ಪ್ರಹ್ಲಾದನನ್ನು ಎತ್ತಿಕೊಂಡು ಚಿತೆಯೇರಿ ತನ್ನ ಉಡಿಯಲ್ಲಿ ಕೂರಿಸಿಕೊಂಡು, ಚಿತೆಗೆ ಬೆಂಕಿ ಇಡಿಸಿಕೊಂಡು ತಾನು ಸುಟ್ಟು ಬೂದಿಯಾದಳು. ಆದರೆ ಮಗು ಪ್ರಹ್ಲಾದನು ಅಗ್ನಿ ನಾರಾಯಣನಿಂದ ರಕ್ಷಿಸಲ್ಪಟ್ಟನು.



ಹೋಲಿಕಾಳ ದಹನವು ಅವಳ ತ್ಯಾಗ ಗುಣವನ್ನು ತಿಳಿಸುವ ಪರ್ವವಾಗಿ ಹೋಲಿ ಹುಣ್ಣಿಮೆ ಎನಿಸಿತು.

**3. ರಘುರಾಜನ ರಾಜ್ಯದಲ್ಲಿ ಮಕ್ಕಳನ್ನು ಪೀಡಿಸುತ್ತಿದ್ದ ನರಭಕ್ಷಕಿ ರಾಕ್ಷಸಿ "ಢುಂಡಿ"ಯ ಕಥೆ:**

ಹೋಳಿ ಹಬ್ಬದ ಬಗ್ಗೆ ಯುಧಿಷ್ಠಿರ ಕೃಷ್ಣ ಸಂವಾದ ರೂಪದಲ್ಲಿರುವ ಈ ಕಥೆಯಲ್ಲಿ ರಾಜಾ ಯುಧಿಷ್ಠಿರನು, ಶ್ರೀಕೃಷ್ಣನನ್ನು ಫಾಲ್ಗುಣ ಶುದ್ಧ ಹುಣ್ಣಿಮೆಯ ವಿಶೇಷತೆಯ ಬಗ್ಗೆ ವಿವರವಾಗಿ ತಿಳಿಸಬೇಕೆಂದು ಪ್ರಾರ್ಥಿಸಲಾಗಿದೆ, ಧರ್ಮರಾಜನ ಈ ಸಂದೇಹಗಳಿಗೆ ಶ್ರೀಕೃಷ್ಣನು ಉತ್ತರಿಸುತ್ತಾ : "ಕುಂತೀಪುತ್ರ - ಕೇಳು" ನಮ್ಮ ಭಾರತ ಖಂಡವು ಹಿಂದೊಮ್ಮೆ ಧರ್ಮಾತ್ಮನೂ, ಪ್ರಜಾವತ್ಸಲನೂ ಆದ ರಘು ಎಂಬ ರಾಜನ ಪಾಲನೆಯಲ್ಲಿತ್ತು. ಪ್ರಜೆಗಳು ನೆಮ್ಮದಿಯಾಗಿ ಬಾಳಿಕೊಂಡಿದ್ದರು. ಹೀಗಿರುವಲ್ಲಿ ಒಮ್ಮೆ ಆ ರಾಜ್ಯಕ್ಕೆ ಒಂದು ಪೀಡೆ ಒದಗಿತು. "ಢೋಂಢಾ" ಎಂಬ ಮಹಾರಾಕ್ಷಸಿಯು ರಘುವಿನ ರಾಜ್ಯಕ್ಕೆ ಬಂದು ಮಕ್ಕಳನ್ನು ಕಾಡಲಾರಂಭಿಸಿದಳು. ಇದರಿಂದ ಪ್ರಜೆಗಳು ಭಯಪಟ್ಟು ರಾಕ್ಷ ಸಿಯ ಉಪಟಳದಿಂದ ತಮ್ಮ ಮಕ್ಕಳನ್ನು ಕಾಪಾಡುವಂತೆ 'ರಘು'ವಿನಲ್ಲಿ ಮೊರೆಯಿಟ್ಟರು. ಆಕಸ್ಮಿಕವಾಗಿ ಒದಗಿದ ಈ ಉಪದ್ರವದ

ವಿಚಾರವನ್ನು ಕೇಳಿದ ರಘುಮಹಾರಾಜನು ತನ್ನ ಗುರುವಾದ ವಸಿಷ್ಠರನ್ನು ಈ ಬಗ್ಗೆ ವಿಚಾರಿಸಿದನು.

ಮಹರ್ಷಿವಸಿಷ್ಠರು"ರಾಜಾ ಈ ರಾಕ್ಷಸಿಯು ಮಾಲಿ ಎಂಬ ದೈತ್ಯನ ಮಗಳು ಶಿವನ ವರಬಲದಿಂದ ಕೊಬ್ಬಿದ್ದಾಳೆ. ಮಾನವರಿಂದಾಗಲಿ, ದೇವದಾನವರಿಂದಾಗಲಿ,ಶಸ್ತ್ರಗಳಿಂದಾಗಲಿ, ಶೀತೋಷ್ಣ ವರ್ಷಾಕಾಲಗಳಲ್ಲಾಗಲಿ,ಹಗಲು ರಾತ್ರಿಗಳಲ್ಲಾಗಲಿ, ಮನೆಯಲ್ಲಾಗಲಿ,ಹೊರಗಾಗಲಿ ಇವಳಿಗೆ ಮರಣವಿಲ್ಲ. ಆದರೆ ಪರಶಿವನು ಇವಳಿಗೆ ಹೇಳಿದ ಒಂದು ಎಚ್ಚರಿಕೆಯ ಮಾತಿನಂತೆ ಇವಳಿಗೆ ಹುಚ್ಚರಿಂದ, ಮಕ್ಕಳಿಂದ ಋತುಸಂಧಿ ಕಾಲದಲ್ಲಿ ಭಯ-ಅಪಾಯವುಂಟು. ಆದ್ದರಿಂದ ಇವಳನ್ನು ನಿಗ್ರಹಿಸುವ ಶಕ್ತಿ ಮಕ್ಕಳಿಗೆ ಮಾತ್ರ ಇದೆ. ಮುಂದೆ ಬರುವ ಫಾಲ್ಗುಣ ಮಾಸದ ಹುಣ್ಣಿಮೆಯ ರಾತ್ರಿ, ಅದು ಬೇಸಿಗೆಯ ಪ್ರಾರಂಭ ಕಾಲ ಮಕ್ಕಳು ಖಡ್ಗಗಳನ್ನು ಹಿಡಿದು ಯುದ್ಧೋತ್ಸಾಹದಿಂದ ಬಯಲಿನಲ್ಲಿ ಮೆರೆಯಲಿ, ಒಣಹುಲ್ಲು ಪುರಲೆಗಳಿಂದ ಬೆಂಕಿಯನ್ನು ಪ್ರಜ್ವಲಿಸಿ ಅದರಲ್ಲಿ ರಕ್ಷೋಘ್ನ ಮಂತ್ರಗಳಿಂದ ಹೋಮ ಮಾಡಲಿ ಮಕ್ಕಳು ಕತ್ತಿಯನ್ನು ಝಳಪಿಸುತ್ತಾ ಬೆಂಕಿಯ ಉರಿಯ ಸುತ್ತ ವೀರಭಟರಂತೆ ಪ್ರದಕ್ಷಿಣೆ ಮಾಡಲಿ, ಮನಸ್ಸಿಗೆ ಬಂದಂತೆ ಕೂಗಾಡಲಿ.ಆಡಬಾರದ ಮಾತನ್ನಾಡಲಿ, ಹೋಲಿಯ ಹಾಡುಗಳನ್ನು ಹೇಳಲಿ ಹೆದರಿಕೆ ಎಂಬುದೇ ಅವರಿಗೆ ಆ ದಿನ ಇಲ್ಲವಾಗಲಿ. ಹೀಗೆ ಮಾಡಿದರೆ ಆ ರಾಕ್ಷಸಿ ಭಯಪಟ್ಟು ತಾನಾಗಿಯೇ ಕ್ಷೀಣಿಸಿ ಹೋಗುತ್ತಾಳೆ." ಎಂದು ಹೇಳಿದರು.

ರಘುರಾಜನ ಪ್ರಜೆಗಳು ವಸಿಷ್ಠರ ಸಲಹೆಯನ್ನು ಚಾಚೂ ತಪ್ಪದೆ ನೆರವೇರಿಸಿದರು. ರಾಕ್ಷಸಿ ನಾಶ ಹೊಂದಿದಳು. ರಕ್ಷೋಘ್ನ ಹೋಮದ ಮಹತ್ತಿನಿಂದ ಎಲ್ಲ ದುಷ್ಟರ ದಮನವಾಯಿತು. ಸರ್ವರೋಗಗಳು ಶಾಂತವಾದದ್ದರಿಂದ ಈ ಹೋಮಕ್ಕೆ"ಹೋಲಿಕಾ" ಎಂದು ಹೆಸರಾಯಿತು. "ಅಡಾಡಾ" ಎಂದು ಅಬ್ಬರಿಸುತ್ತಾ ಮಕ್ಕಳನ್ನು ಪೀಡಿಸುತ್ತಿದ್ದ ಮಾಲಿಯ ಮಗಳ ಮರಣವನ್ನು ನೋಡಿದ ಜನಗಳು "ಅಡಾಡಾ" ರಾಕ್ಷಸಿಯು ಸತ್ತಳು ಎಂದು ಹೇಳಿಕೊಂಡರು.

ರಾಕ್ಷಸಿಯ ನಾಶದಿಂದ ಸಂತುಷ್ಟರಾದ ರಾಜ್ಯದ ಸಮಸ್ತರು ಮಾರನೆಯ ದಿವಸ ವಸಂತೋತ್ಸವನ್ನು ಆಚರಿಸಿದರು.

ಭವಿಷ್ಯೋತ್ತರ ಪುರಾಣದ ಈ ಮೇಲಿನ ಕಥೆಗೆ ಹೊಂದಿ ಕೊಂಡಂತೆ ಧರ್ಮಸಿಂಧು,ಜ್ಯೋತಿರ್ನಿಬಂಧ, ಗಾಥಾ ಸಪ್ತಶತಿ, ಮುಂತಾದ ಗ್ರಂಥಗಳಲ್ಲಿ ಹೋಳಿಹಬ್ಬದ ಆಚರಣೆಯ ಬಗ್ಗೆ ವಿವರಗಳಿವೆ ಮುಖ್ಯವಾಗಿ ಹೋಳಿಹಬ್ಬ ಬಹು ಹಿಂದಿನ ಕಾಲದಿಂದಲೂ ಆಚರಣೆಯಲ್ಲಿರುವ ಹಬ್ಬ. ಗ್ರಾಮದ ನೈರ್ಮಲ್ಯವನ್ನು ಕಾಪಾಡುವುದಕ್ಕೂ ಜನಗಳಲ್ಲಿ ಪರಸ್ಪರ ವಿಶ್ವಾಸ ಮತ್ತು ಐಕಮತ್ಯ ಸಾಧಿಸುವುದಕ್ಕೂ ಎಲ್ಲಕ್ಕಿಂತಲೂ ಹೆಚ್ಚಾಗಿ ಶಿಸ್ತು, ಭಯ ಇತ್ಯಾದಿ ಕಾರಣಗಳಿಂದ ಮಕ್ಕಳಲ್ಲಿ ಬಲವಂತವಾಗಿ ಸುಪ್ತವಾಗಿರಬಹುದಾದ ಮನೋಭಾವಗಳ ವಿಕಾಸಕ್ಕೆ ಸ್ವತಂತ್ರ ವಾತಾವರಣವನ್ನು ಕಲ್ಪಿಸುವುದಕ್ಕೂ ಹೋಳಿಹಬ್ಬದ ವಾರ್ಷಿಕ ಆಚರಣೆ ರೂಢಿಗೆ ಬಂದಿರಬಹುದೆಂದು ತೋರುತ್ತದೆ.

## ತಿರುಪತಿ ಶ್ರೀ ಕೋದಂಡ ರಾಮಾಲಯ ಚರಿತ್ರೆ

ತಿರುಪತಿಯಲ್ಲಿರುವ ಶ್ರೀಕೋದಂಡರಾಮಸ್ವಾಮಿ ದೇವಾಲಯವು ತಿರುಮಲೆ ಶ್ರೀವೆಂಕಟೇಶ್ವರಸ್ವಾಮಿ ದೇವಾಲಯಕ್ಕೆ ಹೊಂದಿಕೊಂಡಿರುವ ಅತ್ಯಂತ ಹಳೆಯ ದೇವಾಲಯಗಳಲ್ಲಿ ಪ್ರಮುಖವಾಗಿದೆ. ತ್ರೇತಾಯುಗದಲ್ಲಿ ರಾವಣನ ವಧೆಯ ನಂತರ ಶ್ರೀರಾಮಚಂದ್ರನು ಸೀತಾ ಲಕ್ಷ್ಮಣರೊಡನೆ ಕೆಲಕಾಲ ಇಲ್ಲಿಯೇ ಇದ್ದನು. ಇದರ ಸಂಕೇತವಾಗಿ ಜಾಂಬವಂತನ ಇಚ್ಛೆಯ ಮೇರೆಗೆ ಸೀತಾ ರಾಮಲಕ್ಷ್ಮಣ ಇಲ್ಲಿಯೇ ಅರ್ಚಾಮೂರ್ತಿಯಾಗಿ ನೆಲೆಸಿದರು. ಈ ಆಲಯವನ್ನು ಜಾಂಬವಂತನು ಪ್ರತಿಷ್ಠಾಪಿಸಿದನು.

10ನೇ ಶತಮಾನದಲ್ಲಿ ಚೋಳ ರಾಜರು ಈ ದೇವಾಲಯವನ್ನು ಪುನರ್‌ನಿರ್ಮಿಸಿದ್ದರು. 15ನೇ ಶತಮಾನದಲ್ಲಿ ಸೀತಾರಾಮರ ಬ್ರಹ್ಮೋತ್ಸವಗಳು ಅದ್ದೂರಿಯಾಗಿ ನಡೆಯಿತು. ಈ ದೇವಾಲಯದ ಅಭಿವೃದ್ಧಿಗೆ ವಿಜಯನಗರದ ರಾಜರು ಬಹಳ ಶ್ರಮಿಸಿದರು. 1817 ರಲ್ಲಿ ಈ ದೇವಾಲಯದ ವಿಮಾನವನ್ನು ಪುನಃಸ್ಥಾಪಿಸಲಾಯಿತು.

ಶ್ರೀರಾಮನು ಧರ್ಮದ ಪ್ರತಿರೂಪ, ಇಷ್ಟಾರ್ಥಗಳನ್ನು ಶ್ರೀರಾಮನು ಪೂರೈಸುತ್ತಾನೆ. ಶ್ರೀರಾಮನಿಗೆ "ಭವಬಂಧ ವಿಮೋಚಕ" ಎಂದು ಹೆಸರು. ಅಂದರೆ ಬಾಂಧವ್ಯಗಳಿಂದ ಮುಕ್ತಿ ನೀಡುವವನು ಎಂದರ್ಥ.

ತಿರುಪತಿ ಪುಣ್ಯಕ್ಷೇತ್ರದಲ್ಲಿ ನೆಲೆಸಿರುವ ಸೀತಾಲಕ್ಷ್ಮಣ ಸಮೇತ ಶ್ರೀಕೋದಂಡರಾಮ ಸ್ವಾಮಿಯವರನ್ನು ದರ್ಶಿಸೋಣ.... ದರ್ಶಿಸಿ ಪುನೀತರಾಗೋಣ.....

# ವೈದಿಕ ಸಂಸ್ಕೃತಿಯ ಪ್ರವರ್ತಕ ಮನು

- ಮೂರ್ತಿರಾಮನಾಥಪುರ
99720 64322

ಪ್ರತಿಯೊಂದು ಕಲ್ಪದ ಅಂತ್ಯದಲ್ಲಿಯೂ ನೈಮಿತ್ತಿಕ ಪ್ರಳಯ ಉಂಟಾಗುತ್ತದೆ. ಹಿಂದಿನ ಕಲ್ಪದ ಅಂತ್ಯದಲ್ಲೂ ಸಹ ಈ ರೀತಿಯ ಪ್ರಳಯವಾಗುವ ಒಂದು ವಾರದ ಮುನ್ನ ದ್ರಾವಿಡ ದೇಶದ ಮಹಾರಾಜ ಸತ್ಯವ್ರತ ಕೇವಲ ನೀರನ್ನು ಕುಡಿದು ಶರೀರಯಾನವನ್ನು ನಿರ್ವಹಿಸುತ್ತಾ ಶ್ರೀಭಗವಂತನನ್ನು ಪೂಜಿಸುತ್ತಿದ್ದ, ಒಂದು ದಿನ ಕೃತಮಾಲಾ ನದಿಯ ದಡದಲ್ಲಿ ಅವನ ಜೀವನ ಸೌಹಾರ್ದಭಾವದಿಂದ ಸಂತೃಪ್ತವಾಗಿ ಭಗವಂತ ಅವನಿಗೆ : - “ಹೇ ರಾಜರ್ಷೆ! ಇಂದಿನಿಂದ ಏಳನೇ ದಿನ ಇಡೀ ತ್ರಿಲೋಕವೂ ಪ್ರಳಯ ಜಲದಲ್ಲಿ ವಿಲೀನಗೊಳ್ಳುತ್ತದೋ, ಆಗ ನಿನ್ನ ಬಳಿ ಒಂದು ಬೃಹತ್ ಹಡಗು (ನೌಕೆ) ಬಂದಿರುತ್ತದೆ. ನೀನು ಸಪ್ತರ್ಷಿಗಳ ಸಹಾಯದಿಂದ ವನಸ್ಪತಿಗಳ ಬೀಜಗಳನ್ನು ಅದರಲ್ಲಿ ಸಂಗ್ರಹಿಸಿಟ್ಟುಕೊಳ್ಳಬೇಕು. ಪ್ರಳಯನಿಶೆ ಇರುವವರೆಗೆ ನೀನು ಆ ನೌಕೆಯಲ್ಲಿದ್ದು ಮತ್ಸ್ಯರೂಪಧಾರಿಯಾದ ನನ್ನೊಂದಿಗೆ ಪ್ರಶ್ನೋತ್ತರದ ಆನಂದವನ್ನು ಹೊಂದಬೇಕು”ಎಂದು ತಿಳಿಸಿದ. ರಾಜ ಅದರಂತೆಯೇ ಮಾಡಿದ.

ಅನಂತರದಲ್ಲಿ ಬ್ರಾಹ್ಮೀನಿಶೆಯ ಅವಸಾನದಲ್ಲಿ ಹೊರಗಿನ ಹಗಲಿನ ಪ್ರಾರಂಭವಾಯಿತು. ಲೋಕಪಿತನಾದ ಬ್ರಹ್ಮನ ಒಂದು ಹಗಲಿನಲ್ಲಿ ಹದಿನಾಲ್ಕು ಮನುಗಳು ಸೃಷ್ಟಿಯಾಗುತ್ತಾರೆ.

ಯತ್ರ ಮನ್ವಂತರಾಣ್ಯಾಹುಶ್ಚತುರ್ದಶ ಪುರಾವಿದಃ॥

ವರ್ತಮಾನದ ಹಗಲಿನ ಹೆಸರು ಶ್ವೇತವರಾಹಕಲ್ಪ. ಇದರಲ್ಲಿ ಇಂದು ಏಳನೆಯ ಮನುವಿನ ಚಲನೆಯಾಗುತ್ತದೆ. ಅವನ ಹೆಸರು ಶ್ರಾದ್ಧದೇವ. ಈ ಶ್ರಾದ್ಧದೇವನೇ ಹಿಂದಿನ ಕಲ್ಪದ ಮಹಾರಾಜ ಸತ್ಯವ್ರತ.

ಸತುಸತ್ಯವ್ರತೋ ರಾಜಾ ಜ್ಞಾನವಿಜ್ಞಾನ ಸಂಯುತಃ;
ವಿಷ್ಣೋಃ ಪ್ರಸಾದಾತ್ ಕಲ್ಪೇಸ್ಮಿ ತ್ರಾಸಜ್ಜೀದ್ ವೈವಸ್ವತೋಮನುಃ॥
ಶಾದ್ಧದೇವ ವಿವಸ್ವಾನನ - ಮಗ -
ಅ)ಮನುರ್ವಿವಸ್ವತಃ ಪುತ್ರಃ ಶ್ರಾದ್ಧದೇವ ಇತಿ ಶ್ರುತಃ॥
ಆ)ಯೋಽಸ ಸಾವಸ್ಮಿನ್ ಮಹಾಕಲ್ಪೇ ತನಯಃ ಸವಿವಸ್ವತಃ॥
ಶ್ರಾದ್ಧ ದೇವ ಇತಿಖ್ಯಾತೋ ಮನುತ್ವೇ ಹರಿಣಾರ್ಪಿತಃ॥

ಶ್ರಾದ್ಧ ದೇವನಿಗೆ ಹತ್ತು ಮಕ್ಕಳಾದರು. ಇವರಲ್ಲಿ ಮೊದಲಿಗ (ಜ್ಯೇಷ್ಠ) ಇಕ್ಷ್ವಾಕು. ಈತನೇ ಭಾರತೀಯ ಇತಿಹಾಸದ ಪ್ರಸಿದ್ಧ, ವಂಶ ಪ್ರವರ್ತಕರನಾಗಿದ್ದುದು.

**ಅರ್ಜುನನಿಗೆ ಭಗವಂತ :** ಪ್ರಾಚೀನ ಕಾಲದಲ್ಲಿ ನಾನು ಈ ಯೋಗವನ್ನು ವಿವಸ್ವಾನನಿಗೆ ಉಪದೇಶಿಸಿದ್ದೆ. ಇದನ್ನೇ ವಿವಸ್ವಾನು ಮನುವಿಗೆ ಮತ್ತು ಮನು ಇಕ್ಷ್ವಾಕುವಿಗೆ ನೀಡಿದ್ದು. ಈ ಪ್ರಕರಣದಲ್ಲಿ ಗೀತೆಯಲ್ಲಿ ಯಾವ ಮನುಮಹಾರಾಜನ ಸ್ಮರಣೆ ಬರುತ್ತದೆ. ಅವನೇ ಈ ಶ್ರಾದ್ಧದೇವ ಎಂದು ತಿಳಿಸಿದ್ದ. ಈತ ಆ ಕಾಲದ ಬಹಳ ದೊಡ್ಡ ಸಮಾಜ ವ್ಯವಸ್ಥಾಪಕನಾಗಿದ್ದ. ಹಾಗಾಗಿಯೇ ಇಂದಿಗೆ ಲಕ್ಷಾಂತರ ವರ್ಷಗಳು ಕಳೆದರೂ ಸಹ ಇವನು ಮಾಡಿದ ವ್ಯವಸ್ಥೆ ವೇದಾನುಯಾಯಿ ಹಿಂದುಗಳಿಗೆ ಗೌರವಪೂರ್ಣವಾಗಿದೆ. ಇವನ ವ್ಯವಸ್ಥೆಯಲ್ಲಿ ನೂರಾರು ಮಾನನೀಯ ವಿಷಯಗಳಿವೆ. ಅದರಲ್ಲೂ ವರ್ಣ ವ್ಯವಸ್ಥೆ ಮತ್ತು ಆಶ್ರಮವ್ಯವಸ್ಥೆ ಅದ್ವಿತೀಯವಾಗಿವೆ. ಧರ್ಮ ಅರ್ಥ,ಕಾಮ ಮತ್ತು ಮೋಕ್ಷವೆಂಬ ನಾಲ್ಕು ಪುರುಷಾರ್ಥಗಳು ಇವನ ವ್ಯವಸ್ಥೆಯಲ್ಲಿ ಯೋಗ್ಯಸ್ಥಾನವನ್ನು ಪಡೆದಿವೆ. ಮಾನವ ಜೀವನವನ್ನು ಪರಿಷ್ಕೃತಗೊಳಿಸುವ ಸಲುವಾಗಿ ಅವನು ಹದಿನಾರು ಸಂಸ್ಕಾರಗಳ ವಿಧಾನವನ್ನು ಮಾಡಿದ ಗೃಹಸ್ಥರಿಗೆ ಪಂಚಮಹಾಯಜ್ಞಗಳು (ಸ್ವಾಧ್ಯಾಯ, ಪಿತೃತರ್ಪಣ, ಹವನ, ಪ್ರಾಣಿಸೇವೆ ಮತ್ತು ಅತಿಥಿಸೇವೆ) ವಿಧಾನ ಇಡೀ ವಿಶ್ವದಲ್ಲಿಯೇ ಎಲ್ಲೆಡೆ ಶಾಂತಿ ಪ್ರಚಾರಕ್ಕೆ ಮೂಲಮಂತ್ರವಾಗಿದೆ.

ಭಾರತೀಯ ಸಮಾಜಕ್ಕೆ ಆದರ್ಶರೂಪ ಕೊಡಲು ಮನುವು ಒಂದು ಶಾಸ್ತ್ರವನ್ನು (ಧರ್ಮಶಾಸ್ತ್ರ) ಅಂದಿನ ಸೂತ್ರಶೈಲಿಯಲ್ಲಿ ಮಾಡಿದ,ಅದರ ಸಂಸ್ಕರಣರೂಪವೇ- “ಮಾನವ ಧರ್ಮ ಸೂತ್ರ” ಎಂಬ ಹೆಸರಿನಲ್ಲಿ ಇಂದಿಗೂ ಪ್ರಸಿದ್ಧವಾಗಿದೆ. ಅದೇ ಸೂತ್ರರಾಶಿಯ ಉಪದೇಶವನ್ನು ಭೃಗುವು (ನಾರದ ಸ್ಮೃತಿಯ ಅನುಸಾರ) ಸುಮಾರು 2 1/2 ಸಾವಿರ ಅನುಷ್ಟುಪ್ ಛಂದಸ್ಸುಗಳ ರೂಪ ಕೊಟ್ಟು ಹನ್ನೆರಡು ಅಧ್ಯಾಯಗಳಲ್ಲಿ ವಿಭಜಿಸಿದ್ದ. ಅದೇ ಇಂದು ಮನುಸ್ಮೃತಿಯ ಹೆಸರಿನಲ್ಲಿ ಕಾಣಲ್ಪಡುತ್ತದೆ. ಮನು ಆಚಾರದ (ಸದಾಚಾರ) ಬಗ್ಗೆ ಬಹಳ ಒತ್ತುಕೊಡುತ್ತಾನೆ.

ಆಚಾರಃ ಪರಮೋ ಧರ್ಮಾಃ ಶ್ರುತ್ಯುಕ್ತಿಃ ಸ್ಮಾರ್ತ ಏವಚ ।

ಇದೇ ಆಚಾರವೇ ವಾಲ್ಮೀಕಿಯ ಮಹಾಕಾವ್ಯ ರಾಮಾಯಣದ ಚರಿತ್ರೆಯ ಮತ್ತು ವ್ಯಾಸರ ಐತಿಹಾಸಿಕ ಮಹಾಭಾರತದ ಧರ್ಮವೂ ಆಗಿದೆ. ಪ್ರತಿಯೊಬ್ಬ ವ್ಯಕ್ತಿಯೂ (ವಿಶೇಷವಾಗಿ ಭಾರತೀಯರಿಗೆ) ಮನುವಿನ ಜ್ಞಾನಕ್ಕೆ (ಮೇಧಾಶಕ್ತಿ) ಕೃತಜ್ಞನಾಗಿರಬೇಕು. ಮನುವಿನ ವ್ಯವಸ್ಥೆಯನ್ನು ಒಂದು ವೇಳೆ ಜಗತ್ತಿನ ಎಲ್ಲ ರಾಷ್ಟ್ರಗಳೂ ಅನುಸರಿಸಿದರೆ ಅದೆಷ್ಟು ಬಳಿತಾಗುವುದೆಂದು ಹೇಳಲಾಗದು? ವಾಸ್ತವವಾಗಿ ಮನುವಿನ ಆಡಳಿತ ವಿಧಾನ ಬಹಳ ಚೆನ್ನಾಗಿದೆ. ಜರ್ಮನಿಯ ದಾರ್ಶನಿಕ ನೀತ್ಸೆ ಹೇಳಿರುವುದನ್ನು ಗಮನಿಸಿ: ಮನುವಿನ ಧರ್ಮಶಾಸ್ತ್ರ ಉನ್ನತವಾದುದೆಂದು ಹೇಳಿರುವುದೆಲ್ಲವೂ ವೇದಗಳ ಆಧಾರದ ಮೇಲೆಯೇ.

ಯಃ ಕಶ್ಚಿತ್ ಕಸ್ಯಚಿತ್ ಧರ್ಮ ಮನುನಾ ಪರಿಕೀರ್ತಿತಃ
ಸ ಸರ್ವೋಽಭಿಹಿತೋ ವೇದೇ ಸರ್ವಜ್ಞಾನಮಯೋ ಹಿಸಃ॥

ಈ ರೀತಿ ವಿಶ್ವದಲ್ಲಿ ವೈದಿಕ ಸಂಸ್ಕೃತಿಯ ಕಾಂತಿ ಮತ್ತು ಪ್ರಸಾರ ಮಾಡುವಲ್ಲಿ ಮನುವಿನ ಸ್ಥಾನ ಅತ್ಯಂತ ಮಹತ್ವಪೂರ್ಣವಾದದು.



ಧಾರಾವಾಹಿ

# ಶ್ರೀ ವೇಂಕಟೇಶ್ವರಸ್ವಾಮಿ ಆಲಯ

## ಪ್ರಾಚೀನ ಕಾಲದ ಸಾಹಿತ್ಯದಲ್ಲಿ ಶ್ರೀವೇಂಕಟೇಶ್ವರಸ್ವಾಮಿ ಆಲಯ (ಕ್ರಿ.ಶ. ಮೊದಲ ಶತಮಾನದಿಂದ 9ನೇ ಶತಮಾನದವರೆಗೆ)

ಹಲವರು ಖಾಸಗೀ ವ್ಯಕ್ತಿಗಳಿಗೆ ರಾಜನು ನೀಡಿದ ದಾನಗಳು ಗಮನಕ್ಕೆ ಬರುತ್ತವೆ. ತಿ.ತಿ. 651 ರಲ್ಲಿ ಶ್ರೀವೇಂಕಟೇಶ್ವರಸ್ವಾಮಿಯ ನಿತ್ಯ ನೈವೇದ್ಯಕ್ಕೆ ಪ್ರಭವ ಸಂವತ್ಸರದಲ್ಲಿ ಶಕ ವರ್ಷ 1468ರಲ್ಲಿ (ಕ್ರಿ.ಶ.1546-ಆಗಸ್ಟ್-19) ಅರ್ಧ ಗ್ರಾಮವನ್ನು ದತ್ತಿ ನೀಡಿದ ತಿಮ್ಮರಸ ಪದಂಡ ಯರ್‌ನ ಮಗ ಪದಂಡಯರ್‌ಗೆ ಪೆರುಕೊಂಡ (ಪೆನುಗೊಂಡ)ದ ಬಳಿಯ ಒಂದು ಹಳ್ಳಿಯನ್ನು ದಾನ ನೀಡಿದಂತೆ ಕಂಡು ಬರುತ್ತದೆ.

ಈ ಅರ್ಧ ಗ್ರಾಮವು ವಾರ್ಷಿಕ ನೂರು ಗಟ್ಟಿ ವರಹಗಳ ಆದಾಯ ಹೊಂದಿದ್ದಂತೆ ತಿಳಿದು ಬರುತ್ತದೆ. ಇಂತಹದೇ ಇನ್ನೊಂದು ದಾನವು ಶಕವರ್ಷ 1469 ರ ಪ್ಲವಂಗನಾಮ ಸಂವತ್ಸರದ ಮಿಥುನಮಾಸದಲ್ಲಿ (ಕಿ.ಶ. 1547-ಜೂನ್-3)ಯಜುಶ್ಶಾಖೆಯ ಆಪಸ್ತಂಭ ಸೂತ್ರದ ಶಠಮರ್ಷಣ ಗೋತ್ರದ ಸೊಟ್ಟೈ ವಿಟ್ಟೂರ್ ತಿರುಮಲನಂಬಿ ಕುಮಾರ ತಾತ ಯ್ಯಂಗಾರ್ಯನ ಮಗ ಶ್ರೀನಿವಾಸಯ್ಯಂ ಗಾರ್‌ನಿಗೆ ಜಗದಾಪಿ-ಗುತ್ತಿ ಸೀಮೆಯ ಪೆಲಿಯ ಎಕ್ಕಲೂರು ಹಳ್ಳಿಯನ್ನು ದಾನ ನೀಡಿದ್ದಾ ಗಿಯೂ, ಅದನ್ನು ತಾವು ಶಾಸನದಲ್ಲಿ ದಾಖಲು ಮಾಡಿದಂತೆಯೂ ಜಿ.ಟಿ.415ರಲ್ಲಿ ಹೇಳಲಾ ಗಿದ್ದು, ಇದನ್ನು ದಾನ ನೀಡಿದವನು ಆಲಯಕ್ಕೆ ಕೊಟ್ಟಂತೆಯೂ ಆತ ಆರಂಭಿಸಿದ ಪಲ್ಲವೋತ್ಸ ವನ್ನು ನಡೆಸಲೂ,ಆ ಉತ್ಸವದ ದಿನಗಳಲ್ಲಿ ನಿತ್ಯ ನೈವೇದ್ಯಕ್ಕೆ ಬಳಸಲೂ ಇದರ ಆದಾಯವನ್ನು ಉಪಯೋಗಿಸಲು ತಿಳಿಸಲಾಗಿದೆ.

ಈ ಹಳ್ಳಿಯ ವಾರ್ಷಿಕ ಆದಾಯ 2000 ಚಕ್ರಪೊನ್ ಎಂದು ಹೇಳಲಾಗಿದೆ. ಇಷ್ಟು ಹೆಚ್ಚಿನ ಆದಾಯದ ಹಳ್ಳಿಯೆಂದರೆ ಅದು ದೊಡ್ಡ ದಾಗಿಯೂ ಫಲವತ್ತಾಗಿಯೂ ಇದ್ದಿರಬೇಕು. ಅನ್ನಮಯ್ಯಂಗಾರ್ಯನ ಮಗ ತಾಳ್ಳಪಾಕ ತಿರುಮಲಯ್ಯಂಗಾರ್ಯನು ಸದಾಶಿವರಾಯ ನಿಂದ ರಾಯಸವನ್ನೂ ರಾಮರಾಜಯ್ಯನಿಂದ ತಿರುಮುಖವನ್ನೂ, ಮುತ್ಯಾಲಪಟ್ಟು ಗ್ರಾಮವನ್ನು ತೆರಿಗೆ ಮುಕ್ತವಾಗಿಸಲು ಪಡೆದ. ತಿರುಮಲೈ ಯ್ಯಂಗಾರ್ಯನು ಶಕ 1467 ರ ವಿಶ್ವಾವಸು ನಾಮಸಂವತ್ಸರದ ಕರ್ಕಾಟಕ ಮಾಸದಲ್ಲಿ (3-7-1545) ತಾನು ತಿರುಮಲೆಯಲ್ಲಿ ಆರಂಭಿ ಸಿದ ಉತ್ಸವದ ವೆಚ್ಚಗಳಿಗೆಂದು ಇದನ್ನು ಆಲ ಯಕ್ಕೆ ನೀಡಿದಾಗ, ಅವನಿಂದ ನೂರು ಪೊನ್ ವೆಚ್ಚದಲ್ಲಿ ನೀರಾವರಿ ಕಾಮಗಾರಿ ಕೆಲಸಗಳು ನಡೆಸಲಾಗಿದ್ದರೂ ವಾರ್ಷಿಕ 280 ರೇಖೈ ಹಣ ಮಾತ್ರವೇ ಆದಾಯವಾಗುವಂತೆ ಈ ಹಳ್ಳಿಯ ಉತ್ಪನ್ನವಿದ್ದಿತು. (681 ತಿ.ತಿ.)

**ಅರವೀಡು ಆಳ್ವಿಕೆಯಲ್ಲಿ ತಿರುಮಲೆ:**

ತಾಳಿಕೋಟೆ ಯುದ್ಧದಲ್ಲಿ ಅಳಿಯ ರಾಮ ರಾಜನು ತೀರಿ ಕೊಂಡ ಮೇಲೆ 1565 ರಲ್ಲಿ ಸದಾಶಿವರಾಯನ ಮುಖ್ಯ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಅರವೀಡು ವಂಶದ ತಿರುಮಲನು 1575ರಲ್ಲಿ ಪಟ್ಟಾಭಿಷಿಕ್ತನಾದರೂ, 1565ರಲ್ಲಿ ರಾಜಧಾನಿಯನ್ನು ಪೆನುಗೊಂಡೆಗೆ ವರ್ಗಾಯಿಸಿದಂದಿನಿಂದ ಅವನ ಆಳ್ವಿಕೆ ಆರಂಭವಾಯಿತು. ರಾಜನಾದ ಮೇಲೆ ಅವನ ಆಳ್ವಿಕೆ ಸ್ವಲ್ಪಕಾಲದ್ದಾಗಿ ಅವನ ಮಗ ಶ್ರೀರಂಗ ರಾಜ ಅಥವಾ ಎರಡನೇ ರಂಗರಾಜ ಅವನೊಡನೆಯೇ ಸೇರಿ ಆಡಳಿತ ನಡೆಸಿದ.

ಆನೆಗಳ ಪ್ರತಿಮೆಗಳನ್ನು ಒಳಗೊಂಡ ಎತ್ತರವಾದ ಕಂಬಗಳಿರುವ ಊಂಜಲ್ ಮಂಟಪವು ತಿರುಮಲರಾಯ ಮಂಟಪವೆಂಬ ಹೆಸರಿನಿಂದ ಇವನ ಸೇವೆಯ ಕುರುಹಾಗಿ ಇಂದಿಗೂ ಆಲಯದ ಪ್ರಮುಖ ಭಾಗವಾಗಿದ್ದು,ವಾರ್ಷಿಕ ಬ್ರಹ್ಮೋತ್ಸವ ಕಾಲದಲ್ಲಿ ಉತ್ಸವಮೂರ್ತಿಯ ಆಸ್ಥಾನ ಇಲ್ಲಿಯೇ ನಡೆಯುತ್ತದೆ. ಶ್ರೀರಂಗದೇವ ಮಹಾರಾಯನ ಶಕ 1501 ರಿಂದ 1508 ರ ವರೆಗಿನ ಅವಧಿಯ (ಕ್ರಿ.ಶ. 1579 ರಿಂದ 1586) ಸುಮಾರು ಒಂದು ಡಜನ್ ಶಾಸನಗಳು ಇವನ ಆಡಳಿತವನ್ನು ಗುರುತಿಸುತ್ತವೆ.

ಶಕ 1514 ರಿಂದ ಶಕ 1538 ರ ವರೆಗಿನ (ಕ್ರಿ.ಶ.1592 ರಿಂದ 1616) ಸುಮಾರು ಹನ್ನೆರಡು ಶಾಸನಗಳು ವೆಂಕಟಪತಿರಾಯ ಎಂದು ಹೆಸರಾದ ಒಂದನೇ ವೆಂಕಟನ ಆಳ್ವಿಕೆಯನ್ನು ಸೂಚಿಸುತ್ತವೆ. ಈತ ತಿರುಮಲನ ನಾಲ್ಕನೇ ಮಗ ಹಾಗೂ ಎರಡನೇ ಶ್ರೀರಂಗನ ಕೊನೆಯ ತಮ್ಮ. ಕರ್ನೂಲಿನ ಮಾರ್ಕಾಪುರದ ಒಂದು ಶಾಸನದಂತೆ ಶಕ 1489ರಲ್ಲಿ (ಕ್ರಿ.ಶ. 1567) ಇವನು ಸದಾಶಿವರಾಯನ ಒಬ್ಬ ಅಧಿಕಾರಿಯಾಗಿದ್ದನೆಂದು ತೋರುತ್ತದೆ. ಸೇಲಂ ಮತ್ತು ಆರ್ಕಾಟ್‌ಗಳಲ್ಲಿ ದೊರೆತಿರುವ ಎರಡು ಶಾಸನಗಳಲ್ಲಿ ಇವನು ತನ್ನ ಬಿರುದು -ವೀರ ವಸಂತ ರಾಯ- ಎಂಬುವುದರಿಂದ ಮಾತ್ರವೇ ಹೆಸರಿಸಲ್ಪಟ್ಟಿದ್ದಾನೆ.

(ಆ.ಸ. ವರದಿ-1911-12 ಪುಟ-187) ತನ್ನ ತಂದೆ ತಿರುಮಲ ಹಾಗೂ ಅಣ್ಣ ಶ್ರೀರಂಗರಾಜರುಗಳ ಕಾಲದಲ್ಲಿ ಇವನು ಚಂದ್ರಗಿರಿ ರಾಜ್ಯದ ರಾಜಪ್ರತಿನಿಧಿಯಾಗಿ ಅಧಿಕಾರ ನಡೆಸಿದ್ದನೆಂಬುದು ವಸುಚರಿತ್ರೆ ಕಾವ್ಯದ ಮೊದಲ ಅಧ್ಯಾಯದ ಎಂಬತ್ತೊಂದನೆಯ ಪದ್ಯದಿಂದಲೂ, ಶಕ 1494 ರ ಅಂಗೀರಸ ಸಂವತ್ಸರದ ಆಷಾಢ ಮಾಸದ (ಕ್ರಿ.ಶ.1572 ಜುಲೈ 9) ಶಾಸನದಿಂದಲೂ ಶ್ರೀರಂಗನ ಕಾಲದಲ್ಲಿ ಉದಯಗಿರಿ, ಕೊಂಡವೀಡು ಮೊದಲಾದ ಗಡಿಪ್ರಾಂತ್ಯಗಳ ಆಳ್ವಿಕೆಯನ್ನೂ ವಹಿಸಿಕೊಂಡಿದ್ದನೆಂದು ತಿಳಿದು ಬರುತ್ತದೆ. ಇವನಿಗೆ ಐವರು ರಾಣಿಯರಿದ್ದು, ತಿ.ತಿ.97ರಲ್ಲಿ ಒಬ್ಬಾಕೆ-ಕೃಷ್ಣಮಾಂಬ-ಕೃಷ್ಣಾಜಮ್ಮನು ಹೆಸರಿಸಲ್ಪಟ್ಟಿದ್ದಾಳೆ.

ಎರಡನೇ ಶ್ರೀರಂಗನ ಆಳ್ವಿಕೆಯ ಕಾಲದ ಶಕ 1505 ಕ್ಕೆ ಸೇರುವ ತಿ.ತಿ.671 ರಲ್ಲಿ ಹೇಳಿರುವಂತೆ ಇವನ ಮನೆತನದ ಪುರೋಹಿತರಾದ ಏಟ್ಟೂರು ತಿರುಮಲೈ ಕುಮಾರ ತಾತಾಚಾರ್ಯರು ಇವನ ಪಟ್ಟಾಭಿಷೇಕವನ್ನು ನಡೆಸಿದರು.

ಶಕ 1553 (ಕ್ರಿ.ಶ.1631) ಹಾಗೂ ಶಕ 1557 (ಕ್ರಿ.ಶ. 1636) ಗಳಿಗೆ ಸೇರಿದ ಜಿ.ಟಿ.ಯ 328 ಹಾಗೂ 63ನೇ ಎರಡು ದಾಖಲೆಗಳು ಕುಮಾರ ವೆಂಕಟನು-ಎರಡನೇ ಪೆದ್ದ ವೆಂಕಟನೆಂದೂ ಹೆಸರಾದ ಈತ -ಅಳಿಯ ರಾಮರಾಜನ ಮಗನಾದ ನಾಲ್ಕನೇ ರಂಗನ ಮಗನಾಗಿದ್ದು, ಇವನನ್ನು ಶಕ 1544 ರಲ್ಲಿ (ಕ್ರಿ.ಶ. 1622) ಯುವರಾಜನೆಂದೂ ಆರನೇ ರಂಗನನ್ನು ಅವನ ವಾರಸನೆಂದೂ ನಾಲ್ಕನೆಯ ರಾಮನಿಂದ ಆಯ್ಕೆ ಮಾಡಲಾಯಿತು. ಇವನು ಶಕ 1552 ರಲ್ಲಿ (ಕ್ರಿ.ಶ. 1630) ತಿರುಮಲ ತಾತಾಚಾರ್ಯನಿಂದ ಪಟ್ಟಾಭಿಷಿಕ್ತನಾಗಿರಬೇಕು ಎಂದು ತಿಳಿದು ಬರುತ್ತದೆ.

ಶಕ 1553ರ ಪ್ರಜೋತ್ಪತ್ತಿಯ ಕನ್ಯಾಮಾಸದಲ್ಲಿ ಶ್ರೀಗೋವಿಂದರಾಜಸ್ವಾಮಿ ಹಾಗೂ ಶ್ರೀವೆಂಕಟೇಶ್ವರಸ್ವಾಮಿಗಳಿಗೆ ಒಬ್ಬಾನೊಬ್ಬ ರಾಮಚಂದ್ರಯ್ಯನೆಂಬುವವನು ಹಲವು ದಾನ ನೀಡಿದ್ದು,ದಕ್ಷಿಣದ ಸನ್ನಿಧಿ ವೀಧಿಯ ಇಳಂಕೋಯಿಲ್ ಜೀಯರ್ ಮಠದ ಪಶ್ಚಿಮದಲ್ಲಿ ಒಂದು ಮಂಟಪವನ್ನು ನಿರ್ಮಿಸಿದನೆಂದು ಜಿ.ಟಿ.328 ತಿಳಿಸುತ್ತದೆ. ವರದರಾಜಪುರದಲ್ಲಿ ಜೀರ್ಣವಾಗಿದ್ದ ನೀರಾವರಿ ಕಾಲುವೆಯನ್ನು ಪುನರುದ್ಧಾರ ಮಾಡಿದ. ಯಜುಶ್ಶಾಖೆಯ ಆಪಸ್ತಂಭ ಸೂತ್ರದ, ಶ್ರೀವತ್ಸ ಗೋತ್ರದ ಆಳಗರಯ್ಯಂಗಾರ್‌ನು ತಿರುವಿಡೈಯಾಟ್ಟಂ ಹಳ್ಳಿಯಾದ ಅವಿಲಾಲಿಯಲ್ಲಿ ಕುಲಗೆಟ್ಟ ನೀರಾವರಿ ಕಾಲುವೆಯನ್ನು ಸರಿಮಾಡಿಸಿ,ಹಲವಾರು ಭೂಮಿ ಕಾಣಿಕೆಯನ್ನು ನೀಡಿದ



ನೆಂದೂ ಇದು ತಿಳಿಸುತ್ತದೆ. ಮುವತ್ತೆರಡು ಅಡಿಯ ಅಳತೆ ಗೋಲಲನ್ನು ಕುರಿತೂ ಇದು ತಿಳಿಸುವುದು.

ಎರಡನೇ ವೆಂಕಟನ ತಮ್ಮನಾದ, ಮೂರನೇ ಪಿನ ವೆಂಕ ಟನ ಮಗನೇ ಆರನೇ ರಂಗನೆಂದು ಹೆಸರಾದ ಶ್ರೀರಂಗದೇವ ಮಹಾರಾಯ. ನಾಲ್ಕನೇ ರಾಮ ಹಾಗೂ ಎರಡನೇ ವೆಂಕಟನ ಕಾಲದಲ್ಲಿ ಯುವರಾಜನಾಗಿದ್ದ ಇವನು ಕ್ರಿ.ಶ.1642 ಅಕ್ಟೋ ಬರ್ 29 ರಂದು ಕರ್ನಾಟಕದ ಸಿಂಹಾಸನವನ್ನೇರಿದ.

ಇವನ ಆಳ್ವಿಕೆ 1665 ರ ವರೆಗೆ ಇಪ್ಪತ್ತೈದು ವರ್ಷ ನಡೆ ಯಿತು. ಇವನ ಕಾಲದಲ್ಲಿ ಗೋಲ್ಕೊಂಡ,ಬಿಜಾಪುರದ ಸುಲ್ತಾ ನರು ಕರ್ನಾಟಕವನ್ನು ಆಕ್ರಮಿಸಿದರು ಹಾಗೂ ಕಡೆಗೆ ಸಮರ್ಥ ನಾದ ಸೇನಾನಿ ಮೀರ್‌ಜುಮ್ಲಾನು ಇದರ ನವಾಬನಾದ.

ರಾಜ ರಂಗನು ದಕ್ಷಿಣಾಭಿಮುಖವಾಗಿ ಓಡಿಹೋಗಿ ಅಧೀನ ಸಂಸ್ಥಾನಿಕರಲ್ಲಿ ಒಬ್ಬನಾದ ಕೆಳದಿಯ ಪ್ರಮುಖನ ಆಶ್ರಯ ಪಡೆದ. (ಆ.ಸ.ವ 1911-12 ಪುಟ 193)

ಆಲಯದ ಎರಡು ಶಾಸನಗಳಲ್ಲಿ ಶ್ರೀರಂಗರಾಯನು ಹೆಸರಿ ಸಲ್ಪಟ್ಟಿದ್ದರೂ ಅವುಗಳಲ್ಲಿ ಒಂದು ಮಾತ್ರವೇ ದಿನವನ್ನು ಸೂಚಿಸು ತ್ತದೆ. ಶಕ 1560 ಬಹುಧಾನ್ಯ ಸಂವತ್ಸರ ಮಿಥುನ ಮಾಸ (15-6-1638) ಈ ದಿನದಲ್ಲಿ ಆಪಸ್ತಂಭ ಸೂತ್ರದ ಕಾಶ್ಯಪ ಗೋತ್ರದ ಮೂಲ ನಕ್ಷತ್ರದಲ್ಲಿ ಹುಟ್ಟಿದ ಒಬ್ಬ ಬ್ರಾಹ್ಮಣನು ದೇವಾಲಯಕ್ಕೆ 95 ರೇಖೈಯಷ್ಟರ ನೈವೇದ್ಯಗಳಿಗಾಗಿ ಎರಡು ನೀರಾವರಿ ಕಾಲು ವೆಗಳನ್ನು ಒಪ್ಪಿಸಿದ.

ಇವುಗಳಲ್ಲಿ ಒಂದು 160 ಪುಟ್ಟಿ ಭತ್ತವನ್ನು ತರುವಂತಿದ್ದು, ಇನ್ನೊಂದು ತಿರುವಿಡೈಯಾಟ್ಟಂ ಉಳ್‌ಮಂಡಲಂನ ಗ್ರಾಮಗಳಲ್ಲಿ ಒಂದಾದ ಮಾನಿಯ ಕ್ಕೋನಪಟ್ಟು ವಿನಲ್ಲಿದ್ದಿತು. (ಜಿ.ಟಿ.-5) ಎರಡನೇ ಶಾಸನವು (ತಿ.ತಿ.436) ಶ್ರೀರಂಗ ರಾಜನ ಸೇವಕ ರಲ್ಲಿ ಒಬ್ಬನಾದ ತಿರುಪತಿಯ ರಾಮುಡು ಎಂಬುವವನು ರಘು ನಾಥ ಸ್ವಾಮಿಯಲ್ಲಿಟ್ಟಿದ್ದ ಅತ್ಯಂತ ಭಕ್ತಿಯನ್ನು ವಿವರಿಸುತ್ತದೆ.

ನಂತರದ ಎರಡು ಶಾಸನಗಳು ರಾಜನ ಹೆಸರು ಹೇಳ ದಿದ್ದರೂ ರುಧಿರೋದ್ಗಾರಿ (ಕ್ರಿ.ಶ.1683) ಹಾಗೂ ಶಕ 1606ರ ರಕ್ತಾಕ್ಷಿಗಳ (ಕ್ರಿ.ಶ.1684) ನಾಲ್ಕನೇ ವೆಂಕಟನ ಆಳ್ವಿಕೆಯನ್ನು ಹೇಳುವುವು. ಇವೆರಡು ಶಾಸನಗಳು ಹಾಗೂ ಜಿ.ಟಿ.290 ಸೇರಿ ಮೂರು ಶಾಸನಗಳು ಈ ಪ್ರದೇಶದ ಆಡುಭಾಷೆಯಾಗಿದ್ದ ತೆಲುಗು ನಲ್ಲಿವೆ.


ಶಕ 1605 ರುಧಿರೋದ್ಗಾರಿಯ ವೈಶಾಖದ ಜಿ.ಟಿ.291 ಶಾಸ ನವು ರಾಜಶ್ರೀ ಸಿದ್ಧಲೂರಿ ರಾಮಜಿ ಮಾದರಸುಪಂತುಲು ಗಾರು ಮಾಡಿದ ಉಭಯವನ್ನು ಕುರಿತು ಉಲ್ಲೇಖಿಸುವುದು. ಕ್ರಿ.ಶ.1684ರ ರಕ್ತಾಕ್ಷಿ ಸಂವತ್ಸರದ ಚೈತ್ರಮಾಸದಲ್ಲಿ ತಿರು ವೆಂಗಳನಾಥ ಸ್ವಾಮಿ ಹಾಗೂ ವರಾಹಸ್ವಾಮಿಯವರ ಸೇವೆ ಯಲ್ಲಿ 575 ಶ್ರೀರಂಗರಾಜ ವರಹಗಳ ಬೆಲೆಯ ಸರವನ್ನು ಕೊಟ್ಟಿ ದ್ದನ್ನು ತಿ.ತಿ.263 ವಿವರಿಸುತ್ತದೆ.

- ಮುಂದುವರೆಯುತ್ತದೆ.

# ಶ್ರೀ ವೆಂಕಟೇಶ್ವರ ಧಾರ್ಮಿಕ ಸಮ್ಮೇಳನ ತಿರುಮಲೆ 2024



ಸನಾತನ ಹಿಂದೂ ಧರ್ಮವನ್ನು ಉಳಿಸುವ ವಿಚಾರದಲ್ಲಿ ತಿ.ತಿ.ದೇ., ಮುಂದಿದೆ. ಅದರ ಅಂಗವಾಗಿ ಶ್ರೀ ವೆಂಕಟೇಶ್ವರ ಧಾರ್ಮಿಕ ಸಮ್ಮೇಳನವು ಮೂರು ದಿನಗಳ ಕಾಲ (03-02-2024 ರಿಂದ 05-02-2024 ರ ವರೆಗೆ) ತಿರುಮಲೆ ಆಸ್ಥಾನ ಮಂಡಪದಲ್ಲಿ ನಡೆಯಿತು. ಸಾಂಪ್ರದಾಯಿಕವಾಗಿ ಶ್ರೀದೇವಿ ಮತ್ತು ಭೂದೇವಿ ಸಮೇತ ಶ್ರೀಮಲೆಯಪ್ಪ ಸ್ವಾಮಿಗೆ ಮಂಗಳವಾದ್ಯಗಳೊಂದಿಗೆ ವಿಶೇಷ ಪೂಜೆಗಳು ನಿರ್ವಹಿಸಿ, ಆರತಿ ಸಮರ್ಪಿಸಿ,ನಂತರ ಜ್ಯೋತಿ ಪ್ರಜ್ವಲನೆಯಿಂದ ಧಾರ್ಮಿಕ ಸಮ್ಮೇಳನವನ್ನು ಪ್ರಾರಂಭಿಸಿದರು. ಈ ಸಂದರ್ಭದಲ್ಲಿ ಶ್ರೀ ವೆಂಕಟೇಶ್ವರ ವೇದ ವಿಶ್ವವಿದ್ಯಾಲಯದ ಪಂಡಿತರು ವೇದ ಸ್ವಸ್ತಿ ನಿರ್ವಹಿಸಿದರು. ನಂತರ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಭೂಮನ ಕರುಣಾಕರ ರೆಡ್ಡಿ ಯವರು ಪ್ರಾರಂಭೋಪನ್ಯಾಸ ಮಾಡಿದರು. ತಿ.ತಿ.ದೇ.,ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ.ಧರ್ಮಾರೆಡ್ಡಿಯವರನ್ನು ಈ ಸಂದರ್ಭದಲ್ಲಿ ಪರಿಚಯ ಮಾಡಿದರು. ಈ ಕಾರ್ಯಕ್ರಮದಲ್ಲಿ ತಿರುಮಲೆ ತಿರುಪತಿ ದೇವಸ್ಥಾನದ ಶ್ರೀಶ್ರೀಶ್ರೀಪೆದ್ದಜೀಯರ್ ಸ್ವಾಮಿ ಮತ್ತು ಶ್ರೀಶ್ರೀಶ್ರೀ ಚಿನ್ನಜೀಯರ್ ಸ್ವಾಮಿಯವರೊಂದಿಗೆ 57 ಪೀಠಾಧಿಪತಿಗಳು, ಮಠಾಧಿಪತಿಗಳು, ಸ್ವಾಮೀಜಿಗಳು ಸಮ್ಮೇಳನಕ್ಕೆ ಆಗಮಿಸಿದ್ದರು. ಈ ಸಂದರ್ಭವಾಗಿ ಸಪ್ತಗಿರಿಯಲ್ಲಿ ಸ್ವಾಮೀಜಿಯವರ ಅನುಗ್ರಹ ಭಾಷಣಗಳನ್ನು ಪುಟ 31 ರಿಂದ 40 ರ ವರೆಗೆ ಓದುಗರ ಮುಂದಿಡುತ್ತಿದೆ.









## 2024 ಫೆಬ್ರವರಿ, 3,4,5 ರಂದು
## ತಿರುಮಲೆ ಆಸ್ಥಾನ ಮಂಡಪದಲ್ಲಿ ನಡೆದ
## ಶ್ರೀ ವೆಂಕಟೇಶ್ವರ ಧಾರ್ಮಿಕ ಸಮ್ಮೇಳನ

2024 ಫೆಬ್ರವರಿ, 3,4,5 ರಂದು
ತಿರುಮಲೆ ಆಸ್ಥಾನ ಮಂಡಪದಲ್ಲಿ ನಡೆದ
ಶ್ರೀ ವೆಂಕಟೇಶ್ವರ ಧಾರ್ಮಿಕ ಸಮ್ಮೇಳನ




ಶ್ರೀ ವೆಂಕಟೇಶ್ವರ ಧಾರ್ಮಿಕ ಸಮ್ಮೇಳನ ಮುಕ್ತಾಯ ಕಾರ್ಯಕ್ರಮದಲ್ಲಿ ಶ್ರೀಶ್ರೀಶ್ರೀ ಪೆದ್ದ ಜೀಯರ್ ಸ್ವಾಮಿ, ಶ್ರೀಶ್ರೀಶ್ರೀ ಚಿನ್ನಜೀಯರ್ ಸ್ವಾಮಿ, ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಭೂಮನಕರುಣಾಕರ ರೆಡ್ಡಿ ಯವರು, ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ ಐ.ಡಿ.ಈ.ಎಸ್., ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಹಿಂದಿನ ಶ್ರೀಮತಿ. ಎಸ್.ಭಾರ್ಗವಿ ಐ.ಎ.ಎಸ್., ಶ್ರೀ ವಿ.ವೀರಬ್ರಹ್ಮ ಐ.ಎ.ಎಸ್., ಮತ್ತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡ ದೃಶ್ಯಮಾಲಿಕೆ. ಶ್ರೀ ವೆಂಕಟೇಶ್ವರ ಧಾರ್ಮಿಕ ಸಮ್ಮೇಳನದ ಮುಕ್ತಾಯ ಕಾರ್ಯಕ್ರಮದ ದೃಶ್ಯಗಳು. ಇದರಲ್ಲಿ ಪಾಲ್ಗೊಂಡ ತಿ.ತಿ.ದೇ., ಆಡಳಿತ ಮಂಡಳಿ ಅಧ್ಯಕ್ಷರು, ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಮತ್ತು ಸ್ವಾಮೀಜಿಗಳು.













# ಶ್ರೀ ವೆಂಕಟೇಶ್ವರ ಧಾರ್ಮಿಕ ಸಮ್ಮೇಳನ ತಿರುಮಲೆ

### ಶ್ರೀ ಶ್ರೀ ಶ್ರೀ ಪೆದ್ದ ಜೀಯರ್‌ಸ್ವಾಮಿ, ತಿರುಮಲೆ



ತಿ.ತಿ.ದೇ., ದೇಶದಾದ್ಯಂತ ಇರುವ ಪೀಠಾಧಿಪತಿಗಳು, ಮಠಾಧಿಪತಿಗಳನ್ನು ಆಹ್ವಾನಿಸಿ ಸ್ವಾಮಿಯವರ ಪಾದದಡಿಯಲ್ಲಿ ಧಾರ್ಮಿಕ ಸದಸ್ಸು ಕಾರ್ಯಕ್ರಮವನ್ನು ನಿರ್ವಹಿಸುತ್ತಿರುವುದು ಬಹಳ ಸಂತೋಷ. ಸ್ವಾಮೀಜಿಗಳು ಅವರವರ ಸಂಪ್ರದಾಯಗಳಲ್ಲಿ ಧರ್ಮಪ್ರಚಾರ ಮಾಡುತ್ತಿದ್ದಾರೆ ಮತ್ತು ಅವರ ಸೂಚನೆಗಳನ್ನು ಸ್ವೀಕರಿಸಿ ತಿ.ತಿ.ದೇ.,ಇನ್ನು ಹೆಚ್ಚಾಗಿ ಧರ್ಮಪ್ರಚಾರ ಮಾಡಬೇಕೆಂದು ಆಶಿಸುತ್ತಿದ್ದೇವೆ.

### ಶ್ರೀ ಶ್ರೀ ಶ್ರೀ ಚಿನ್ನ ಜೀಯರ್‌ಸ್ವಾಮಿ, ತಿರುಮಲೆ



ಈ ಧಾರ್ಮಿಕ ಸದಸ್ಸಿನಲ್ಲಿ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಸ್ವಾಮೀಜಿಯವರು ಪಾಲ್ಗೊಂಡಿರುವುದು ಶುಭಸೂಚಕ. ಪೂರ್ವ ಕಾಲದಲ್ಲಿ ಯಜ್ಞ, ಯಾಗಾದಿಗಳನ್ನು ಮಾಡಿದರೆ ಮೋಕ್ಷ ಲಭಿಸುತ್ತದೆ. ಕಲಿಯುಗದಲ್ಲಿ ನಾಮ ಸಂಕೀರ್ತನೆ ಮಾಡಿದರೆ ಸಾಕು ಆ ಭಗವಂತನ ಕೃಪೆ ಸಿಗುತ್ತದೆ. ಭಗವಂತನ ನಾಮಸ್ಮರಣೆಯಿಂದ ಭಕ್ತರು ತಮ್ಮ ಕಷ್ಟಗಳನ್ನು ದೂರ ಮಾಡಿಕೊಂಡು ಮುಕ್ತಿ ಮಾರ್ಗದತ್ತ ಪ್ರಯಾಣಿಸಬಹುದು.

### ಶುಶ್ರೂಶಾನಂದ ಮಾತಾಜಿಯವರ ಶಿಷ್ಯೆ ಮಾತಾ ಶಿವಾನಂದ ಸರಸ್ವತಿ, ಚೈತನ್ಯ ತಪೋವನಂ, ತೇನೆಪಲ್ಲಿ



ತಿ.ತಿ.ದೇ., ಹಿಂದೂ ಧರ್ಮ ಪ್ರಚಾರ ಪರಿಷತ್ತಿನ ಮೂಲಕ ಅನೇಕ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಹಿಂದೂ ಧರ್ಮದ ಬಗ್ಗೆ ಹಂಬಲ ಮತ್ತು ಆಳವಾದ ಸಲಹೆ-ಸೂಚನೆಗಳನ್ನು ನೀಡುತ್ತಿರುವುದು ಅವರ ಸಂಸ್ಕೃತಿಯ ಶ್ರೇಷ್ಠತೆಗೆ ಸಾಕ್ಷಿಯಾಗಿದೆ.

### ಶ್ರೀ ಸಸ್ವರೂಪಾನಂದ ಗಿರಿ ಶ್ರೀ ಲಲಿತಾಪೀಠ, ಶ್ರೀನಿವಾಸಮಂಗಪುರಂ



ತಿರುಪತಿಯಿಂದ ಗೋವಿಂದನಾಮ ಸ್ಮರಣೆ,ಪವಿತ್ರತೆಯನ್ನು ಕಾಪಾಡುವುದಕ್ಕೆ ತಿ.ತಿ.ದೇ.,ಕೃಷಿ ಮಾಡಬೇಕು.ತಿರುಮಲೆಯಂತೆಯೇ ಗೋವಿಂದ ನಾಮಸ್ಮರಣೆ, ತಿರುಪತಿ, ತಿರುಚಾನೂರು,ಶ್ರೀನಿವಾಸಮಂಗಾಪುರ, ರೇಣಿಗುಂಟ, ಚಂದ್ರಗಿರಿ ಮೊದಲಾದ ಪ್ರಾಂತಗಳಿಂದ ಪ್ರಾರಂಭಿಸಬೇಕು.

### ಶ್ರೀ ವಿದ್ಯಾಶ್ರೀಶ ತೀರ್ಥ ಶ್ರೀಪಾದರು, ವ್ಯಾಸರಾಯ ಮಠ



ತಿರುಮಲೆ ತಿರುಪತಿ ದೇವಸ್ಥಾನಗಳು ಈಗಾಗಲೇ ಅನೇಕ ಧಾರ್ಮಿಕ ಕಾರ್ಯಕ್ರಮಗಳನ್ನು ಉತ್ತಮವಾಗಿ ಮಾಡುತ್ತಿವೆ. ಸಾಕ್ಷಾತ್ ಸ್ವಾಮಿಯವರ ಪಾದ ಸೇವೆ ಮಾಡುತ್ತಿರುವ ಶ್ರೀ ಭೂಮನ ಕರುಣಾಕರರೆಡ್ಡಿ ಅವರು ಅನೇಕ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಿದ್ದಾರೆ. ಅದೇ ರೀತಿ ಧರ್ಮವನ್ನು ತಮ್ಮ ಹೆಸರಿನಲ್ಲಿ ಹೊಂದಿರುವ ಶ್ರೀ ಎ.ವಿ. ಧರ್ಮಾರೆಡ್ಡಿ ಅವರು ಸುಂದರಕಾಂಡ, ಗೀತ ಪಾರಾಯಣದಂತಹ ಹಲವು ಕಾರ್ಯಕ್ರಮಗಳು ಮತ್ತೊಂದಡೆಗೆ ಗೋಸಂರಕ್ಷಣೆಯೂ ಉತ್ತಮವಾಗಿ ನಡೆಯುತ್ತಿದೆ. ಈ ಕಾರ್ಯಕ್ರಮಗಳನ್ನು ಇನ್ನಷ್ಟು ಅದ್ಭುತವಾಗಿ ಕೊಂಡೊಯ್ಯುವಂತೆ ನಾನು ಅವರನ್ನು ವಿನಂತಿಸುತ್ತೇನೆ.

### ಶ್ರೀ ಶಿವಾನಂದ ಸ್ವಾಮಿ, ಶೈವ ಕ್ಷೇತ್ರ, ತಾಳ್ಳಪಾಲೆಂ, ಗುಂಟೂರು



ತಿ.ತಿ.ದೇ.,ಮಾಡುತ್ತಿರುವ ಸೇವಾ ಕಾರ್ಯಕ್ರಮಗಳು ಗ್ರಾಮಮಟ್ಟಕ್ಕೆ ಹೋಗಲು ವ್ಯಾಪಕವಾಗಿ ಹರಡಬೇಕು. ಪ್ರತಿ ಜಿಲ್ಲೆಗೆ ಗೋಶಾಲೆ,ಗೋಆಂಬ್ಯುಲೆನ್ಸ್ ವ್ಯವಸ್ಥೆ ಮಾಡಬೇಕು.

### ಶ್ರೀಸ್ವಾತ್ಮಾನಂದೇಂದ್ರಸ್ವಾಮಿ,ವಿಶಾಖಶಾರದಾಪೀಠ,ವಿಶಾಖಪಟ್ಟಣ



ತಿ.ತಿ.ದೇ.,ಅನೇಕ ಆಧ್ಯಾತ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತದೆ. ಯುವಕರು ಧರ್ಮದ ಸೂಕ್ಷ್ಮಗಳನ್ನು ಅರಿತು ಅವರ ಜೀವನವನ್ನು ಧಾರ್ಮಿಕ ಜೀವನದತ್ತ ಹೆಜ್ಜೆ ಹಾಕುವಂತೆ ಮಾಡಬೇಕು. ಎಸ್.ವಿ.ಬಿ.ಸಿ.ಯ ಮುಖಾಂತರ ಪ್ರಚಾರ ಮಾಡುತ್ತಿರುವುದು ಬಹಳ ಹೆಮ್ಮೆಯ ವಿಷಯ.ವಿಶ್ವವಿದ್ಯಾನಿಲಯಗಳ ಮುಖಾಂತರ ಧರ್ಮ ಪ್ರಚಾರವನ್ನು ಮತ್ತಷ್ಟು ಪ್ರಚಾರ ಮಾಡಬೇಕು. ಮಠಾಧೀಶರು, ಪೀಠಾಧಿಪತಿಗಳನ್ನು ತಿ.ತಿ.ದೇ., ಧಾರ್ಮಿಕ ಚಟುವಟಿಕೆಗಳಲ್ಲಿ ಭಾಗಿಗಳನ್ನಾಗಿ ಮಾಡಬೇಕು.

### ಶ್ರೀ ಪ್ರಕಾಶಾನಂದ ಸ್ವಾಮಿ,ಪರಮಾನಂದ ಆಶ್ರಮ, ವಿಜಯವಾಡ



ನಮ್ಮದು ವಸುಧೈವ ಕುಟುಂಬ ಎಂಬುದನ್ನು ಗುರುತಿಸಬೇಕು. ದ್ವೇಷಗಳಿಗೆ ದೂರವಿರಬೇಕು.ಭಗವದ್ಗೀತೆಯ ಅರ್ಥತಾತ್ಪರ್ಯ ಸಹಿತ ಪ್ರತ್ಯೇಕ ಶಿಕ್ಷಣ ಮುಖಾಂತರ ಬೋಧನೆ, ಗುರುಕುಲಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಏರ್ಪಡಿಸಬೇಕು.

### ಶ್ರೀ ವಿಶ್ವಯೋಗಿ ವಿಶ್ವಂಜಿ ಸ್ವಾಮಿ, ಗುಂಟೂರು



ತಿ.ತಿ.ದೇ., ಅಧ್ಯಕ್ಷರು ಶ್ರೀ ಭೂಮನ ಕರುಣಾಕರರೆಡ್ಡಿ ಮತ್ತು ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ.ಧರ್ಮಾರೆಡ್ಡಿ ಅವರು ಅಂತರಾಷ್ಟ್ರೀಯ ಮಟ್ಟದಲ್ಲಿ ನಡೆಸುತ್ತಿರುವ ತಿ.ತಿ.ದೇ., ಧಾರ್ಮಿಕ ಸೇವಾ ಕಾರ್ಯಕ್ರಮಗಳನ್ನು ಶ್ಲಾಘಿಸುತ್ತಿದ್ದಾರೆ. ತಿರುಮಲೆ ಆನಂದ ನಿಲಯದಲ್ಲಿ ಶ್ರೀನಿವಾಸ, ಶ್ರೀ,ಭೂ ವಿಶ್ವದಲ್ಲಿ ಭಾರತ ದೇಶ ಶಕ್ತಿಶಾಲಿಯಾಗಲಿದೆ. ಪ್ರಪಂಚಕ್ಕೆ ಸನಾತನ ಧರ್ಮ ಮುಂದಕ್ಕೆ ಸಾಗಲು ತಿರುಮಲೆಯಿಂದ ತಿ.ತಿ.ದೇ., ವತಿಯಿಂದ ಕೃಷಿ ಮಾಡಬೇಕು.

### ಶಿವದರ್ಶನ ಮಾತಾ, ಪ್ರೊದ್ದುಟೂರು



ಸನಾತನ ಹಿಂದೂ ಧರ್ಮ ಪ್ರತಿಯೊಬ್ಬರಲ್ಲೂ ಅಂತರ್ಗತವಾಗಿದೆ.ತಿರುಮಲೆ ಸ್ವಾಮಿಯವರ ದರ್ಶನಕ್ಕಾಗಿ ಕಾಯುತ್ತಿರುವ ಭಕ್ತರಿಗೆ ಲಿಖಿತ ಕೀರ್ತನೆಗಳನ್ನು ಪಠಿಸಲು ಆಧ್ಯಾತ್ಮಿಕ ಪುಸ್ತಕಗಳು ಮತ್ತು ಗ್ರಂಥಗಳು ಲಭ್ಯವಾಗುವಂತೆ ಮಾಡಬೇಕು. ತಿರುಪತಿ, ತಿರುಮಲೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಭಕ್ತರು ಭಕ್ತಿ ಗೀತೆಗಳನ್ನು ಆಲಿಸಲು ಧ್ವನಿ ವ್ಯವಸ್ಥೆ ಅಳವಡಿಸಬೇಕು.

### ಶ್ರೀದೇವನಾಥ ರಾಮಾನುಜ ಜೀಯರ್ ಸ್ವಾಮೀ, ಶಂಷಾಬಾದ್:



ತಿರುಮಲೆ ದಿವ್ಯಕ್ಷೇತ್ರದಲ್ಲಿ ಧ್ಯಾನ ಮಂದಿರಗಳನ್ನು ಸ್ಥಾಪಿಸಬೇಕು.ಗೋವಿಂದನ ನಾಮಸ್ಮರಣೆ ಮಾಡುವ ಭಕ್ತಿ ಭಾವವನ್ನು ಹೆಚ್ಚಿಸುವ ಧ್ಯಾನ ಕೇಂದ್ರಗಳ ಅವಶ್ಯಕತೆ ಇದೆ. ಎಸ್.ವಿ.ಬಿ.ಸಿ., ಯೂಟ್ಯೂಬ್ ಚಾನಲ್ ಮೂಲಕ ಸಣ್ಣ ಪುಟ್ಟ ಕಾರ್ಯಕ್ರಮಗಳನ್ನು ಸಮಾಜಕ್ಕೆ ಕೊಂಡೊಯ್ಯಬೇಕು ಎಂದರು. ವಿದ್ಯಾರ್ಥಿಗಳು ಯುವಕರಲ್ಲಿ ನೈತಿಕ ಪ್ರಜ್ಞೆಯನ್ನು ಹೆಚ್ಚಿಸಲು ಕ್ರಮಕೈಗೊಳ್ಳಬೇಕು. ವಿದ್ಯಾರ್ಥಿಗಳನ್ನು ಶ್ರೀವಾರಿ ಸೇವಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕು. ದೇವಸ್ಥಾನ ವ್ಯವಸ್ಥೆ ಮೂಲಕ ಜ್ಞಾನ ಮತ್ತು ಸೇವೆಯನ್ನು ಗ್ರಾಮಮಟ್ಟಕ್ಕೆ ಕೊಂಡೊಯ್ಯಲು ತಿ.ತಿ.ದೇ., ಶ್ರಮಿಸಬೇಕು. ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕತೆ ಹೆಚ್ಚಿಸಬೇಕು.

### ಶ್ರೀರಾಮಚಂದ್ರ ರಾಮಾನುಜ ಜೀಯರ್, ಭೀಮವರಂ



ಕೆಲವು ವರ್ಷಗಳ ನಂತರ ಧಾರ್ಮಿಕ ಸದಸ್ಸು ಆಯೋಜಿಸುತ್ತಿರುವ ಶ್ರೀ ಭೂಮನ ಕರುಣಾಕರರೆಡ್ಡಿ ಯವರಿಗೆ ಶುಭಾಶಯಗಳು ಮತ್ತು ತಿ.ತಿ.ದೇ., ಮೂಲಕ ಹಲವು ಉತ್ತಮ ಕಾರ್ಯಕ್ರಮಗಳನ್ನು ಮಾಡಿದ್ದಾರೆ. ಆಧ್ಯಾತ್ಮಿಕ ಶಿಕ್ಷಣ ಅತ್ಯಗತ್ಯ. ಸುಸಂಸ್ಕೃತ ಜೀವನ ಎಲ್ಲರಲ್ಲೂ ಬೆಳೆಯಲು ಸಹಾಯ ಮಾಡುತ್ತದೆ.ತಿ.ತಿ.ದೇ., ಸಂಸ್ಕೃತ ವೇದವನ್ನು ಪ್ರಚಾರ ಮಾಡುತ್ತದೆ. ದ್ರಾವಿಡ ವೇದಕ್ಕೂ ಪ್ರೋತ್ಸಾಹ ನೀಡಬೇಕು.

### ಶ್ರೀ ವಿರಜಾನಂದಸ್ವಾಮಿ, ಬ್ರಹ್ಮಂಗಾರಿ ಮಠ, ಕಡಪ.



ಶ್ರೀಭೂಮನ ಕರುಣಾಕರ ರೆಡ್ಡಿಯವರು ತಿ.ತಿ.ದೇ., ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಶ್ರೀನಿವಾಸರ ಕೃಪೆಯಿಂದ ಅದ್ಭುತವಾದ ಕಾರ್ಯಕ್ರಮಗಳು ನಡೆಯುತ್ತಿವೆ. ಭಜನ ಮಂಡಲಗಳು ಮತ್ತು ಕಲ್ಯಾಣ ಮಂಟಪಗಳ ಮೂಲಕ ಭಗವದ್ಗೀತೆ, ಸಂಸ್ಕೃತವನ್ನು ಪರಿಚಯಿಸಬೇಕು. ಸಂಕೀರ್ತನಾ ಭಜನೆಯಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳಬೇಕು.

### ಶ್ರೀಸ್ಥಿತ ಪ್ರಜ್ಞಾನಂದ ಸರಸ್ವತಿಸ್ವಾಮಿ, ಉತ್ತರಕಾಶಿ



ಪ್ರತಿಯೊಬ್ಬ ನಾಗರೀಕರು ಭಾರತೀಯ ಸಂಸ್ಕೃತಿ, ಸಂಪ್ರದಾಯಗಳನ್ನು ಗೌರವಿಸಬೇಕು. ಪ್ರತಿ ವರ್ಷ ತಿ.ತಿ.ದೇ., ಈ ರೀತಿಯ ಧಾರ್ಮಿಕ ಸಭೆಗಳನ್ನು ಆಯೋಜಿಸಬೇಕು. ಪ್ರತಿಯೊಬ್ಬರೂ ಸನಾತನ ಧರ್ಮವನ್ನು ಪಾಲಿಸಬೇಕು.

### ಶ್ರೀ ಪರಿಪೂರ್ಣಾನಂದಸ್ವಾಮಿ, ವ್ಯಾಸಾಶ್ರಮ, ಏರ್ಪೇಡು.



ಏರ್ಪೇಡು ಊರಿನಲ್ಲಿ, ಹಳ್ಳಿಗಳಲ್ಲಿ ಧರ್ಮಪ್ರಚಾರ ಮಾಡಬೇಕು. ದೇವರ ಸ್ಮರಣೆಯೊಂದಿಗೆ ಕಷ್ಟಗಳನ್ನು ಎದುರಿಸಬೇಕು. ಮಕ್ಕಳ ಬೆಳವಣಿಗೆಗೆ ಸೇವಾ ಸಂಸ್ಥೆಯ ಪ್ರಯತ್ನ ಉತ್ತಮ ಫಲಿತಾಂಶ ನೀಡುತ್ತಿದೆ. ಭಾರತ ವಿಶ್ವಕ್ಕೆ ಮಾದರಿಯಾಗಿ ನಿಲ್ಲಲು ಧರ್ಮವೇ ಕಾರಣ ಎಂದರು.

### ಶ್ರೀಹರಿತೀರ್ಥಾನಂದ ಸ್ವಾಮಿ, ನೆಲ್ಲೂರು



ಶ್ರೀ ಭೂಮನ ಕರುಣಾಕರ ರೆಡ್ಡಿ ಅವರು ಮಾನವರಲ್ಲಿ ಧರ್ಮದ ಬೀಜವನ್ನು ಬಿತ್ತಲು ಬಲವಾಗಿ ನಿರ್ಧರಿಸಿದರು. ಇತರ ಪ್ರದೇಶಗಳಲ್ಲಿ ಸ್ವಾಮಿಯವರ ಆಸ್ತಿಗಳ ಸಂರಕ್ಷಣೆಗೆ ಪರ್ಯಾಯ ವ್ಯವಸ್ಥೆ ಮಾಡಬೇಕು. ವಿಶೇಷ ಶುಭ ದಿನಗಳನ್ನು ಹೊರತುಪಡಿಸಿ ಉಳಿದ ಸಮಯದಲ್ಲಿ ಕಲ್ಯಾಣ ಮಂಟಪಗಳು ಖಾಲಿ ಇರುತ್ತವೆ, ಅಂತಹ ಸಮಯದಲ್ಲಿ ಕಲ್ಯಾಣ ಮಂಟಪದಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಬೇಕು.

### ಶ್ರೀ ಸತ್ಯಾನಂದ ಭಾರತಿ ಸ್ವಾಮಿ,ಚಿದಾನಂದ ಆಶ್ರಮ, ಗನ್ನವರಂ



ಧಾರ್ಮಿಕ ಕಾರ್ಯಕ್ರಮಗಳು ನಿರಂತರವಾಗಿ ನಡೆಯಬೇಕು. ಧರ್ಮ ಪ್ರಚಾರ ಮಂಡಲ, ಗ್ರಾಮ, ಜಿಲ್ಲೆಯ ಮಟ್ಟಕ್ಕೆ ಹೋಗಬೇಕು. ಧಾರ್ಮಿಕ ಪರಿಷತ್ತಿನ ಕಾರ್ಯಕ್ರಮಗಳು ರಾಜ್ಯಕ್ಕೆ ಮಾತ್ರ ಸೀಮಿತವಾಗದೆ ಸಾರ್ವತ್ರಿಕವಾಗಬೇಕು.

### ಮಾತಾ ರಮ್ಯಾನಂದ ಭಾರತಿ, ಶ್ರೀ ಶಕ್ತಿ ಪೀಠ, ರಾಯಲಚೆರುವು

ಹಿಂದೂ ಧರ್ಮವು ಮೊದಲು ಭಾರತಕ್ಕೆ ಸೀಮಿತವಾಗಿತ್ತು. ಅದು ಈಗ ಪ್ರಪಂಚದಾದ್ಯಂತ ವಿಸ್ತರಿಸುತ್ತಿರುವುದು ಶುಭಕರ.ತಿರುಮಲೆ ಸ್ವಾಮಿ



ಯವರ ದರ್ಶನಕ್ಕೆ ಬರುವವರ ಸಂಖ್ಯೆಯೂ ಹೆಚ್ಚಾಗುತ್ತಿರುವುದೇ ಇದಕ್ಕೆ ಸಾಕ್ಷಿ.ಹಿಂದೂ ಧರ್ಮ ಪ್ರಚಾರದಲ್ಲಿ ಎಸ್.ವಿ.ಭಕ್ತಿ ಚಾನಲ್‌ಗೆ ವಿಶೇಷ ಸ್ಥಾನವಿದೆ. ರಾಜ್ಯ ಸರ್ಕಾರ ಶಿಕ್ಷಣದ ಡಿಜಿಟಲೀಕರಣವನ್ನು ಜಾರಿಗೆ ತಂದಿದೆ. ಚಿಕ್ಕ ಮಕ್ಕಳಿಗಾಗಿ ತಿ.ತಿ.ದೇ.,ಮಕ್ಕಳ ಯೂಟ್ಯೂಬ್ ಅನ್ನು ಉತ್ತೇಜಿಸಬೇಕು. ಅದನ್ನು ಪರಿಚಯಿಸಿದರೆ ಎಲ್ಲರಲ್ಲೂ ಸೇರುವ ಆಸಕ್ತಿ ಹೆಚ್ಚುತ್ತದೆ.

**ಶ್ರೀಅಷ್ಟಾಕ್ಷರಿಸಂಪತ್‌ಕುಮಾರ್ ರಾಮಾನುಜ ಜೀಯರ್ ಸ್ವಾಮಿ, ವಿಜಯವಾಡ.**



ತಿ.ತಿ.ದೇ.,ಯಲ್ಲಿ ಅನೇಕ ಆಗಮ, ಪುರಾಣ, ವೇದ ವಿದ್ವಾಂಸರು ಇದ್ದಾರೆ. ತಿ.ತಿ.ದೇ.,ಅಧ್ಯಕ್ಷರು ಶ್ರೀಭೂಮನ ಕರುಣಾಕರರೆಡ್ಡಿ ಯವರು ಕೂಡ ವಿದ್ವಾಂಸರೇ ತಿ.ತಿ.ದೇ.,ಸಂಸ್ಥೆ ಬಹಳ ದೊಡ್ಡ ವ್ಯವಸ್ಥೆ. ಸಾಮಾನ್ಯ ಭಕ್ತರಿಗೂ ಸಾಂಪ್ರದಾಯಿಕ ಉಡುಪುಗಳನ್ನು ಅನ್ವಯಿಸಬೇಕು. .

**ಶ್ರೀಸಚ್ಚಿದಾನಂದ ಸರಸ್ವತಿ, ತಪೋವನಂ ,ತುನಿ**




ಪುಸ್ತಕ ಪ್ರಸಾದ ವಿತರಣೆಯನ್ನು ಬಲಪಡಿಸಿ ವಿಸ್ತರಿಸಬೇಕು. ಸಾಮೂಹಿಕ ಪ್ರಾರ್ಥನೆ, ಭಜನಾ ಕಾರ್ಯಕ್ರಮಗಳು ಹೆಚ್ಚಾಗಬೇಕು. ಭಕ್ತಿ, ವೇದ, ಧರ್ಮಾಚರಣೆ ಸಮಾಜಕ್ಕೆ ಉಪಯುಕ್ತವಾಗಬೇಕು.

**ಡಾ॥ ವಿ.ಆರ್. ಗೌರಿಶಂಕರ್ , ಶೃಂಗೇರಿ ಶಾರದ ಪೀಠದ ಪ್ರತಿನಿಧಿ.**



ವೈದಿಕ ಪಾಠಶಾಲೆಯ ಮಟ್ಟಕ್ಕೇರಬೇಕು. ಅಮೇರಿಕ ಬ್ರಿಟನ್‌ನಂತಹ ದೇಶಗಳಿಗೆ ಹೋದರೂ ಮಾನ್ಯತೆ ಮತ್ತು ಮೌಲ್ಯದ ಪ್ರಮಾಣಪತ್ರ ನೀಡಲು ತಿ.ತಿ.ದೇ.,ಕ್ರಮ ಕೈಗೊಳ್ಳಬೇಕು. ಅನ್ಯಧರ್ಮೀಯರಾದ ನಂತರ ಹಿಂದೂಗಳಾಗಲು ಮುಂದೆ ಬರುವವರನ್ನು ಸ್ವಾಗತಿಸಲು ತಿ.ತಿ.ದೇ., ಕಾರ್ಯವಿಧಾನಗಳನ್ನು ರೂಪಿಸಬೇಕು.

**ಚಲ್ಲಾವಿಶ್ವನಾಥ ಶರ್ಮ,ಕಂಚಿಕಾಮಕೋಟಿಪೀಠ**



ಓರಿಯಂಟಲ್ ಕಾಲೇಜನ್ನು ನಿರ್ಮಿಸಿ ಪುರಾಣಗಳ ಪರಿಶೀಲನೆ ಮಾಡಿ ಹಿಂದೂ ಸನಾತನ ಧರ್ಮದ ವ್ಯಾಪ್ತಿಗೆ ಕೃಷಿ ಮಾಡಬೇಕು.

**ಶ್ರೀರಾಘವುಲು,ವಿಶ್ವ ಹಿಂದೂ ಪರಿಷತ್ತಿನ ಅಂತರಾಷ್ಟ್ರೀಯ ಕಾರ್ಯದರ್ಶಿ**




ಧಾರ್ಮಿಕ ಸಮ್ಮೇಳನವನ್ನು ನೋಡಿದರೆ 1966 ರಲ್ಲಿ ಪ್ರಯಾಗದಲ್ಲಿ ನಡೆದ ಕುಂಭಮೇಳ ನೆನಪಾಗುತ್ತದೆ. ದೇವಾಲಯದ ವ್ಯವಸ್ಥೆಯನ್ನು ರಕ್ಷಿಸಬೇಕು ಮತ್ತು ಸಮುದಾಯವನ್ನು ಒಗ್ಗಟ್ಟಿನಿಂದ ಇರಿಸಲು ಶ್ರಮಿಸಬೇಕು.

**ಶ್ರೀ ವೇದುರುಪಾಕ ಸ್ವಾಮಿ, ವಿಜಯದುರ್ಗಾ ಪೀಠ**



ತಿರುಮಲೆ ಸ್ವಾಮಿಯವರ ದರ್ಶನಕ್ಕೆ ಬರುವ ಸಾಮಾನ್ಯ ಭಕ್ತರಿಗೆ ಉಪಹಾರವಾಗಿ ಇಡ್ಲಿ, ವಡೆ, ಕಾಫಿ 20/- ರೂ ಗೆ ವಿತರಿಸಬೇಕು. ಕ್ಯೂಲೈನ್‌ನಲ್ಲಿರುವ ಭಕ್ತರಿಗೆ ಹಾಲು ಮತ್ತು ಬಿಸ್ಕಟ್ ವಿತರಿಸಲು ತಿ.ತಿ.ದೇ., ಕ್ರಮ ಕೈಗೊಳ್ಳಬೇಕು.

**ಶ್ರೀಸುಜಯನಿಧಿತೀರ್ಥ ಶ್ರೀಪಾದರು, ಶ್ರೀಪಾದರಾಜಮಠ, ಮುಳಬಾಗಿಲು**



ಈ ಕಾರ್ಯಕ್ರಮವನ್ನು ನಡೆಸುತ್ತಿರುವ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಮತ್ತು ಇತರ ಅಧಿಕಾರಿಗಳಿಗೆ ಅಭಿನಂದನೆಗಳು. ತಿರುಮಲೆ ತಿರುಪತಿ ದೇವಸ್ಥಾನವು ಭಾರತದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಸನಾತನ ಧರ್ಮದಲ್ಲಿ ಪ್ರತಿಯೊಬ್ಬ ಮುಖ್ಯಸ್ಥರನ್ನು ಪಾಲುದಾರರನ್ನಾಗಿ ಮಾಡಬೇಕು.ಸನಾತನ ಹಿಂದೂ ಧರ್ಮದ ಸಂಪ್ರದಾಯವನ್ನು ದೇಶದ ಪ್ರತಿ ಮನೆಗೂ ತಿಳಿಸುವ ಪ್ರಯತ್ನ ಮಾಡಬೇಕು.

**ಶ್ರೀಮುಕುಂದಾನಂದ ಮಹಾರಾಜ್, ಜ್ಯೋತಿರ್ಮಠ, ಉತ್ತರಾಖಂಡ್**



ಸನಾತನ ಧರ್ಮ ಎಂದರೆ ಮನುಷ್ಯರಷ್ಟೇ ಅಲ್ಲ, ಪಶು, ಸಸ್ಯ, ಪ್ರಾಣಿಗಳೂ ಸಮೃದ್ಧವಾಗಿರಬೇಕು. ಆಧುನಿಕ ಶಿಕ್ಷಣದಲ್ಲಿ ನಾವು ನಮ್ಮ ಸಾಂಪ್ರದಾಯಿಕ ಹಿಂದೂಧರ್ಮ,ಸಂಸ್ಕೃತಿ,ಸಂಪ್ರದಾಯಗಳ ಬಗ್ಗೆ ಎಲ್ಲರಿಗೂ ತಿಳಿಸಬೇಕು. ಗೋವನ್ನು ವಿಶ್ವ ಮಾತೆ ಎಂದು ಘೋಷಿಸಬೇಕು.

**ಶ್ರೀ ವಿದ್ಯಾವಲ್ಲಭ ತೀರ್ಥ ಶ್ರೀಪಾದರು, ಕಾಣಿಯೂರು ಮಠ, ಉಡುಪಿ**



ತಿ.ತಿ.ದೇ.,27ಯೋಜನೆಗಳ ಮೂಲಕ ಅನೇಕ ಹಿಂದೂ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ವೈದ್ಯಕೀಯ ಸೇವಾ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ಸಂತಸ ತಂದಿದೆ. ಲಕ್ಷಗಟ್ಟಲೆ ಹಣ ವ್ಯಯಿಸಿ ವೈದ್ಯಕೀಯ ಚಿಕಿತ್ಸೆ ಪಡೆಯಲು ಸಾಧ್ಯವಾಗದವರಿಗೆ ಚಿಕಿತ್ಸೆ ನೀಡುತ್ತಿರುವ ತಿ.ತಿ.ದೇ., ಗೆ ವಿಶೇಷ ಧನ್ಯವಾದಗಳು.

**ಶ್ರೀಸೆಂಡ್‌ಲಂಕಾರ ಶೇನ್‌ಭಗಮನ್ನಾರ್ ಜೀಯರ್ ಸ್ವಾಮಿ, ಶ್ರೀಮನ್ನಾರ್‌ಗುಡಿ**



ಆಂಧ್ರಪ್ರದೇಶ, ತೆಲಂಗಾಣ ರಾಜ್ಯಗಳಲ್ಲಿ ಧಾರ್ಮಿಕ ಮತಾಂತರ ಚಟುವಟಿಕೆಗಳನ್ನು ತಡೆಯಲು ತಿ.ತಿ.ದೇ, ಶ್ರಮಿಸಬೇಕು. ಗೋ ಸಂರಕ್ಷಣೆಗಾಗಿ ವಿಶ್ವದಾದ್ಯಂತ ಹಿಂದೂ ಧರ್ಮ ಪ್ರಚಾರಕ್ಕಾಗಿ ತಿ.ತಿ.ದೇ., ಶ್ರಮಿಸಬೇಕು. ವೈದ್ಯಕೀಯ ಶಿಕ್ಷಣ ಸಂಸ್ಥೆಗಳನ್ನು ವಿಸ್ತರಿಸಬೇಕು.

### ಶ್ರೀ ವಿದ್ಯಾ ವಿಜಯತೀರ್ಥ ಶ್ರೀಪಾದರು , ಬೆಂಗಳೂರು



ತಿ.ತಿ.ದೇ., 27 ಯೋಜನೆಗಳ ಮೂಲಕ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.ಆಸ್ಪತ್ರೆಯಲ್ಲಿ ಚಿಕಿ ತ್ಸೆಯ ಭಾಗವಾಗಿ ಸದ್ಯದ ಪರಿಸ್ಥಿತಿಯಲ್ಲಿ ಸಾಕಷ್ಟು ಹಣ ಖರ್ಚು ಮಾಡಿ ವೈದ್ಯಕೀಯ ಚಿಕಿತ್ಸೆ ಪಡೆಯುವ ಸ್ಥಿತಿಯಲ್ಲಿಲ್ಲದವರಿಗೆ ತಿ.ತಿ.ದೇ., ವೈದ್ಯವನ್ನು ನೀಡುತ್ತಿರುವುದಕ್ಕೆ ವಿಶೇಷ ಧನ್ಯವಾದಗಳು. ಈ ಎಲ್ಲಾ ಕಾರ್ಯ ಕ್ರಮಗಳನ್ನು ಅಧ್ಯಕ್ಷರು ಮತ್ತು ಕಾರ್ಯನಿರ್ವಹಣಾಧಿಕಾರಿ ರೂಪದಲ್ಲಿ ಆ ಭಗವಂತ ಮಾಡುತ್ತಿದ್ದಾನೆ. ಅನೇಕ ಭಾಷೆಗಳಲ್ಲಿ ಸಪ್ತಗಿರಿ ಮಾಸಪತ್ರಿಕೆಯನ್ನು ಪ್ರಕಟಿಸುತ್ತಿದ್ದಾರೆ. ಇನ್ನು ಮುಂತಾದ ಹಲವು ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಬೇಕೆಂದು ತಿಳಿಸಿದರು.

### ಶ್ರೀ ಅನುಪಮಾನಂದ ಮಹಾರಾಜ,ರಾಮಕೃಷ್ಣ ಸೇವಾ ಸಮಿತಿ, ಕಡಪ



ಧಾರ್ಮಿಕ ಸಮ್ಮೇಳನದಲ್ಲಿ ವ್ಯಕ್ತವಾದ ಅಭಿಪ್ರಾಯ ಸಲಹೆಗಳನ್ನು ಸ್ವೀಕರಿಸಿ ಅನುಷ್ಠಾನಕ್ಕೆ ತರಲಾಗುವುದು ಎಂದು ಶ್ರೀಭೂಮನ ಕರುಣಾಕರ ರೆಡ್ಡಿಯವರು ತಿಳಿಸಿರುವುದು ಬಹಳ ಸಂತೋಷ ಮುಂದಿನ ಪೀಳಿಗೆಗೆ ಧರ್ಮವನ್ನು ತಲುಪಿಸಲು ಹೆಚ್ಚು ಹೆಚ್ಚು ಉತ್ತಮ ಪ್ರಯತ್ನಗಳು ನಡೆಯಬೇಕು. ಯುವಕರಲ್ಲಿ ಧರ್ಮಾಚರಣೆಯತ್ತ ಆಸಕ್ತಿ ಬೆಳೆಯಬೇಕು. ಸಂಸ್ಕೃತ ಭಾಷೆಯನ್ನು ಪ್ರೋತ್ಸಾಹಿಸಬೇಕು.ಇದರಿಂದ ಭಾಷೆಯ ಜತೆಗೆ ಸಂಸ್ಕೃತಿಯೂ ಯುವಜನತೆಗೆ ತಿಳಿಯುತ್ತದೆ.

### ಶ್ರೀ ಕಮಲಾನಂದ ಭಾರತಿ ಸ್ವಾಮಿ, ಭುವನೇಶ್ವರಿ ಪೀಠ, ಗನ್ನವರಂ, ವಿಜಯವಾಡ



ಜಗತ್ತಿನಾದ್ಯಂತ ಇರುವ ಹಿಂದೂಗಳಿಗೆ ಆ ಭಗವಂತನು ನೀಡಿದ ವರವೇ ತಿ.ತಿ.ದೇ.,ಹಿಂದೂಧರ್ಮಪ್ರಚಾರ ಪರಿಷತ್ತು ರಚನೆಯಾಯಿತು. ಧರ್ಮ ಪ್ರಚಾರ ಪರಿಷತ್ತು ಮನೆ ಮನೆಗೆ ಕರಪತ್ರ ನೀಡಿ ಪ್ರಚಾರ ಮಾಡುತ್ತಿದೆ. ಅಂದು ಶ್ರೀ ಭೂಮನ ಕರುಣಾಕರ ರೆಡ್ಡಿಯವರ ನೇತೃತ್ವದಲ್ಲಿ ನಿರ್ವಹಿಸಿದ ದಲಿತ ಗೋವಿಂದಂ ಒಂದು ಉತ್ತಮ ಕಾರ್ಯಕ್ರಮವಾಗಿತ್ತು.ಕಡಪ ಜಿಲ್ಲೆಯಲ್ಲಿ ದಲಿತರೂ ಈ ಕಾರ್ಯ ಕ್ರಮವನ್ನು ಸ್ವಾಗತಿಸಿದರು.

### ಶ್ರೀ ರೇವತಿ ರಮಣದಾಸ್, ಇಸ್ಕಾನ್, ತಿರುಪತಿ



ಶ್ರೀ ವೆಂಕಟೇಶ್ವರ ಭಕ್ತಿ ಚಾನೆಲ್, ಎಸ್.ವಿ.ಬಿ.ಸಿ.ಕಾರ್ಯಕ್ರಮಗಳು ತುಂಬಾ ಚೆನ್ನಾಗಿವೆ.ತಿ.ತಿ.ದೇ.,ಕಾರ್ಯನಿರ್ವಹಣಾಧಿಕಾರಿ ಶ್ರೀ ಎ. ವಿ. ಧರ್ಮಾರೆಡ್ಡಿ ಅವರ ವಿಶೇಷ ಗಮನದಿಂದಾಗಿ ಎಸ್.ವಿ.ಬಿ.ಸಿ.ಯಲ್ಲಿ ಶ್ರೀ ರಾಮಾಯಣ, ಭಾಗವತ ಸೇರಿದಂತೆ ಹಲವು ಕಾರ್ಯಕ್ರಮಗಳು ಪ್ರಸಾರವಾಗುತ್ತಿವೆ. ದೇಶದೆಲ್ಲೆಡೆ ಗೋಶಾಲೆಗಳನ್ನು ಸ್ಥಾಪಿಸಬೇಕು.

### ಶ್ರೀ ವಾಸುದೇವಾನಂದಗಿರಿ ಸ್ವಾಮಿ, ಪೆದ್ದ ಪುಲಿಪಾಕ ಆಶ್ರಮ, ಕೃಷ್ಣಾಜಿಲ್ಲೆ



ಗೋಸಂರಕ್ಷಣೆಗೆ ತಿ.ತಿ.ದೇ., ಮುಂದಾಗಬೇಕು. ಮಾತೃ ಮೂರ್ತಿಗಳನ್ನು ಗೌರವಿಸಿ, ಮಹಿಳೆಯರನ್ನು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕು.

### ಶ್ರೀ ಸೌಂದರರಾಜನ್ ರಂಗರಾಜನ್, ಚಿಲುಕೂರು ಬಾಲಾಜಿ ದೇವಸ್ಥಾನ, ಹೈದರಬಾದ್



ಧರ್ಮವನ್ನು ರಕ್ಷಿಸಲು ಮತ್ತು ಮುಂದಿನ ಪೀಳಿಗೆಗೆ ತಲುಪಿಸಲು ಸಮಾವೇಶವನ್ನು ಆಯೋಜಿಸಬೇಕು. ಈಗಿರುವ ದೇವಸ್ಥಾನಗಳಲ್ಲಿ ಧರ್ಮರಕ್ಷಣೆಗೆ ಅರ್ಚಕರನ್ನು ಪಾಲುದಾರರನ್ನಾಗಿ ಮಾಡಬೇಕು. ಒಂಟಿಮಿಟ್ಟ ರಾಮ ಮಂದಿರದಲ್ಲಿ ಕೆಳವರ್ಗದವರಿಗೆ ಹರಿದಾಸರ ಸ್ಥಳ ಪುರಾಣದ ಐತಿಹ್ಯದಂತೆ ಕೆಳವರ್ಗದವರಿಗೆ ಆದ್ಯತೆ ನೀಡಬೇಕು.ದಾಸಸಾಹಿತ್ಯ ಯೋಜನೆ, ಅನ್ನಮಯ್ಯ ಯೋಜನೆ ಕಾರ್ಯಕ್ರಮಗಳು ಯಶಸ್ವಿಯಾಗಿವೆ. ನಾಮ ಸಂಕೀರ್ತನೆ, ಭಜನಾ ಕಾರ್ಯಕ್ರಮಗಳು ವಿಸ್ತಾರಗೊಳ್ಳಬೇಕು.

### ಶ್ರೀಸುಭುದೇಂದ್ರತೀರ್ಥ ಶ್ರೀಪಾದರು,ಶ್ರೀರಾಘವೇಂದ್ರಸ್ವಾಮಿಮಠ, ಮಂತ್ರಾಲಯ



ಧರ್ಮ ಸಂರಕ್ಷಣೆಗೆ ಎಲ್ಲರೂ ಶ್ರಮಿಸಬೇಕು. ತಿ.ತಿ.ದೇ., ಆಡಳಿತ ಮಂಡಳಿ ಮತ್ತು ವ್ಯವಸ್ಥೆಗಳನ್ನು ಬಲಪಡಿಸಬೇಕು.ಹಿಂದೂ ಧರ್ಮದ ಪ್ರಚಾರಕ್ಕಾಗಿ ತಿ.ತಿ.ದೇ.,ವಿಶ್ವದಾದ್ಯಂತ ಕೆಲಸ ಮಾಡುತ್ತಿದೆ. ತಿರುಪತಿಯ ದೇವಸ್ಥಾನಗಳಲ್ಲಿ ಧರ್ಮಪ್ರಚಾರಕ್ಕೆ ವಿಶೇಷ ಗಮನ ನೀಡಬೇಕು. ಗೋವಿಂದನ ನಾಮಸ್ಮರಣೆ ಮಾಡಬೇಕು.

### ಶ್ರೀಶಠಗೋಪ ಶ್ರೀರಾಮಾನುಜ ಜೀಯರ್,,ಶ್ರೀವಿಲ್ಲಿಪುತ್ತೂರು ತಮಿಳುನಾಡು



ಎಲ್ಲರೂ ಮೋಕ್ಷ ಪಡೆಯಬೇಕು ಎಂಬ ರಾಮಾನುಜರ ಆಲೋಚನೆಯಂತೆ ತಿರುಮಲೆ ತಿರುಪತಿ ದೇವಸ್ಥಾನದ ಅಧ್ಯಕ್ಷರು ಮತ್ತು ಕಾರ್ಯನಿರ್ವಹಣಾಧಿಕಾರಿ ಕಾರ್ಯನಿರ್ವಹಿಸುತ್ತಿದ್ದಾರೆ. ವೈಕುಂಠಂ ಕ್ಯೂ ಕಾಂಪ್ಲೆಕ್ಸ್‌ನಲ್ಲಿ ಕಾಯುತ್ತಿರುವವರಿಗೆ ಬೇಗ ದರ್ಶನಕ್ಕೆ ವ್ಯವಸ್ಥೆ ಮಾಡಬೇಕು. ನಾವೆಲ್ಲರೂ ಒಗ್ಗಟ್ಟಾಗಿರಬೇಕು ನಮ್ಮ ಧರ್ಮವನ್ನು ರಕ್ಷಿಸಬೇಕು. ವೇದ ವಿದ್ವಾಂಸರು ದೇವಸ್ಥಾನಗಳಲ್ಲಿ ನಾಲಾಯಿರ ದಿವ್ಯ ಪ್ರಬಂಧದ ಶಿಕ್ಷಕರನ್ನು ನೇಮಿಸುವುದು ಮಾತ್ರವಲ್ಲದೆ ಅವರಿಗೆ ಜೀವನೋಪಾಯವನ್ನು ಒದಗಿಸ ಬೇಕು.

**ಶ್ರೀ ನಾರಾಯಣ್‌ಜೀ ಮಹಾರಾಜ್, ದ್ವಾರಕ, ಶಂಕರಾಚಾರ್ಯ ಮಠ, ಗುಜರಾತ್**




ಈ ಸನಾತನ ಧರ್ಮವನ್ನು ಹರಡಲು ತಿರುಮಲೆ ತಿರುಪತಿ ದೇವಸ್ಥಾನದ ಪ್ರಯತ್ನಗಳಿಗೆ ನಮ್ಮ ಸಹಾಯ ಮತ್ತು ಸಲಹೆಗಳನ್ನು ನೀಡುವ ಮೂಲಕ ನಮ್ಮೆಲ್ಲರ ಬೆಂಬಲದೊಂದಿಗೆ ಮುನ್ನಡೆಯಬೇಕು.

**ಶ್ರೀವಿದ್ಯಾಪ್ರಕಾಶಾನಂದಗಿರಿ ಸ್ವಾಮಿ, ಶುಕಬ್ರಹ್ಮಾಶ್ರಮ, ಶ್ರೀಕಾಳಹಸ್ತಿ**



ಶ್ರೀ ಸೂಕ್ತಂ, ಶ್ರೀ ಲಕ್ಷ್ಮೀ ಅಷ್ಟೋತ್ತರವನ್ನು ಪುಸ್ತಕ ರೂಪದಲ್ಲಿ ವಿತರಿಸಬೇಕು. ಸನಾತನ ಧರ್ಮವನ್ನು ಪ್ರಚಾರ ಮಾಡಲು ತಿ.ತಿ.ದೇ., ಕೃಷಿ ಮಾಡಬೇಕು.

**ಶ್ರೀ ಶಂಕರ ವಿಜಯೇಂದ್ರ ಸರಸ್ವತಿ ಸ್ವಾಮಿ, ಕಂಚಿ ಕಾಮಕೋಟಿ ಪೀಠಂ ,ಕಾಂಚೀಪುರಂ**




ಧಾರ್ಮಿಕ ಕಾರ್ಯಕ್ರಮಗಳು ಚೆನ್ನಾಗಿವೆ. ಉತ್ತರ ದೇಶದ ಪುರಾತನ ದೇವಾಲಯಗಳಲ್ಲೂ ಧಾರ್ಮಿಕ ಪ್ರಚಾರ ನಡೆಯಬೇಕು. ಭಕ್ತರು ತಿಲಕ ಧಾರಣೆ ಮಾಡುವ ಮೂಲಕ ಹಿಂದೂ ಧರ್ಮದ ಪ್ರಚಾರಕ್ಕೆ ಶ್ರಮಿಸಬೇಕು. ತಿ.ತಿ.ದೇ.,ಸಹಕಾರದೊಂದಿಗೆ ಅನೇಕ ಸೇವಾ ಮತ್ತು ಧಾರ್ಮಿಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕು. ತಿರುಪತಿಯಲ್ಲಿ ಉತ್ತಮ ರಸ್ತೆ ನಿರ್ಮಿಸಿ ಶ್ರೀ ಶ್ರೀ ಶ್ರೀ ಚಂದ್ರಶೇಖರ ಸರಸ್ವತಿ ಮಾರ್ಗ ಎಂದು ನಾಮಕರಣ ಮಾಡಿರುವುದು ಬಹಳ ಸಂತೋಷಕರವಾದುದು ಎಂದು ಹೇಳಿದರು.

**ಶ್ರೀ ರವಿಶಂಕರ್ ಗುರೂಜೀ,ಬೆಂಗಳೂರು**



ತಿರುಮಲೆ ತಿರುಪತಿ ದೇವಸ್ಥಾನವು ಸನಾತನ ಧರ್ಮದ ಪ್ರಚಾರಕ್ಕಾಗಿ ಶ್ರಮಿಸುತ್ತಿದೆ. ಅಧ್ಯಕ್ಷರು ಮತ್ತು ಆಡಳಿತ ಮಂಡಳಿಯವರಿಗೆ ಧನ್ಯವಾದಗಳು. ಯುವಕರನ್ನು ಸನ್ಮಾರ್ಗದತ್ತ ಕೊಂಡೊಯ್ಯುವ ಸಮಯ ಬಂದಿದೆ. ಧರ್ಮ ಸಂರಕ್ಷಣೆಯಲ್ಲಿ ಯುವಕರ ಪ್ರಾಮುಖ್ಯತೆ ದೊಡ್ಡದು. ಗ್ರಾಮಗಳಲ್ಲಿರುವ ಪುರೋಹಿತರಿಗೆ ವೇದಗಳಲ್ಲಿ ಹೇಳಿರುವಂತೆ ವೈದಿಕ ವಿಧಿವಿಧಾನಗಳಲ್ಲಿ ತರಬೇತಿ ನೀಡುವ ಅಗತ್ಯವಿದೆ.ಧರ್ಮವನ್ನು ಉಳಿಸುವ ನಿಟ್ಟಿನಲ್ಲಿ ಜನರಿಗೆ ಶಿಕ್ಷಣ ನೀಡುವ ಸಮಯ ಬಂದಿದೆ. ತಿರುಮಲೆ ತಿರುಪತಿ ದೇವಸ್ಥಾನದ ಜನರು ಜಾನಪದ ಹಾಡುಗಳು,ಯಕ್ಷಗಾನಗಳು,ಭಜನೆಗಳು ಮತ್ತು ಕೀರ್ತನೆಗಳನ್ನು ವ್ಯಾಪಕವಾಗಿ ಪ್ರಚಾರ ಮಾಡಬೇಕು.

**ಶ್ರೀ ವಿದ್ಯಾಶಂಕರ ಭಾರತೀಸ್ವಾಮಿ, ಪುಷ್ಪಗಿರಿಮಠ, ಕಡಪ ಜಿಲ್ಲೆ**




ದೇವಸ್ಥಾನಗಳಲ್ಲಿ ಯಜ್ಞ, ಪೂಜಾ ಕಾರ್ಯಕ್ರಮಗಳು ಹೆಚ್ಚಾಗುತ್ತಿವೆ. ಸಾಂಪ್ರದಾಯಿಕ ಸಂರಕ್ಷಣೆಗೆ ಎಲ್ಲರೂ ತಿ.ತಿ.ದೇ., ಶ್ರಮಿಸಬೇಕು.ತಿ.ತಿ.ದೇ.,ಅದ್ಭುತ ಕೆಲಸ ಮಾಡುತ್ತಿದೆ. ಈ ನಿಟ್ಟಿನಲ್ಲಿ ಅಧ್ಯಕ್ಷರಾದ ಶ್ರೀ ಭೂಮನಕರುಣಾಕರ ರೆಡ್ಡಿಯವರು,ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ ಅವರ ಶ್ರಮ ಅದ್ಭುತ. ಧಾರ್ಮಿಕ ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳನ್ನು ಜಾರಿಗೊಳಿಸಬೇಕು.

**ಶ್ರೀ ಸತ್ಯಾತ್ಮ ತೀರ್ಥ ಶ್ರೀಪಾದರು, ಉತ್ತರಾದಿ ಮಠ ,**




ವೇದಗಳ ರಕ್ಷಣೆಯಾದರೆ ಧರ್ಮ ರಕ್ಷಣೆಯಾಗುತ್ತದೆ. ತಿ.ತಿ.ದೇ., ಗೋಶಾಲೆ, ಆಯುರ್ವೇದ, ವೇದ ಪಾಠಶಾಲೆ ಮುಂತಾದ ಹಲವು ಸಂಸ್ಥೆಗಳನ್ನು ತಿ.ತಿ.ದೇ., ನಡೆಸುತ್ತಿದೆ. ಸನಾತನ ಮತ್ತು ಹಿಂದೂ ಧರ್ಮದ ಪ್ರಚಾರವನ್ನು ವಿಶೇಷವಾಗಿ ಹೆಚ್ಚಿಸಬೇಕು.ಅಧ್ಯಕ್ಷರ ಸಹಕಾರ ತೆಗೆದುಕೊಳ್ಳಬೇಕು.ಪುಸ್ತಕಗಳ ವಿತರಣೆ, ಸ್ವಾಮಿಯವರ ಫೋಟೋಗಳನ್ನು ವಿತರಿಸಬೇಕು. ಹಬ್ಬ, ಹರಿದಿನ ಸಂಪ್ರದಾಯಗಳನ್ನು ಪರಿಚಯಿಸಬೇಕು.

**ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು ,ಪಲಿಮಾರು ಮಠ, ಉಡುಪಿ**



ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಧರ್ಮವನ್ನು ಕಲಿಸುವ ಪಠ್ಯಕ್ರಮ ಇರಬೇಕು. ಅಲ್ಲದೆ ಶಾಲೆಗಳಲ್ಲಿ ಯೋಗವನ್ನು ಕಲಿಸುವುದು ವಿದ್ಯಾರ್ಥಿಗಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಸಹ ಉಪಯುಕ್ತವಾಗುತ್ತದೆ. ಸಂಸ್ಕೃತ ಭಾಷೆಯನ್ನು ಪ್ರತಿ ಮನೆಯಲ್ಲೂ ಶಿಕ್ಷಣ ನೀಡುವಂತೆ ಮಾಡಬೇಕು. ನಮ್ಮ ಸಂಸ್ಕೃತಿ ಉಳಿಯುವುದು ಸಂಸ್ಕೃತ ಭಾಷೆಯಿಂದ ಮಾತ್ರ.

**ಶ್ರೀ ವಿದುಶೇಖರ ಭಾರತೀ ತೀರ್ಥ ಸ್ವಾಮಿ, ಶೃಂಗೇರಿ ಶಾರದ ಪೀಠದ ಉತ್ತರಾಧಿಕಾರಿ**



ಧಾರ್ಮಿಕ ಚಿಂತನೆಗಾಗಿ ತಿರುಮಲೆ ಪುಣ್ಯ ಕ್ಷೇತ್ರದಲ್ಲಿ ಧಾರ್ಮಿಕ ಸಮ್ಮೇಳನ ಆಯೋಜಿಸಿರುವುದು ಸಂತಸತಂದಿದೆ. ಸನಾತನ ಧರ್ಮದಿಂದ ಮಾತ್ರ ವಿಶ್ವಶಾಂತಿ ಸಾಧ್ಯ ಎಂಬುದನ್ನು ಅರಿತುಕೊಳ್ಳಬೇಕು. ಜನ ಸಾಮಾನ್ಯರಿಗೂ ಸನಾತನ ಧರ್ಮದ ಬಗ್ಗೆ ಹೆಚ್ಚಿನ ಮಾಹಿತಿ ನೀಡಬೇಕು.

**ಶ್ರೀವಿಜಯದತ್ತಾನಂದ ಸ್ವಾಮೀಜಿ, ಉತ್ತರಾಧಿಕಾರಿ,ದತ್ತಪೀಠ, ಮೈಸೂರು**

ಶ್ರೀ ವೆಂಕಟೇಶ್ವರ ಸ್ವಾಮಿಯವರ ಧರ್ಮಸಂಸ್ಥಾಪನೆಗಾಗಿ ತಿರುಮಲೆಯಲ್ಲಿ ನೆಲೆಸಿದ್ದಾರೆ. ವೇದ ವಿಜ್ಞಾನದ ಸಂರಕ್ಷಣೆ ಅತ್ಯಗತ್ಯ. ಗೋವಿಂದ




ಕೋಟಿ ಬರೆದ ಭಕ್ತರಿಗೆ ಸ್ವಾಮಿಯ ದರ್ಶನದ ವ್ಯವಸ್ಥೆ ಮಾಡುವ ವಿಚಾರ ತುಂಬಾ ಚೆನ್ನಾಗಿದೆ. ಯುವಕ-ಯುವತಿಯರಿಗೆ ಧರ್ಮದ ವಿಷಯಗಳ ಕುರಿತು ತಿ.ತಿ.ದೇ., ಪ್ರತ್ಯೇಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಐದು ಕೋಟಿ ಗೀತಾ ಪುಸ್ತಕ ಪ್ರಸಾದ ವಿತರಿಸಬೇಕು. ತಿ.ತಿ.ದೇ., ಆಶ್ರಯದಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ಜನಸಾಮಾನ್ಯರಿಗೆ ತಲುಪಿಸಬೇಕು.

**ಶ್ರೀಶಠಗೋಪ ಶ್ರೀರಂಗನಾಥ್ ಯತೀಂದ್ರ ಮಹಾದೇಶಿಕನ್ ಸ್ವಾಮಿ,ಅಹೋಬಿಲಂ**



ವೇದಗಳಲ್ಲಿ ಹೇಳಿರುವುದನ್ನು ಪ್ರಚಾರ ಮಾಡಬೇಕು. ವೇದಗಳನ್ನು ನಾವು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ. ವೇದ ಪಾರಾಯಣಕ್ಕೆ ಆದ್ಯತೆ ನೀಡಬೇಕು. ಹಾಗೆಯೇ ವೇದ ವಿದ್ವಾಂಸರಿಗೂ ಪ್ರೋತ್ಸಾಹ ನೀಡಬೇಕು.

**ಶ್ರೀ ಸಿದ್ದೇಶ್ವರಾನಂದ ಭಾರತೀತೀರ್ಥ ಸ್ವಾಮೀಜಿ,ಮೌನ ಸ್ವಾಮಿ ಮಠಂ , ಕುರ್ತಾಲಂ ಪೀಠಾಧಿಪತಿ**



ಶೇಕಡ 75 ರಷ್ಟು ಜನಸಂಖ್ಯೆ ಹೊಂದಿರುವ ಭಾರತದಂತಹ ಹಿಂದೂ ರಾಷ್ಟ್ರದಲ್ಲಿ ಅಭಿಪ್ರಾಯಗಳಿಗೆ ಆದ್ಯತೆ ನೀಡಬೇಕು. ಹಿಂದೂ ಧರ್ಮದ ಬೆಳವಣಿಗೆಯಲ್ಲಿ ತಿ.ತಿ.ದೇ., ಮಹತ್ವದ ಪಾತ್ರವಹಿಸಿದೆ. ಹಿಂದೂ ಧರ್ಮದ ಸಮಸ್ಯೆ ಎದುರಾದಾಗ ಸನ್ಯಾಸಿಗಳೂ ಶಸ್ತ್ರ ಹಿಡಿಯುತ್ತಾರೆ. ಆದರೆ ಅಂತಹ ಪರಿಸ್ಥಿತಿ ಬರುವುದಿಲ್ಲ. ಮೂರ್ತಿ ಪೂಜೆಯ, ಧ್ಯಾನದ ಮೂಲಕ ಧರ್ಮ ಪ್ರಚಾರ ಮಾಡಬೇಕು.

**ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು, ಪುತ್ತಿಗೆ ಮಠಂ ಉಡುಪಿ**

ತಿರುಮಲೆ ತಿರುಪತಿ ದೇವಸ್ಥಾನದ ಅಧ್ಯಕ್ಷರು ಉತ್ತಮ ಕೆಲಸ ಮಾಡಿದ್ದಾರೆ. ವೈದಿಕ ಸಂಸ್ಕೃತಿಯ ಮೌಲ್ಯವನ್ನು ಕಂಡು ತುಂಬಾ ಸಂತೋಷವಾಯಿತು. ಇತಿಹಾಸ,ಪುರಾಣಗಳು ಯುವಕರನ್ನು ಸರಿಯಾದ ಮಾರ್ಗದಲ್ಲಿ ಹೋಗಲು ಸಹಾಯ ಮಾಡುತ್ತದೆ. ಮಹಾಭಾರತ, ರಾಮಾಯಣದಂತಹ ಅನೇಕ ಪುಸ್ತಕಗಳು ಯುವಕರಿಗೆ ಅಗತ್ಯವಿದೆ. ಮಹಾಕಾವ್ಯಗಳ ಕುರಿತ ಪುಸ್ತಕವನ್ನು ಮಕ್ಕಳಿಗೆ ಪರಿಚಯಿಸಬೇಕು.



**ಶ್ರೀಯದುಗಿರಿ ಯತಿರಾಜ ಸ್ವಾಮೀಜಿ,ಶ್ರೀಯದುಗಿರಿಯತಿರಾಜ ಮಠ, ಮೇಲುಕೋಟೆ**

ಸಪ್ತಗಿರಿವಾಸನಾದ ಶ್ರೀನಿವಾಸನ ಸಮ್ಮುಖದಲ್ಲಿ ನಡೆಯುತ್ತಿರುವ ಸನಾತನ ಕಾರ್ಯಕ್ರಮದಲ್ಲಿ ನಾವು ಇಲ್ಲಿಂದ ಭಾಗವಹಿಸುತ್ತಿದ್ದೇವೆ. ಇದು ಒಂದು ಅಪರೂಪವಾದ ಕಾರ್ಯಕ್ರಮ. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರಿಗೂ ಧನ್ಯವಾದಗಳು. ತಿರುಮಲೆ ತಿರುಪತಿ ದೇವಸ್ಥಾನವು ಅನೇಕ ಉತ್ತಮ ಕಾರ್ಯಕ್ರಮಗಳನ್ನು ಮಾಡುತ್ತಿದೆ. ಇಡೀ ಜಗತ್ತು ಸಂತೋಷವಾಗಿರಲಿ ಎಂದು ನಾವು ಭಾವಿಸುತ್ತೇವೆ.



**ಶ್ರೀ ಈಶಪ್ರಿಯ ತೀರ್ಥ ಶ್ರೀಪಾದರು, ಅದಮಾರು ಮಠ, ಉಡುಪಿ**

ಭಾರತ ದೇಶದಲ್ಲಿ ಉಪನಿಷತ್ತುಗಳಿಗೆ ಸಂಬಂಧಿಸಿದ ಗ್ರಂಥಗಳನ್ನು ಹೆಚ್ಚಿಸಬೇಕು. ಅಲ್ಲದೆ ಶಿಕ್ಷಣದ ಬಗ್ಗೆ,ಶಿಕ್ಷಣದ ಮಹತ್ವವನ್ನು ಪ್ರತಿಯೊಬ್ಬರು ತಿಳಿದುಕೊಳ್ಳಬೇಕು. ಜ್ಞಾನ ಹೆಚ್ಚಿಸಿಕೊಳ್ಳಬೇಕು. ಪ್ರತಿ ಗ್ರಾಮದಲ್ಲಿರುವ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಲು ತಿರುಮಲೆ ತಿರುಪತಿ ದೇವಸ್ಥಾನದಂತಹ ದೊಡ್ಡ ಸಂಸ್ಥೆ ಅಲ್ಲಿನ ದೇವಸ್ಥಾನಗಳನ್ನು ಅಭಿವೃದ್ಧಿಪಡಿಸಬೇಕು.ಆ ಗ್ರಾಮದ ಜನರನ್ನೆಲ್ಲ ಒಟ್ಟುಗೂಡಿಸಿ ಸಂಪ್ರದಾಯಗಳ ಬಗ್ಗೆ ಮನೆ ಮನೆಗೆ ತಿಳಿಸಬೇಕು. ಶ್ರೀ ಕೃಷ್ಣನ ಬಗ್ಗೆ ಎಲ್ಲರಿಗೂ ತಿಳಿದಿರಬೇಕು. ಕೃಷ್ಣನಲ್ಲಿ ಪ್ರೀತಿ ಮತ್ತು ವಾತ್ಸಲ್ಯವನ್ನು ಬೆಳಸಿಕೊಳ್ಳಬೇಕು. ವೇದ ಬಲ್ಲವರನ್ನು ಪ್ರೋತ್ಸಾಹಿಸಬೇಕು.ಹಾಗೆಯೇ ಗೋವಿನ ರಕ್ಷಣೆ ಮಾಡಬೇಕು.




**ಮಧುರಕವಿ ವಾನಮಾಮಲೈ ಜೀಯರ್ ಸ್ವಾಮಿ,ನಾನ್‌ಗುನೇರಿ ತಮಿಳುನಾಡು**



ಸನಾತನ ಧರ್ಮ ಎಲ್ಲರಿಗೂ ಮಾರ್ಗ ದರ್ಶಕವಾಗಿದೆ. ಯಾರೂ ಅದನ್ನು ರಚಿಸಲಿಲ್ಲ. ಹಾಗೆಯೇ ಪುನರ್ಜನ್ಮವಿಲ್ಲ ಎಂದು ಹೇಳುವುದು ನಮ್ಮ ಮಾರ್ಗವಾಗಿದೆ.

**ಶ್ರೀಮತ್ ಆಂಡವನ್ ಆಶ್ರಮ ಶ್ರೀ ವರಾಹ ಮಹಾದೇಶಿಕ ಸ್ವಾಮಿ, ಶ್ರೀರಂಗಂ, ತಮಿಳ್‌ನಾಡು**

ಗೀತಾಚಾರ್ಯರು ನಮಗೆ ಗೀತೆಯಲ್ಲಿ ಬದುಕಲು ಉತ್ತಮ ಮಾರ್ಗಗಳನ್ನು ನೀಡುತ್ತಾರೆ. ಹಾಗಾಗಿ ಗೀತೆಯನ್ನು ಹಳ್ಳಿ ಹಳ್ಳಿಗೆ ಕೊಂಡೊಯ್ಯಬೇಕು. ಹೀಗೆ ಮಾಡುವುದರಿಂದ ನಮಗೂ ದೇಶಕ್ಕೂ ಅನುಕೂಲವಾಗುತ್ತದೆ. ಈ ಸಮ್ಮೇಳನವನ್ನು ಆಯೋಜಿಸಿದ ತಿ.ತಿ.ದೇ., ಗೆ ಅಭಿನಂದನೆಗಳು. ಪ್ರಜಾ ಸೇವೆಯೇ ಮಾಧವ ಸೇವೆ. ಆದುದರಿಂದ ಜನತೆಗೆ ಒಳ್ಳೆಯ ಕಾರ್ಯಗಳನ್ನು ಮಾಡಿ ವೆಂಕಟೇಶ್ವರನ ಕೃಪೆಗೆ ಪಾತ್ರರಾಗೋಣ.



**ಶ್ರೀವಿಶ್ವಪ್ರಸನ್ನ ತೀರ್ಥ ಶ್ರೀಪಾದರು, ಪೇಜಾವರ ಮಠ**

ತಿ.ತಿ.ದೇ., ದಾಸಸಾಹಿತ್ಯ ಪ್ರಾಜೆಕ್ಟ್ ಮೂಲಕ ಭಕ್ತಿ ಕಾರ್ಯಕ್ರಮಗಳನ್ನು ಅತ್ಯಂತ ಉತ್ತಮವಾಗಿ ಮತ್ತು ತೃಪ್ತಿಕರವಾಗಿ ನಡೆಸಲಾಗುತ್ತಿದೆ. ಭಕ್ತಿ ಕಾರ್ಯಕ್ರಮಗಳನ್ನು ಪ್ರತಿಯೊಬ್ಬರಿಗೂ ವಿಸ್ತರಿಸಬೇಕು. ಎಲ್ಲಾ ಪುರುಷರು



ಮತ್ತು ಮಹಿಳೆಯರು ದೈವಿಕ ಕಾರ್ಯಗಳಲ್ಲಿ ಭಾಗವಹಿಸಬೇಕು. ಯುವಕರಿಗೆ ಧಾರ್ಮಿಕ ಸಂಸ್ಕಾರವನ್ನು ಕಲಿಸಬೇಕು. ದೇವರ ಸ್ಮರಣೆ ಮಾಡ ಬೇಕು. ಅದಕ್ಕೆ ತಕ್ಕಂತೆ ಮಕ್ಕಳಿಗೆ ಹೆಸರಿಡುವುದು ಸರಿಯಾದ ಮಾರ್ಗ ಎಂದು ಸಲಹೆ ನೀಡಿದರು.

**ಶ್ರೀಎಂಬೆರುಮಾನಾರ್ ಜೀಯರ್ ಸ್ವಾಮಿ, ಆಳ್ವಾರ್ ತಿರುನಗರಿ ತಮಿಳುನಾಡು**

ನಾವೆಲ್ಲರೂ ನಮ್ಮ ಸಂಸ್ಕೃತಿಯನ್ನು ಗೌರವಿಸಬೇಕು ಮತ್ತು ಅನುಸರಿಸಬೇಕು. ನಮ್ಮ ಸನಾತನ ಧರ್ಮಕ್ಕೆ



ಸಂಬಂಧಿಸಿದ ಪುರಾಣ, ಮಹಾಭಾರತ,ರಾಮಾಯಣ ಮುಂತಾದ ಮೂಲಭೂತ ವಿಷಯಗಳನ್ನು ಮುಂಬರುವ ಪೀಳಿಗೆಗೂ ತಿಳಿಸಬೇಕು. ನಮ್ಮ ಸಂಸ್ಕೃತಿಯನ್ನು ಪ್ರತಿ ಹಳ್ಳಿಗೆ ಕೊಂಡೊಯ್ದು ಅಲ್ಲಿನ ಜನರಿಗೆ ಒಳ್ಳೆಯ ದಾರಿಯಲ್ಲಿ ನಡೆಯಲು ತರಬೇತಿ ನೀಡಬೇಕು.

**ಶ್ರೀ ವೇದವರ್ಧನ ತೀರ್ಥ ಶ್ರೀಪಾದರು, ಶೀರುರೂ ಮಠ,ಉಡುಪಿ**

ಪ್ರತಿ ಗ್ರಾಮಗಳಲ್ಲಿ ವಾರಕ್ಕೊಮ್ಮೆ ಭವಿಷ್ಯವಾಣಿ ಮತ್ತು



ಪ್ರಾರ್ಥನೆಗಳನ್ನು ಮಾಡಿ ಚಿಕ್ಕ ಮಕ್ಕಳಿಗೆ ದೇವರ ಬಗ್ಗೆ ಅರಿವು ಮೂಡಿಸ ಬೇಕು. ಈಗಿನ ಯುವಕರು ಸನ್ಮಾರ್ಗದಲ್ಲಿ ನಡೆಯಲು ಶ್ರಮಿಸಬೇಕು ಎಂದು ಕರೆ ನೀಡಿದರು. ಅಲ್ಲದೆ ತಿರುಮಲೆ ತಿರುಪತಿ ದೇವಸ್ಥಾನದಿಂದ ಮಾಡುತ್ತಿರುವ ಕಾರ್ಯಕ್ರಮಗಳಿಂದ ನಮಗೆ ತುಂಬಾ ಸಂತೋಷವಾಗಿದೆ.

**ಶ್ರೀ ಪರವಕೊಟ್ಟೈ ಚಿನ್ನ ಆಂಡವನ್ ಶ್ರೀ ಶ್ರೀನಿವಾಸ ಗೋಪಾಲ ಮಹಾದೇಶಿಕನ್ ಸ್ವಾಮಿ,ಪಂಡರೀಕಪುರಂ ಆಶ್ರಮ,ಶ್ರೀರಂಗಂ**



ತಿರುಮಲೆ ತಿರುಪತಿ ದೇವಸ್ಥಾನವು ಈಗಾಗಲೇ ಭಕ್ತರಿಗೆ ಅತ್ಯುತ್ತಮ ಸೇವೆಗಳನ್ನು ನೀಡುತ್ತಿವೆ. ಸಪ್ತಗಿರಿ ಪತ್ರಿಕೆಯ ಮೂಲಕ ಹೆಚ್ಚಿನ ವಿವರಗಳು ತಿಳಿಯುತ್ತಿವೆ. ಶ್ರೀನಿವಾಸ ಕಲ್ಯಾಣದ ಮೂಲಕ ಎಲ್ಲರಿಗೂ ಭಕ್ತಿ ಮೂಡಿಸುತ್ತಿದೆ.ಧರ್ಮ ಪ್ರಸಾರದಲ್ಲಿ ತಿರುಮಲೆ ತಿರುಪತಿ ದೇವಸ್ಥಾನಕ್ಕೆ ಪರ್ಯಾಯವಿಲ್ಲ ಎಂದು ಹೇಳಬಹುದು. ಈ ಸೇವೆ ಇನ್ನಷ್ಟು ಯಶಸ್ವಿಯಾಗಬೇಕು.

**ಶ್ರೀ ವಿದ್ಯೇಂದ್ರತೀರ್ಥ ಶ್ರೀಪಾದರು, ಚಿತ್ರಾಪೂರ ಮಠ, ಉಡುಪಿ**



ನಾವು ಧರ್ಮವನ್ನು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ. ಹಿಂದೂ ಸನಾತನ ಧರ್ಮವನ್ನು ಎಲ್ಲೆಡೆ ಪ್ರಚಾರ ಮಾಡಬೇಕು. ಸಮಾಜ ಸೇವೆ ಮಾಡುವುದರಿಂದ ಪುಣ್ಯಸಿಗುತ್ತದೆ. ಇಂತಹ ಧಾರ್ಮಿಕ ಸಮ್ಮೇಳನ ಕಾರ್ಯ ಕ್ರಮವನ್ನು ನಡೆಸಿಕೊಟ್ಟ ತಿರುಮಲೆ ತಿರುಪತಿ ದೇವ ಸ್ಥಾನದ ಜನತೆಗೆ ಹಾಗೂ ಆಡಳಿತ ಮಂಡಳಿಯ ಅಧ್ಯಕ್ಷರಿಗೆ ಹಾಗೂ ಕಾರ್ಯನಿರ್ವಹಣಾಧಿಕಾರಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ.

**ಶ್ರೀಸದಾಶಿವಆಶ್ರಮಸ್ವಾಮಿ,ಶೃಂಗೇರಿ ಬ್ರಹ್ಮಾನಂದ ಮಠ , ವಾರಣಾಸಿ**



ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ ಹಾಗೂ ಸಂಸ್ಕೃತ ಸುಭಾಷಿತಗಳನ್ನು ವಿಶೇಷವಾಗಿ ಕಲಿಸಬೇಕು. ತಿ.ತಿ.ದೇ., ಧಾರ್ಮಿಕ ಸೇವಾ ಕಾರ್ಯಕ್ರಮಗಳನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ವಿಸ್ತರಿಸುವ ಅಗತ್ಯವಿದೆ ಎಂದರು.

**ಶ್ರೀ ಸುವಿದ್ಯೇಂದ್ರತೀರ್ಥ ಶ್ರೀಪಾದರು, ಬೆಂಗಳೂರು**



ವೇದಗಳನ್ನು ಸಂರಕ್ಷಿಸುವ ಅಗತ್ಯವಿದೆ. ವೇದಗಳ ಸಂರಕ್ಷಣೆಯೇ ಧರ್ಮದ ಸಂರಕ್ಷಣೆ ಎನ್ನುತ್ತಾರೆ. ಗೋಸಂರಕ್ಷಣೆ ಪ್ರತಿ ಗ್ರಾಮಗಳಲ್ಲಿ ದೇವಾಲಯ ನಿರ್ಮಿಸುವ ಅಗತ್ಯವಿದೆ ಎಂದು ತಿಳಿಸಲಾಗಿದೆ.ಸಂಸ್ಕೃತ ಭಾಷೆಯ ಬೆಳವಣಿಗೆಗೆ ಶ್ರಮಿಸಬೇಕು ಎಂದರು.

ಉದೇತಿ ಸವಿತಾ ತಾಮ್ರಃ
ತಾಮ್ರ ಏವಾಸ್ತಮೇತಿ ಚ ।
ಸಂಪತ್ತೌ ಚ ವಿಪತ್ತೌ ಚ
ಮಹ ತಾಮೇಕ ರೂಪತಾ॥

(ಕಾವ್ಯ ಪ್ರಕಾಶ, ಪಂಚತಂತ್ರಮ್)

ಸೂರ್ಯನು ಕೆಂಪಾಗಿ ಹುಟ್ಟುತ್ತಾನೆ. ಕೆಂಪಾಗಿಯೇ ಅಸ್ತಂಗತನಾಗುತ್ತಾನೆ. ಸಂಪತ್ತಿರಲಿ, ವಿಪತ್ತು ಬರಲಿ, ಸುಖವಿರಲಿ, ಕಷ್ಟ ಬರಲಿ ಮಹಾತ್ಮರ ಸ್ವರೂಪ ಒಂದೇ ವಿಧ.








# ಶ್ರೀ ವೆಂಕಟೇಶ್ವರ ಧಾರ್ಮಿಕ ಸಮ್ಮೇಳನದ ತೀರ್ಮಾನಗಳು

ತಿರುಮಲೆ ಆಸ್ಥಾನ ಮಂಟಪದಲ್ಲಿ ಮೂರು ದಿನಗಳ ಕಾಲ ನಡೆದ ಶ್ರೀವೆಂಕಟೇಶ್ವರ ಧಾರ್ಮಿಕ ಸದಸ್ಸು ಸೋಮವಾರ ಮುಕ್ತಾಯವಾಯಿತು. ಕೊನೆಯ ದಿನ ಈ ಸಮಾವೇಶದಲ್ಲಿ ಪೀಠಾಧಿಪತಿಗಳು ಹಾಗೂ ಮಠಾಧೀಶರ ಸೂಚನೆ ಮೇರೆಗೆ ಕೈಗೊಂಡ ನಿರ್ಣಯಗಳ ಕುರಿತು ತಿ.ತಿ.ದೇ.,ಆಡಳಿತ ಮಂಡಳಿ ಅಧ್ಯಕ್ಷರು ಶ್ರೀ ಭೂಮನ ಕರುಣಾಕರರೆಡ್ಡಿಯವರು ಮಾಧ್ಯಮಗಳಿಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅಧ್ಯಕ್ಷರು ಶ್ರೀ ವೆಂಕಟೇಶ್ವರ ಸ್ವಾಮಿಯವರ ದಿವ್ಯ ವೈಭವವನ್ನು ಪ್ರಪಂಚದಾದ್ಯಂತ ಪ್ರಚಾರ ಮಾಡಲು ತಿರುಮಲೆ ತಿರುಪತಿ ದೇವಸ್ಥಾನಗಳು 1933 ರಲ್ಲಿ ಅಸ್ತಿತ್ವಕ್ಕೆ ಬಂದವು. ದಾಸಸಾಹಿತ್ಯ ಯೋಜನೆ, ಮಾತೃಶ್ರೀ ತರಿಗೊಂಡ ವೆಂಗಮಾಂಬ ವಾಙ್ಮಯ ಯೋಜನೆ, ಅನ್ನಮಾಚಾರ್ಯ ಯೋಜನೆ, ಆಳ್ವಾರ್ ದಿವ್ಯ ಪ್ರಬಂಧ ಯೋಜನೆ, ನಾಲಾಯಿರ ದಿವ್ಯಪ್ರಬಂಧ ಪಾರಾಯಣ ಯೋಜನ, ಶ್ರೀನಿವಾಸ ಕಲ್ಯಾಣೋತ್ಸವ ಹಾಗೂ ಶ್ರೀವೆಂಕಟೇಶ್ವರ ವೈಭವೋತ್ಸವ ಯೋಜನೆ ಹೀಗೆ ದೇಶಾದ್ಯಂತ ಧಾರ್ಮಿಕ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ ಎಂದರು. ದಶಕಗಳ ಹಿಂದೆ ತಿ.ತಿ.ದೇ., ಶ್ರೀವೆಂಕಟೇಶ್ವರ ಗೋಸಂರಕ್ಷಣೆ ಶಾಲೆ ಮೂಲಕ ಗೋಸಂರಕ್ಷಣೆ ಆರಂಭಿಸಿತ್ತು.

ಶ್ರೀ ವೆಂಕಟೇಶ್ವರ ಸ್ವಾಮಿಯ ಮಹಿಮೆಯನ್ನು ದಾಸದಾಸಿಯರಂತೆ ಪಸರಿಸುವ ಸಲುವಾಗಿ ಶ್ರೀ ವೆಂಕಟೇಶ್ವರ ಭಕ್ತಿ ಚಾನಲ್ ಅನ್ನು ತೆಲುಗು,ತಮಿಳು, ಕನ್ನಡ ಮತ್ತು ಹಿಂದಿ ಭಾಷೆಗಳಲ್ಲಿ ಏರ್ಪಡಿಸಿ ಸ್ವಾಮಿಯವರ ವೈಭವವನ್ನು ವಿಶ್ವದೆಲ್ಲೆಡೆ ಪ್ರಚಾರ ಮಾಡಲಾಗುತ್ತಿದೆ ಎಂದು ವಿವರಿಸಿದರು.

ಪುರಾಣೇತಿಹಾಸ ಯೋಜನೆಯ ಮೂಲಕ ಅನೇಕ ಪುರಾಣ, ಆಧ್ಯಾತ್ಮಿಕ ಗ್ರಂಥಗಳನ್ನು ಮುದ್ರಿಸಲಾಗುತ್ತಿದ್ದು ಶ್ರೀವೆಂಕಟೇಶ್ವರ ಧ್ವನಿ ಮುದ್ರಣ ಯೋಜನೆಯು ಭಕ್ತಿ ಸಂಕೀರ್ತನೆಗಳನ್ನು ಜನಪ್ರಿಯಗೊಳಿಸುತ್ತಿದೆ. ಈ ಹಿಂದೆ ಅಧ್ಯಕ್ಷರಾಗಿದ್ದಾಗ 2007 ಮತ್ತು 2008 ರಲ್ಲಿ ಎರಡು ಭಾರಿ ಧಾರ್ಮಿಕ ಸಮ್ಮೇಳನಗಳನ್ನು ಆಯೋಜಿಸಿದ್ದರು. ಆ ಸಭೆಗಳಲ್ಲಿ ಸ್ವಾಮೀಜಿಯವರು ನೀಡಿದ ಸೂಚನೆ ಮೇರೆಗೆ ದಳಿತ ಗೋವಿಂದಂ, ಮತ್ಸ್ಯಗೋವಿಂದಂ, ಅರ್ಚಕರ ತರಬೇತಿ, ಕಲ್ಯಾಣಮಸ್ತು ಮುಂತಾದ ಅನೇಕ ದತ್ತಿ ಕಾರ್ಯಕ್ರಮಗಳನ್ನು ಆರಂಭಿಸಲಾಗಿದೆ ಎಂದು ತಿಳಿಸಲಾಯಿತು. ಸ್ವಾಮಿಯವರ ಕೃಪೆಯಿಂದ 17 ವರ್ಷಗಳ ನಂತರ ಮತ್ತೆ ಧರ್ಮಪ್ರಚಾರವನ್ನು ಮುನ್ನಡೆಸುವ ಅವಕಾಶ ಸಿಕ್ಕಿದೆ ಎಂದರು. ಪ್ರಪಂಚದಾದ್ಯಂತ ಹಿಂದೂ ಧರ್ಮವನ್ನು ಪ್ರಚಾರ ಮಾಡುವುದು ಮೂರು ದಿನಗಳ ಧಾರ್ಮಿಕ ಸಮ್ಮೇಳನದಲ್ಲಿ ಹಲವು ಗಣ್ಯರು, ಮಠಾಧೀಶರು ಅವರ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿದ್ದಾರೆ ಎಂದು ತಿಳಿಸಿದರು.

### ಶ್ರೀ ವೆಂಕಟೇಶ್ವರ ಧಾರ್ಮಿಕ ಸಮ್ಮೇಳನದ ನಿರ್ಣಯಗಳು

#### 1. ಹಿಂದೂ ಧರ್ಮಕ್ಕೆ ಸೇರಲು ಬಯಸುವವರಿಗೆ ಪವಿತ್ರ ಜಲ ದೀಕ್ಷಾ ಪ್ರಕ್ರಿಯೆ

ಈ ಸಮ್ಮೇಳನಕ್ಕೆ ಬಂದಿದ್ದ ಹಲವು ಸ್ವಾಮೀಜಿಗಳ ಒಮ್ಮತದ ಅಭಿಪ್ರಾಯದ ಮೇರೆಗೆ, ಸ್ವಯಂಪ್ರೇರಣೆಯಿಂದ ಹಿಂದೂ ಧರ್ಮಕ್ಕೆ ಮತಾಂತರಗೊಳ್ಳಲು ಸಿದ್ಧವಿರುವ ಅನ್ಯ ಧರ್ಮದಿಂದ ಬರುವವರಿಗೆ ತಿರುಮಲೆಯಲ್ಲಿ ಪ್ರಾಂಗಣ ಸ್ಥಾಪಿಸಲು ಸಮ್ಮೇಳನ ನಿರ್ಧರಿಸಿದೆ ಮತ್ತು ಪವಿತ್ರ ಜಲದ ಸಂಪ್ರೋ

ಕ್ಷಣೆಯ ಪ್ರಕ್ರಿಯೆಯನ್ನು ನಡೆಸಿ ಅವರನ್ನು ಸ್ವಾಗತಿಸಿ ಮತ್ತು ಸ್ವಾಮಿಯವರ ದರ್ಶನವನ್ನು ನೀಡಲಾಗುತ್ತದೆ.

### 2. ಪುರಾಣ ಪ್ರಚಾರ

ಮಕ್ಕಳಿಂದ ಹಿಡಿದು ಎಲ್ಲಾ ಸಮಾಜದ ಪ್ರತಿಯೊಬ್ಬರೂ ಹಿಂದೂ ಧರ್ಮವನ್ನು ಸುಲಭವಾಗಿ ಅರ್ಥೈಸಿಕೊಳ್ಳುವ ಸಾಧನವೇ ಪುರಾಣಗಳಾಗಿದ್ದು, ಪುರಾಣಗಳ ವ್ಯಾಪಕ ಪ್ರಸಾರಕ್ಕೆ ಇಂತಹ ಸಮರ್ಥ ಪುರಾಣ ಪ್ರವಚನಕಾರರಿಗೆ ಶಿಕ್ಷಣ ನೀಡುವುದು ಅಗತ್ಯ ಎಂದು ಸಮ್ಮೇಳನವು ತೀರ್ಮಾನಿಸಿತು.

### 3. ತಿರುಪತಿಯಲ್ಲಿ ಪವಿತ್ರ ವಾತಾವರಣ

ತಿರುಮಲೆಯನ್ನು ತಲುಪಲು ಎಲ್ಲಾ ಯಾತ್ರಾರ್ಥಿಗಳು ತಿರುಪತಿಗೆ ಬರಬೇಕು ಆದ್ದರಿಂದ ಯಾತ್ರಿಕರು ತಿರುಮಲೆಯಲ್ಲಿರುವಂತೆಯೇ ತಿರುಪತಿಯಲ್ಲಿ ಪರಿಪೂರ್ಣ ಆಧ್ಯಾತ್ಮಿಕ ವಾತಾವರಣವನ್ನು ನಿರ್ಮಿಸಬೇಕು ತಿರುಪತಿಗೆ ತಕ್ಕಂತೆ ಬದಲಾಗಬೇಕು.

### 4. ಏಕತೆಯ ಭಾವನೆಯನ್ನು ಬೆಳೆಸುವುದು, ಧಾರ್ಮಿಕ ವಿರೋಧಿ ಕ್ರಮಗಳು

ಆ ದಿನಗಳಲ್ಲಿ ಹಿಂದೂ ಸಮಾಜವು ದುರ್ಬಲಗೊಳ್ಳಲು ಮುಖ್ಯ ಕಾರಣವೆಂದರೆ ಕೆಲವು ವರ್ಣಗಳು ಮತ್ತು ಜಾತಿಗಳ ಬಗ್ಗೆ ಕೆಲವರ ವಿಷಕಾರಿ ವರ್ತನೆ ಹಾಗಾಗಿ ಹಿಂದೂ ಸಮಾಜದಿಂದ ಜಾತಿಗಳು ದೂರವಾಗುತ್ತಿವೆ. ಸನಾತನ ಧರ್ಮವು ಅವರೆಲ್ಲರಿಗೂ ಸೇರಿದ್ದು. ಅದನ್ನು ಹೇಳಲು ಎಲ್ಲ ರೀತಿಯಲ್ಲೂ ಪ್ರಯತ್ನಿಸಬೇಕು. ಅವರ ಮತಾಂತರವನ್ನು ತಡೆಯಲು ಸೂಕ್ತ ಕ್ರಮಗಳನ್ನು ಸಿದ್ಧಪಡಿಸಲು ಸಮ್ಮೇಳನವು ನಿರ್ಧರಿಸಿದೆ.

### 5. ದೇವಾಲಯಗಳ ಸಂರಕ್ಷಣೆ ಮತ್ತು ನಿರ್ಮಾಣ

ಭಾರತೀಯ ಸಮಾಜದಲ್ಲಿ ದೇವಸ್ಥಾನಗಳು ಎಲ್ಲರಿಗೂ ಒಳ್ಳೆಯ ಸಂಸ್ಕೃತಿಯನ್ನು ಕಲಿಸುತ್ತವೆ ಮತ್ತು ಅಂತಹ ದೇವಾಲಯಗಳು ಶಿಥಿಲಗೊಳ್ಳುತ್ತಿವೆ. ಕೆಲವು ಪ್ರದೇಶಗಳು ಸಂಪೂರ್ಣವಾಗಿ ಕಣ್ಮರೆಯಾಗುತ್ತಿವೆ. ಆದ್ದರಿಂದ ಶಿಥಿಲಗೊಂಡಿರುವ ದೇವಾಲಯಗಳ ಜೀರ್ಣೋದ್ಧಾರ, ದೇವಾಲಯಗಳನ್ನು ನಿರ್ಮಿಸಿ ಹರಿಜನ, ಬುಡಕಟ್ಟು, ಮೀನುಗಾರಿಕಾ ಪ್ರದೇಶಗಳಲ್ಲಿ ಎಲ್ಲರಿಗೂ ಸಂಸ್ಕಾರ ನೀಡುವುದು ಅತೀ ಅವಶ್ಯ ಎಂದು ಸಮ್ಮೇಳನವು ತೀರ್ಮಾನಿಸಿದೆ. ಶ್ರೀವಾಣಿ ಟ್ರಸ್ಟ್ ಮೂಲಕ ಹರಿಜನ, ಬುಡಕಟ್ಟು ಮತ್ತು ಮೀನುಗಾರಿಕಾ ಪ್ರದೇಶಗಳಲ್ಲಿ 3600 ದೇವಾಲಯಗಳ ನಿರ್ಮಾಣವನ್ನು ತಿ.ತಿ.ದೇ., ಕೈಗೆತ್ತಿಕೊಂಡಿದೆ.

### 6. ಗೋ ಸಂರಕ್ಷಣೆ

ಹಿಂದೂ ಸಮಾಜಕ್ಕೆ ಗೋವಿಂದನ ಮೇಲೆ ಇರುವಷ್ಟು ಭಕ್ತಿ ಗೋವಿನ ಮೇಲೆ ಇದೆ. ಹಿಂದೂಗಳಿಗೆ ಗೋವು ತಾಯಿ ಸಮಾನ ಆದರೆ ಇಂದಿನ ಸಮಾಜದಲ್ಲಿ ಆಧುನಿಕ ಪದ್ಧತಿಗಳ ಪ್ರಭಾವದಿಂದ ಗೋವುಗಳ ಸಂತತಿ ಕ್ಷೀಣಿಸುತ್ತಿವೆ. ಆದ್ದರಿಂದ ಗೋಸಂರಕ್ಷಣೆ ಅತ್ಯಗತ್ಯ ಎಂದು ಸಮ್ಮೇಳನವು ನಿರ್ಧರಿಸಿದೆ.

### 7. ವೈದಿಕ ಶಾಸ್ತ್ರ ಮತ್ತು ವಿದ್ಯಾ ವ್ಯಾಪ್ತಿಯ ಸಂರಕ್ಷಣೆ

ವೇದಗಳು ಮತ್ತು ಶಾಸ್ತ್ರಗಳು ಹಿಂದೂ ಧರ್ಮದ ಮೂಲವಾಗಿದೆ. ಯಾವುದೇ ಯಜ್ಞವನ್ನು ಮಾಡಲು ಮತ್ತು ಯಾವುದೇ ಒಳ್ಳೆಯ ಕಾರ್ಯಕ್ರಮಗಳನ್ನು ಮಾಡಲು ವೈದಿಕ ಶಾಸ್ತ್ರಗಳು ಬಹಳ ಅವಶ್ಯಕ.ಆದ್ದರಿಂದ ವೈದಿಕ ಸಾಹಿತ್ಯದ ಸಂರಕ್ಷಣೆ ಅತೀ ಅಗತ್ಯ ಎಂದು ಸಮ್ಮೇಳನವು ತೀರ್ಮಾನಿಸಿದೆ.

### 8. ಸಾರ್ವಜನಿಕವಾಗಿ ಧರ್ಮ, ಪದ್ಧತಿ ಮತ್ತು ಸಂಪ್ರದಾಯಗಳ ಪ್ರಚಾರ ಮತ್ತು ಸಂರಕ್ಷಣೆ

ಹಿಂದೂ ಧರ್ಮ, ಅಡಿಪಾಯ ಮತ್ತು ಸಂಪ್ರದಾಯಗಳ ಬಗ್ಗೆ ಆಸಕ್ತಿ, ಗೌರವ ಮತ್ತು ಗಮನವನ್ನು ಕಳೆದುಕೊಳ್ಳಲು ಸರಿಯಾದ ಧರ್ಮ ಪ್ರಚಾರದ ಕೊರತೆಯೇ ಕಾರಣ. ಆದುದರಿಂದಲೇ ಎಲ್ಲರಿಗೂ ಎಲ್ಲ ರೀತಿಯಿಂದಲೂ ಅರ್ಥವಾಗುವ ರೀತಿಯಲ್ಲಿ ಧರ್ಮಪ್ರಚಾರ ಮಾಡುವುದು ಅತ್ಯಗತ್ಯ.

### 9. ಮಾತೃ ಮೂರ್ತಿಗಳ ಧರ್ಮನಿಷ್ಠೆ

ಯಾವುದೇ ಸಮಾಜದಲ್ಲಿ ತಾಯಿ ತನ್ನ ಮಕ್ಕಳನ್ನು ಶ್ರದ್ಧೆಯಿಂದ ಬೆಳೆಸಿದರೆ ಸಮಾಜ ಸನ್ಮಾರ್ಗವಾಗುತ್ತದೆ. ಆದ್ದರಿಂದ ಹಿಂದೂ ಸಮಾಜದ ಪ್ರತಿಯೊಬ್ಬ ತಾಯಂದಿರು ತಮ್ಮ ಮಕ್ಕಳಿಗೆ ಬಾಲ್ಯದಿಂದಲೇ ಧರ್ಮನಿಷ್ಠೆ ಚಟುವಟಿಕೆಗಳನ್ನು ಮೈಗೂಡಿಸಿಕೊಂಡು ಧರ್ಮ ಬೋಧನೆ ಮಾಡಬೇಕು ಎಂದು ಸಮ್ಮೇಳನವು ತೀರ್ಮಾನಿಸಿತು.

### 10. ಯುವಕರಲ್ಲಿ ಸದಾಚಾರ ಮತ್ತು ಧರ್ಮಪ್ರೀತಿ

ಇಂದಿನ ಸಮುದಾಯದ ಅನೇಕ ಹಿಂದೂ ಯುವಕರು ತಮ್ಮ ಸುತ್ತಲಿನ ಪರಿಸರದ ಪ್ರಭಾವದಿಂದ ಮತ್ತು ಧನ ಕನಕಾದಿ ಪ್ರಲೋಭನೆಯಿಂದ ಧಾರ್ಮಿಕ ಮತಾಂತರಕ್ಕೆ ಒಳಗಾಗುತ್ತಿದ್ದಾರೆ. ಈ ಪರಿಸ್ಥಿತಿಯನ್ನು ಸರಿಪಡಿಸಲು ಅನೇಕ ತರಬೇತಿ ಶಿಬಿರಗಳು ಮತ್ತು ಇತರ ಉಪಕ್ರಮಗಳು ಅಗತ್ಯವೆಂದು ಸಮ್ಮೇಳನವು ನಿರ್ಧರಿಸಿತು.

**11. ಜೀವವೈವಿಧ್ಯ ಪರಿರಕ್ಷಣೆ**

ಸ್ವಾಭಾವಿಕವಾಗಿ ಅನೇಕ ಅಪುರೂಪದ ಮನೆಯ ವರಿಗೆ ಅಪೇಕ್ಷಣೀಯವಾಗಿವೆ. ತಿರುಮಲೆ ತಿರುಪತಿ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳನ್ನು ತಿರುಮಲೆಯಲ್ಲಿರುವ ಸಾವಿರಾರು ತೀರ್ಥಗಳನ್ನು ಎಚ್ಚರಿಕೆಯಿಂದ ಪರಿಚಯಿಸುವ ಮೂಲಕ ವಿಶೇಷ ಜೀವವೈವಿಧ್ಯ ದಾಖಲೆಯಾಗಿ ರಕ್ಷಿಸ ಬೇಕೆಂದು ಸದಸ್ಸು ತೀರ್ಮಾನಿಸಿದೆ.

**12. ವಿವಿಧ ಸೇವೆಗಳ, ಸತ್ಸಂಗ, ಭಜನೆಮಂಡಲಿ ಮತ್ತು ಇತರ ವ್ಯವಸ್ಥೆಗಳು**

2007 ಮತ್ತು 2008ರಲ್ಲಿ ನಡೆದ ಧಾರ್ಮಿಕ ಸಮ್ಮೇಳನಗಳ ನಿರ್ಣಯಗಳನ್ನು ಅನುಸರಿಸಿ ಹರಿಜನರು, ಆದಿವಾಸಿಗಳು ಮತ್ತು ಮೀನುಗಾರರನ್ನು ಮತಾಂತರ ತಡೆಯಲು ಇದನ್ನು ಜಾರಿಗೊಳಿಸಲಾಗುತ್ತಿದೆ. ಪ್ರಸ್ತುತ ಕೆಳಮಟ್ಟದಲ್ಲಿ ನಡೆಸಲಾಗುತ್ತಿರುವ ಹಾಗೂ ನಡುವೆ ಸ್ಥಗಿತಗೊಂಡಿರುವ ಎಲ್ಲ ಪ್ರಣಾಳಿಕೆಗಳನ್ನು ಮತ್ತೆ ಬಲಪಡಿಸಲು ಸಮ್ಮೇಳನವು ನಿರ್ಧ ರಿಸಿದೆ.

**13. ಜನಶಕ್ತಿ ನಿರ್ಮಾಣ**

ನಿಯಮ, ವಿಚಾರಗಳ ಸಂಖ್ಯೆ ಇಲ್ಲದೇ ಹೋದರೆ ಸಫಲ ವಾಗುವುದಿಲ್ಲವಾದ್ದರಿಂದ ಆದಷ್ಟು ಜನರಿಗೆ ಧರ್ಮವನ್ನು ರಕ್ಷಿಸುವ ಸಾಮರ್ಥ್ಯ ಹಾಗೂ ಪ್ರತಿಯೊಬ್ಬರಲ್ಲೂ ಸೂಕ್ತ ಸಾಮರ್ಥ್ಯವನ್ನು ತರಬೇತಿಯ ಮೂಲಕ ಕಲಿಸುವುದು ಅಗತ್ಯ ಎಂದು ಸಮ್ಮೇಳನವು ತೀರ್ಮಾನಿಸಿದೆ.

**14. ಆಧ್ಯಾತ್ಮಿಕ ಕಾರ್ಯಕ್ರಮಗಳು**

ಮಹಿಳೆಯ ಆತ್ಮಸ್ಥೈರ್ಯಕ್ಕೆ ದೈಹಿಕ ಶಕ್ತಿ ಎಷ್ಟು ಬೇಕೋ ಅಷ್ಟೇ ಏರಿಳಿತಗಳನ್ನು ತಡೆದುಕೊಳ್ಳಲು ಮಾನಸಿಕ ಶಕ್ತಿಯೂ ಅಗತ್ಯ. ಆದ್ದರಿಂದ ಹಿಂದೂ ಸಮಾಜದಲ್ಲಿ ಸ್ವಾವಲಂಬನೆ ಯನ್ನು ಬೆಳೆಸಲು ವ್ಯಾಪಕವಾದ ತರಬೇತಿ ಕಾರ್ಯಕ್ರಮ ಗಳನ್ನು ಹಮ್ಮಿಕೊಳ್ಳಲು ಸಮ್ಮೇಳನವು ನಿರ್ಧರಿಸಿತು.

**15. ದ್ರಾವಿಡ ವೇದ ಅಭಿವೃದ್ಧಿಗೆ ಯೋಜನೆಗಳು**

ಋಗ್ವೇದ ಮೊದಲಾದ ವೇದಗಳಂತೆ ಮಾನವ ಕಲ್ಯಾಣ ಕ್ಕಾಗಿ 12 ಆಳ್ವಾರರು ನೀಡಿದ ದ್ರಾವಿಡವೇದಕ್ಕೂ ತಕ್ಕ ಪ್ರೋತ್ಸಾಹ ಮತ್ತು ಮನ್ನಣೆಯ ಅಗತ್ಯವಿದೆ ಎಂದು ಸಮ್ಮೇಳನವು ತೀರ್ಮಾನಿಸಿತು.

**16. ಶಾಲಾ ವಿದ್ಯಾರ್ಥಿಗಳಿಗೆ ಕಾರ್ಯಕ್ರಮಗಳು ಮತ್ತು ಉಪಾಯ ಗಳು**

ವಿವಿಧ ಶಾಲೆಗಳಲ್ಲಿ ಪ್ರಸ್ತುತ ಪಾಠ್ಯಕ್ರಮದಲ್ಲಿ ಹಿಂದೂ ಧರ್ಮದ ಮಹತ್ವವನ್ನು ಒತ್ತಿ ಹೇಳಬೇಕು ಮತ್ತು ಈ ಉದ್ದೇಶ ಕ್ಕಾಗಿ ಹೆಚ್ಚಿನ ಧರ್ಮಪ್ರಚಾರ ಯೋಜನೆಗಳ ಅಗತ್ಯವಿದೆ ಎಂದು ಸಮ್ಮೇಳನವು ತೀರ್ಮಾನಿಸಿತು.

**17.ಭಾಷಾ ಸಾಮರ್ಥ್ಯ  ಸಂಸ್ಕೃತ ಕಲಿಕೆಗೆ ಉತ್ತೇಜನ**

ಹಿಂದೂ ಧರ್ಮಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳು ಹೆಚ್ಚಾಗಿ ಸಂಸ್ಕೃತದಲ್ಲಿವೆ. ಈ ಜ್ಞಾನವನ್ನು ಅರ್ಥಮಾಡಿ ಕೊಳ್ಳಲು ಮತ್ತು ಅಭ್ಯಾಸ ಮಾಡಲು ಓದುಗರಿಗೆ (ಕನ್ನಡ, ತೆಲುಗು,ಹಿಂದಿ,ತಮಿಳು) ಎರಡೂ ಭಾಷೆಗಳನ್ನು ಕಲಿಸಬೇಕು ಎಂದು ಸಮ್ಮೇಳನವು ತೀರ್ಮಾನಿಸಿತು.


**18. ಸಾಮಾಜಿಕ ಪ್ರಚಾರ ಮಾಧ್ಯಮ**

ಇಂದಿನ ಸಮಾಜದಲ್ಲಿ ಸಾಮಾಜಿಕ ಜಾಲತಾಣಗಳು ಎಲ್ಲರನ್ನೂ ತಲುಪುವಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ಆದ್ದರಿಂದ ಸಮ್ಮೇಳನವು ಹಿಂದೂ ಧರ್ಮದ ಪ್ರಚಾರಕ್ಕಾಗಿ ಎಲ್ಲಾ ಪ್ರಚಾರ ಮತ್ತು ಪ್ರಸಾರ ಮಾಧ್ಯಮಗಳನ್ನು ಬಳಸಬೇಕು ಎಂದು ನಿರ್ಧರಿಸಿದೆ.

**19.ಇಂತಹ ಧಾರ್ಮಿಕ ಸಮ್ಮೇಳನಗಳನ್ನು ಆಯೋಜಿಸುವಲ್ಲಿ ಎಲ್ಲಾ ಧಾರ್ಮಿಕ ಸಂಸ್ಥೆಗಳನ್ನು ಸಂಯೋಜಿಸಬೇಕು ಮತ್ತು ತಿ.ತಿ.ದೇ., ಗೆ ಸಹಕರಿಸಬೇಕು**

ಹಿಂದೂ ಧರ್ಮದ ರಕ್ಷಣೆಗೆ ಈ ಸಮಾವೇಶ ಅತ್ಯಂತ ಮಹತ್ವದ್ದಾಗಿರುವುದರಿಂದ ಇಂತಹ ಸಮ್ಮೇಳನಗಳನ್ನು ತಿರು ಮಲೆ ಅಥವಾ ತಿರುಪತಿಯಲ್ಲಿ ವರ್ಷಕ್ಕೊಮ್ಮೆ ನಡೆಸಬೇಕು. ಅಲ್ಲದೆ, ಗ್ರಾಮಮಟ್ಟ ಮತ್ತು ಜಿಲ್ಲಾಮಟ್ಟದಲ್ಲಿ ಹಾಗೂ ನಿರ್ದಿಷ್ಟ ಕಾಲಮಿತಿಯೊಳಗೆ ಆಗಾಗ್ಗ ಆಯೋಜಿಸಲು ಸಮ್ಮೇಳನ ನಿರ್ಧ ರಿಸಿದೆ. ಈ ಸಮ್ಮೇಳನದಲ್ಲಿ ಕೈಗೊಂಡ ಎಲ್ಲಾ ನಿರ್ಣಯಗಳನ್ನು ತಿರುಮಲೆ ತಿರುಪತಿ ದೇವಸ್ಥಾನಗಳು ಮಾತ್ರವಲ್ಲದೆ ಎಲ್ಲಾ ಧಾರ್ಮಿಕ ಸಂಸ್ಥೆಗಳು ಹಿಂದೂ ಧರ್ಮದ ಸಂರಕ್ಷಣೆಗಾಗಿ ಜಾರಿಗೆ ತರಬೇಕೆಂದು ಸಮ್ಮೇಳನವು ನಿರ್ಧರಿಸಿತು.





# ಓಂ ನಮೋ ಭಗವತೇ ರುದ್ರಾಯ

- ಹನುಮಂತ ಮ. ದೇಶಕುಲಕರ್ಣಿ
94803 64915

ಶಿವನು ಲಿಂಗಸ್ವರೂಪದಲ್ಲಿ ಉದ್ಭವಿಸಿದ ಪವಿತ್ರ ದಿನವೇ ಮಹಾಶಿವರಾತ್ರಿ,ಶಿವ ಪುರಾಣ, ಶಿವ ರಹಸ್ಯ ಗ್ರಂಥ ಗಳಲ್ಲಿ ಮಂಗಲಪ್ರದವಾದುದೇ ಲಿಂಗ ಸ್ವರೂಪ. ಇದೇ ದಿನ ಶಿವಪಾರ್ವತಿಯರ ಕಲ್ಯಾಣ ಸಹ ನಡೆಯಿತು. ಪ್ರತಿ ತಿಂಗಳು ಬರುವ ಮಾಸ ಶಿವರಾತ್ರಿಗಳಿಗಿಂತ ವರ್ಷಕೊಮ್ಮೆ ಬರುವ ಮಹಾಶಿವರಾತ್ರಿ. ಅದೇ ರೀತಿ ದಿನವೆಲ್ಲಾ ಉಪವಾಸ ಇದ್ದು ರಾತ್ರಿ ಹೊತ್ತು ಶಿವನ ಭಜನೆ, ಜಾಗರಣೆ ಮಾಡಿದರೆ ಅದೆಷ್ಟೊ ಜನ್ಮಗಳ ಪುಣ್ಯ ಫಲಸಿಗುತ್ತದೆ ಎಂದು ನಂಬಲಾಗಿದೆ.

ರುದ್ರ ಮಂತ್ರಗಳಲ್ಲಿ ರುದ್ರನೇ ಪ್ರತ್ಯಕ್ಷದೇವತೆ, ಭಕ್ತರ ಎಲ್ಲಾ ಅಭೀಷ್ಟೆಗಳನ್ನು ನೆರವೇರಿಸಿ ಕೊಡುವವನು.'ರುದ್ರ' ಎಂದರೆ ಪ್ರಳಯ ಕಾಲದ ಪ್ರತೀಕ, ಶಾಂತನಾದಾಗ ನಿರ್ವಿಘ್ನ ಕಾರಕ. ಶಿವನನ್ನು ನಾವು ಯಾವಾಗಲೂ ಸಹ ಲಿಂಗ ಸ್ವರೂಪದಲ್ಲಿಯೇ ಆರಾಧಿಸಬೇಕು. ಶಿವನ ಆರಾಧಕರು ರುದ್ರ ಮಹಾಮಂತ್ರಗಳನ್ನು ಸ್ವರಸಮೇತ ಉಚ್ಚರಿಸುತ್ತ, ಶಿವ ಲಿಂಗಕ್ಕೆ ಹಾಲು,ಮೊಸರು,ತುಪ್ಪ,ಜೇನು,ಸಕ್ಕರೆ, ಫಲೋದಕ, ನಂತರ ಶುದ್ಧೋಕದಿಂದ ಅಭಿಷೇಕ ಮಾಡುವುದು ರುದ್ರಾ ರ್ಚನೆಯ ಪೂಜೆಯ ಮುಖ್ಯ ಅಂಗವಾಗಿದೆ. ದ್ವಾದಶ ಜ್ಯೋತಿರ್ಲಿಂಗಗಳಲ್ಲೇ ಆಗಲಿ ಅಥವಾ ಸ್ವತಃ ತನ್ನ ಆತ್ಮ ಲಿಂಗದ ಸ್ವರೂಪದಲ್ಲಿ ಆಗಲಿ ಶಿವ ಮಾತ್ರ ಲಿಂಗ ಸ್ವರೂಪ ದಲ್ಲಿಯೇ ನೆಲೆಸಿದ್ದಾನೆ.

ರುದ್ರ ಪಠಣ ಅದು ಪರಶಿವನನ್ನು ಆರಾಧಿಸುತ್ತ ಆಶೀರ್ವಾದ ಬೇಡುವ ಸ್ತೋತ್ರ. ರುದ್ರದಲ್ಲಿ ಒಟ್ಟು 11 ಭಾಗಗಳು (ಅನುವಾಕಗಳು) ಇವೆ. ರುದ್ರದ ನಂತರ ಪಠಿಸುವ 'ಚಮಕ' ದಲ್ಲೂ ಒಟ್ಟು 11 ಭಾಗಗಳಿವೆ. ಒಂದು ಸರ್ತಿ ರುದ್ರ ಮತ್ತು ಚಮಕ ಗಳನ್ನು ಪಠಿಸುವುದಕ್ಕೆ ದೈನಂದಿನ 'ನ್ಯಾಸ' ಎಂದು ಹೆಸರು. ವಿಶೇಷ ದಿನಗಳಲ್ಲಿ ಒಂದಕ್ಕಿಂತ ಹೆಚ್ಚು ಸರ್ತಿ ರುದ್ರಪಠಣ ನಡೆಯುತ್ತದೆ. ಒಟ್ಟು 11 ಸಲ ಪಠಿಸುವ ಪದ್ಧತಿಯಿದೆ. ಹೀಗೆ 11 ಸರ್ತಿ ಪಠಿಸುವಾಗ ರುದ್ರದ ಒಂದು ಆವರ್ತನ ಮುಗಿಸಿ ಚಮಕದ ಒಂದು ಭಾಗ (ಹನ್ನೊಂದರಲ್ಲಿ ಒಂದು ) ಪಠಿಸು ತ್ತಾರೆ. ರುದ್ರದ ಇನ್ನೊಂದು ಆವರ್ತನ ಮುಗಿಸಿದ ಮೇಲೆ ಚಮಕದ ಇನ್ನೊಂದು ಭಾಗ (ಅನುಕ್ರಮವಾಗಿ) ಹೀಗೆ ಒಟ್ಟು 11 ಸಲ ರುದ್ರವನ್ನು (ಮತ್ತು 11 ಭಾಗಗಳ ಮೂಲಕ ಒಂದು ಸತಿ ಇಡೀ ಚಮಕವನ್ನು) ಪಠಿಸುವುದಕ್ಕೆ 'ಏಕಾದಶಿನೀ' ಎಂದು ಹೆಸರು.

ಅಂತಹ 11 ಏಕಾದಶಿನೀಗಳನ್ನು (ಅಂದರೆ 1111 = 121 ಸರ್ತಿ ರುದ್ರವನ್ನು ಮತ್ತು 11 ಸರ್ತಿ ಚಮಕವನ್ನು) ಪಠಿಸು ವುದಕ್ಕೆ ಲಘುರುದ್ರ' ಎನ್ನುತ್ತಾರೆ. 11 ಲಘುರುದ್ರಗಳು (ಅಂತದರೆ 111111 = 1331 ಸರ್ತಿ ರುದ್ರವನ್ನು ಮತ್ತು 121 ಸರ್ತಿ ಚಮಕ

ವನ್ನು) ಪಠಿಸುವುದಕ್ಕೆ 'ಮಹಾರುದ್ರ' ಎನ್ನುತ್ತಾರೆ.11 ಮಹಾರುದ್ರಗಳು (ಅಂದರೆ 1111111114641 ಸರ್ತಿ ರುದ್ರವನ್ನು, 1331 ಸರ್ತಿ ಚಮಕವನ್ನು) ಪಠಿಸುವುದಕ್ಕೆ 'ಅತಿ ರುದ್ರ' ಎನ್ನುತ್ತಾರೆ.

'ಚಮಕ'ದಲ್ಲಿ ಮೊದಲ 10 ಅನುವಾಕಗಳಲ್ಲಿ ಮನುಷ್ಯನ ಆತ್ಮತೃಪ್ತಿ ಮತ್ತು ಸಂತೋಷಕ್ಕಾಗಿ ಏನು ಬೇಕೋ ಅವೆಲ್ಲವನ್ನು ಪರಮೇಶ್ವರನ ಬಳಿ ಪ್ರಾರ್ಥಿಸುವ ಮಂತ್ರಗಳಿವೆ. ಆದರೆ ಚಮಕದ 11 ನೇ ಅನುವಾಕವು ಅತಿ ವಿಶಿಷ್ಟವಾದುದು. ಅದರಲ್ಲಿ ಭಕ್ತನು ತನಗೆ 'ಏನು'ಬೇಕು ಎಂದು ಕೇಳುವುದಿಲ್ಲ. ಬದಲಿಗೆ 'ಎಷ್ಟು' ಪ್ರಮಾಣದಲ್ಲಿ ಬೇಕು ಎಂದು ಕೇಳಿಕೊಳ್ಳುತ್ತಾನೆ. ಮೊದಲು 1 ರಿಂದ 33ರ ವರೆಗಿನ ಬೆಸ ಸಂಖ್ಯೆಗಳನ್ನು ಉಚ್ಚರಿಸಿ ಅಷ್ಟು ಪ್ರಮಾಣದಲ್ಲಿ ಬೇಕು ಎನ್ನುತ್ತಾನೆ.ಆಮೇಲೆ 4 ರಿಂದ ಆರಂಭಿಸಿ 48 ರ ವರೆಗೆ 4 ರ ಅಪವರ್ತ್ಯಗಳನ್ನು ಉಚ್ಚರಿಸಿ ಅಷ್ಟು ಪ್ರಮಾಣದಲ್ಲಿ ಬೇಕು ಎನ್ನುತ್ತಾನೆ. ಸಂಸ್ಕೃತ ಸಂಖ್ಯೆಗಳ ರೂಪದಲ್ಲಿ ಅದು ಹೀಗೆ ಬರುತ್ತದೆ.



ಈ ಮಂತ್ರಗಳನ್ನು ಉಚ್ಛರಿಸುತ್ತಾ ಯಜ್ಞ ಹೋಮಗಳನ್ನು ಮಾಡುವುದರಿಂದ ಲೋಕ ಕಲ್ಯಾಣದ ಜತೆಗೆ ಪ್ರಕೃತಿಯ ಅತಿವೃಷ್ಠಿ, ಅನಾವೃಷ್ಠಿ ತಡೆದು ಸಂಪದಭಿವೃದ್ಧಿ, ದುಷ್ಟಸಂಹಾರ,ಧರ್ಮ ಸಂಸ್ಥಾಪನೆಗಾಗಿ ರುದ್ರಪಠಣ ಶಕ್ತಿಯುತವಾಗಿದೆ. ಆದಿಗುರು ಶ್ರೀಶಂಕರಾಚಾರ್ಯರು ಸಹಿತ ರುದ್ರ ಪಠಣದ ಮಹತ್ವ ತಿಳಿಸಿದ್ದಾರೆ.


ಏಕಾಗ್ರತೆಯಿಂದ ಪಠಣ ಮಾಡಿದರೆ ಶಿವನು ಬಹು ಬೇಗ ಪ್ರತ್ಯಕ್ಷನಾಗುತ್ತಾನೆ.

## ಒಂದು ಕ್ಲಿಕ್ ಮಾಡಿ ಸ್ವಾಮಿ ದರ್ಶನ ಮಾಡಿ

## ತಿ.ತಿ.ದೇವಸ್ಥಾನಗಳು ಮೊಬೈಲ್ ಆ್ಯಪ್




TT Devasthanams




ತಿ.ತಿ.ದೇವಸ್ಥಾನಗಳು ಎಂಬ ಹೆಸರಿನಿಂದ ರಚಿಸಲಾದ ಮೊಬೈಲ್ ಆ್ಯಪ್ ಅನ್ನು ತಿ.ತಿ.ದೇ ಆಡಳಿತ ಮಂಡಳಿಯ ಮಾಜಿ ಅಧ್ಯಕ್ಷರು ಶ್ರೀ ವೈ.ವಿ.ಸುಬ್ಬಾರೆಡ್ಡಿಯವರು ಪ್ರಾರಂಭಿಸಿದರು. ಇದುವರೆಗೆ ಭಕ್ತರಿಗಾಗಿ ಗೋವಿಂದ ಮೊಬೈಲ್ ಆ್ಯಪ್ ಅನ್ನು ಪ್ರಾರಂಭಿಸಿದರು. ಈಗ ಅದನ್ನು ಆಧುನೀಕರಿಸಲಾಗಿದೆ ಮತ್ತು ಹೆಚ್ಚಿನ ಅಪ್ಲಿಕೇಶನ್‌ಗಳನ್ನು ಅಳವಡಿಸಲು ಹೊಸ ಅಪ್ಲಿಕೇಶನ್ ಅನ್ನು ರಚಿಸಲಾಗಿದೆ.ಈ ಮೊಬೈಲ್ ಆ್ಯಪ್ ಮೂಲಕ ಭಕ್ತರು ತಿರುಮಲೆ ಸ್ವಾಮಿಯವರ ದರ್ಶನ, ಸೇವೆಗಳು, ವಸತಿ,ಅಂಗಪ್ರದಕ್ಷಿಣೆ,ಸರ್ವದರ್ಶನವನ್ನು ಈ ಅಪ್ಲಿಕೇಶನ್ ಮುಖಾಂತರ ಬುಕ್ ಮಾಡಿಕೊಳ್ಳಬಹುದು. ಅದೇ ಆ್ಯಪ್ ಮುಖಾಂತರ ದೇಣಿಗೆಯನ್ನು ನೀಡಬಹುದು. ಭಕ್ತರು ಲಾಗಿನ್ ಆಗಲು ಓ.ಟಿ.ಪಿ. ಜೊತೆಗೆ ಬಳಕೆದಾರರ ಹೆಸರನ್ನು ನಮೂದಿಸಬೇಕು,ಯಾವುದೇ ಪಾಸ್‌ವರ್ಡ್‌ನ ಅಗತ್ಯವಿಲ್ಲ.

# ಸ್ತ್ರೀ ಶಕ್ತಿಯ ವೈಜ್ಞಾನಿಕ ಹಿನ್ನೆಲೆ

- ಅನಿಲ್ ಎಸ್.ಪಿ. ರೈಕರ್
96320 81958





ಬಾಲಕರಿಗೆ ಎಂಟನೇ ವಯಸ್ಸಿನಲ್ಲಿ ಉಪನಯನ ಹೇಗೋ ಹಾಗೆಯೇ ಹೆಣ್ಣು ಮಕ್ಕಳಿಗೆ ಎಂಟನೇ ವಯಸ್ಸಿನಲ್ಲಿ ಮದುವೆ ಮಾಡಬೇಕೆಂದು ಹಿಂದಿನ ಕಾಲದಲ್ಲಿ ಇತ್ತು. ಆಧುನಿಕತೆ ಬೆಳವಣಿಗೆ ಬಳಿಕ ಶಾಸನದಲ್ಲಿ ಕಡ್ಡಾಯವಾದ ವಯಸ್ಸಿನ ಅಂತರ ಕಾನೂನು ಜಾರಿಗೆ ಬಂತು. ಉಪನಯನ ಕಾಲದಲ್ಲಿ ಯಜ್ಞೋಪವೀತಧಾರಣೇ ಹೇಗೋ ಹಾಗೆಯೇ ಹೆಣ್ಣು ಮಕ್ಕಳ ಮದುವೆ ಕಾಲದಲ್ಲಿ ಮಾಂಗಲ್ಯಧಾರಣೆಯೂ ಸಹ ಅಂದರೆ ಗಂಡಸರಿಗೆ ಯಜ್ಞೋಪವೀತವು ಹೇಗೆ ಉಪಕಾರಿಯಾಗುತ್ತೋ ಅದೇ ರೀತಿ, 'ಸ್ತ್ರೀ'ಯರಿಗೆ ಮಾಂಗಲ್ಯವು ಸಹ ಉಪಕಾರಿಯಾಗಿ ಅವರುಗಳ ಆರೋಗ್ಯವನ್ನು ನಿಯಂತ್ರಿಸುತ್ತದೆ.

ರಾಮಾಯಣದಲ್ಲಿ ಸೀತಾದೇವಿಗೆ ಉಪನಯನ ಮಾಡಿದ ಉಲ್ಲೇಖನ ಇದೆ. ಉಪನಯನ ಬದಲು ಮಾಂಗಲ್ಯಧಾರಣೆಯನ್ನು 'ಸ್ತ್ರೀ'ಯರಿಗೆ ನಿಯಮ ಮಾಡಿದ್ದರು. ಹಿಂದೆ 'ಸ್ತ್ರೀ'ಯರಿಗೆ ಉಪನಯನ ಮಾಡುತ್ತಿದ್ದರೆಂಬುದಕ್ಕೆ ಈಗಲೂ ಈ ಸಂಸ್ಕೃತಿಯನ್ನು ನಮ್ಮ ಪೂಜಾ ವಿಧಾನಗಳಲ್ಲಿ ನೋಡಬಹುದು. ಹೆಣ್ಣು ದೇವರುಗಳಾದ ಲಕ್ಷ್ಮೀ ಪೂಜೆ, ಸರಸ್ವತಿ ಪೂಜೆ, ಗೌರಿ ಪೂಜೆ ಇತ್ಯಾದಿ 'ಸ್ತ್ರೀ' ದೇವರುಗಳ ಪೂಜಾ ವಿಧಾನಗಳಲ್ಲಿ ಉಪವೀತ (ಯಜ್ಞೋಪವೀತ)ವನ್ನು ಸಮರ್ಪಣೆ ಮಾಡುವ ಪದ್ಧತಿ ಈಗಲೂ ಇದೆ.

ಆದರೆ ಇಲ್ಲಿ ಒಂದು ವ್ಯತ್ಯಾಸವಿದೆ. ಪುರುಷರು ಬರ್ಹಿದೇಶಕ್ಕೆ ಹೋದಾಗ ಯಜ್ಞೋಪವೀತವನ್ನು ಕಿವಿಗೆ ಸಿಕ್ಕಿಸಿಕೊಳ್ಳುತ್ತಾರಲ್ಲ! 'ಸ್ತ್ರೀ'ಯರಿಗೆ ಇದು ಸಾಧ್ಯವಿಲ್ಲವಲ್ಲ ಎಂಬ ಸಂದೇಹ ಬರುತ್ತೆ. ಇದು ಸತ್ಯ."ಯಜ್ಞೋಪವೀತ ಸಿಕ್ಕಿಸಿಕೊಂಡಾಗ ಅದರ ಪರಿಣಾಮವೆಂದರೆ? ಯಜ್ಞೋಪವೀತವನ್ನು ಕಿವಿಗೆ ಸಿಕ್ಕಿಸಿಕೊಂಡಾಗ ಆಗುವ ಪರಿಣಾಮ 'ಸ್ತ್ರೀ'ಯರಿಗೆ ಸದಾ ಕಾಲವು ಇರಬೇಕು ಮತ್ತು ಖಂಡಿತ ಇರುತ್ತದೆ. ಹೇಗೆಂದರೆ ಸ್ತ್ರೀಯರು ಕರ್ಣಾಭರಣದ ಭಾಗದಿಂದ ಕಿವಿಯ ಮೂಲಕ ಹೃದಯಕ್ಕೆ ಹೋಗುವ ನರಗಳು ಹೃದಯದ ಒತ್ತಡವನ್ನು ಸದಾ ಕಾಲವು ನಿಯಂತ್ರಿಸುತ್ತಿರುತ್ತದೆ. ಇದು ಸ್ತ್ರೀಯರಿಗೆ ಸದಾ ಕಾಲವೂ ಇರಬೇಕಾದದ್ದು.

ಇನ್ನೂ 'ಮಾಂಗಲ್ಯಧಾರಣೆ' ಮಾಡುವ ಕಾಲದಲ್ಲಿ ಪತಿಯು ತನ್ನ ಪತ್ನಿಗೆ ಹೇಳುವ "ಮಾಂಗಲ್ಯಂ ತಂತುನಾ ಅನೇನ ಮಮ ಜೀವನ ಹೇತುನಾ ಕಂಠೇ ಬಧ್ನಾಮಿ ಸುಭಗೇ ತ್ವಂ ಜೀವ ಶರದಃ ಶತಂ॥" ಅಂದರೆ,

ನನ್ನ ಜೀವನಕ್ಕಾಗಿ ನಿನ್ನ ಕುತ್ತಿಗೆಗೆ "ಮಾಂಗಲ್ಯಧಾರಣೆ" ಮಾಡುತ್ತೇನೆ. ನೀನು ಒಂದು ನೂರು ಶತದೃತುಗಳು ಬಾಳು. (100 ವರುಷ)

ಅಂದರೆ ತನ್ನ ಜೀವನವು ಸುಖಮಯವಾಗಿರಲೆಂದು ಪತಿಯ ಅಪೇಕ್ಷೆ ಪತಿಯು ಸುಖವಾಗಿರಬೇಕಾಗಿದ್ದರೆ, "ಪತ್ನಿ"ಯೂ ಸಹ ಆರೋಗ್ಯವಂತಳಾಗಿ ಸಂಸಾರ ನಿರ್ವಹಣೆಯಲ್ಲಿ ಸಮಭಾಗಿಯಾಗಿ ಪತಿಯಂತೆ ತಾನು ಸುಖವಾಗಿದ್ದರೆ ತಾನೇ. ಆತನು ಸುಖವಾಗಿರುವುದು ಚಪ್ಪಾಳೆ ಹೊಡೆಯುವುದಕ್ಕೆ ಹೇಗೆ ಎರಡೂ ಕೈಗಳೂ ಬೇಕೋ ಹಾಗೆಯೇ ಸಂಸಾರ ಸುಖ ಅನುಭವಿಸುವುದಕ್ಕೆ ಪತಿ-ಪತ್ನಿ ಇಬ್ಬರೂ ಆರೋಗ್ಯವಾಗಿ ಮಕ್ಕಳೊಂದಿಗೆ ಸಂತೋಷದಿಂದ ಇರಬೇಕು. ಆರೋಗ್ಯವೆಂದರೇ ದೇಹ ಆರೋಗ್ಯವಲ್ಲದೇ ಮನಃಶಾಂತಿಯೂ ಇರಲೇಬೇಕು. ಅಂದರೆ ಮಹಿಳೆಯರ ಮನಸ್ಸಿನ ಮೇಲೂ"ಮಾಂಗಲ್ಯಧಾರಣೆ"ಯ ಪ್ರಭಾವ ಬೀರುತ್ತದೆಂದು ವಿಶದವಾಯಿತು.

ಅಲ್ಲದೆ ಸಮಾಜದಲ್ಲಿ ಎಷ್ಟೋ ಬಡತನವಿದ್ದರೂ, ಸಹ ತನ್ನ ಮನೆಯಲ್ಲಿ ಕೂಳಿಲ್ಲದಿದ್ದರೂ ಆಚರಣೆಯಲ್ಲಿ ಬರಿಗೈ ಯಲ್ಲಿ ಹೋಗಬಾರದು ಎನ್ನುತ್ತ,ಮಾಂಗಲ್ಯವನ್ನು ಮಾತ್ರ ಬಂಗಾರದಿಂದ ಮಾಡಿಸಿ ಕಟ್ಟಿಕೊಳ್ಳುತ್ತಾರೆ. ಇದರಿಂದ ಒಂದು ಅಂಶ ಮುಖ್ಯವಾಗಿ ಗಮನಿಸಬೇಕು. ಶರೀರಕ್ಕೆ ಬಂಗಾರದ ಸ್ಪರ್ಶದಿಂದ ಅನೇಕ ಬಗೆಯ ಸಣ್ಣಪುಟ್ಟ ಉಪದ್ರವಗಳು ನಿವಾರಣೆ ಆಗುತ್ತದೆ. ಚರ್ಮವ್ಯಾಧಿಗಳು ತಕ್ಕಮಟ್ಟಿಗೆ ತಡೆಗಟ್ಟಲ್ಪಡುತ್ತೆ. ಸ್ನಾನ ಮಾಡುವಾಗ ಇದರ ನೀರು ಶರೀರದ ಮೇಲೆ ಬೀಳುವುದರಿಂದ,ಆರೋಗ್ಯಕ್ಕೆ ಪುಷ್ಟೀಕರಿಸುವಂತಾಗುತ್ತೆ. ಶರೀರದಲ್ಲಿ ಉತ್ಪನ್ನವಾಗುವ ವಿದ್ಯುತ್‌ಶಕ್ತಿಯನ್ನು ನಿಯಂತ್ರಿಸುತ್ತದೆ ಮತ್ತು ಬಂಗಾರ ಕುಜ ಗ್ರಹಕ್ಕೆ ಹೇಳಿರುವ ಲೋಹ,ಕುಜ,ಅಗ್ನಿಗ್ರಹ ಆದ್ದರಿಂದ ಕುಜನನ್ನು ಅಂಗಾರಕನೆಂದು ಕರೆಯಲಾಗಿದೆ. ದೇಹದ ಉಷ್ಣತೆಯನ್ನು ನಿಯಂತ್ರಿಸುವಲ್ಲಿ ಬಂಗಾರ ಬಹಳ ಮುಖ್ಯ ಪಾತ್ರವಹಿಸುತ್ತದೆ.

ಕುಂಕುಮ ಇಡುವ ಸ್ಥಳದಲ್ಲಿ (ಹಣೆಯಲ್ಲಿ) ಚರ್ಮ ರೋಗಗಳನ್ನು ತಡೆಗಟ್ಟುವ ಉದ್ದೇಶದಿಂದ ಆ ಘನವಾದ ಉದ್ದೇಶ ಸ್ತ್ರೀ ಮತ್ತು ಪುರುಷರ ದೇಹಗಳ ರಚನೆಯಲ್ಲಿ ಕೆಲವು ವ್ಯತ್ಯಾಸಗಳಿರುವುದರಿಂದ ಈ ರೀತಿ ಮಾಡಿರಬಹುದು.


**ಬೆಳ್ಳಿ ಕಾಲುಂಗುರ ಧಾರಣೆ:**

ಬೆಳ್ಳಿಯಲ್ಲಿ ಉತ್ತಮ ವಾಹಕ ಶಕ್ತಿಯಿದೆ.ಭೂಮಿಗೆ ಸೋಂಕಿದಾಗ, ಭೂಮಿಯಲ್ಲಿನ ದೃಢೀಯ ಶಕ್ತಿಯನ್ನು ಬೆಳ್ಳಿ ಹೀರಿಕೊಳ್ಳುತ್ತದೆ. ಇದಲ್ಲದೆ ಕಾಲಿನ ಎರಡನೆಯ ಬೆರಳಿನ ನರಕ್ಕೂ ಹೃದಯ ಮತ್ತು ಗರ್ಭಕೋಶಕ್ಕೂ ನೇರ ಸಂಪರ್ಕವಿದೆ. ಇದರಿಂದ ಎರಡೂ ಅಂಗಾಂಗಗಳಲ್ಲಿ ರಕ್ತ ಪರಿಚಲನೆಯು ಆರೋಗ್ಯಕರ ಸ್ಥಿತಿ ನಿರ್ಮಾಣವಾಗುತ್ತದೆ. ಇದಲ್ಲದೆ ದೋಷರಹಿತ ಋತುಚಕ್ರ, ಕೈ ನೆರವು ಸಹ ಸಿಗುತ್ತದೆ. ಸಂತಾನ ಉತ್ಪತ್ತಿಯ ಸಮಯದಲ್ಲಿ ಸಮಸ್ಯೆ ಉದ್ಭವಿಸುವುದಿಲ್ಲ. ಕಾಲುಂಗುರ ಧರಿಸಿದರೆ ಅವಳು ವಿವಾಹಿತ ಮಹಿಳೆಯೆಂದು ಸುಲಭವಾಗಿ ಗುರುತಿಸಬಹುದು ಮತ್ತು ಅಂದಿನಿಂದ ಅವಳನ್ನು ಗೌರವ ಭಾವದಿಂದ ಕಾಣಲು ನೆರವಾಗುತ್ತದೆ. ಇದಲ್ಲದೆ ಸಮಾಜ ಕುಟುಂಬದಲ್ಲಿ ಸ್ತ್ರೀ ಸಮೂಹವನ್ನು ಪೂಜನೀಯ ದೃಷ್ಟಿಯಿಂದ ನೋಡಬೇಕೆಂದೆ ನಿಯಮವಿದೆ.

ಅಪಾರ ಕಾಳಜಿಯನ್ನು ಹಿಂದೂ ಸಂಪ್ರದಾಯಗಳು ಹೊಂದಿವೆ. ಬಹಳ ಹಿಂದಿನಿಂದಲೂ ಏಕ ಪ್ರಕಾರದ ಆಧ್ಯತೆಯನ್ನು ನೀಡಿರುತ್ತಾರೆ. ವಕ್ರ ದೃಷ್ಟಿಯಿಂದ ನೋಡಬಾರದೆಂಬ ಕಾರಣದಿಂದ ಕಾಲುಂಗರ ಧರಿಸುವುದನ್ನು ಖಡ್ಡಾಯಗೊಳಿಸಲಾಗಿದೆ.

ಈ

ಮಾಂಗಲ್ಯದ ವಿಸ್ಮಯ ವಿಚಾರವೆಂದರೆ ಇದನ್ನು ಎತ್ತಿ ಹಿಡಿದಾಗ ತೋರುವ ಕೊನೆಯ ಎರಡು ಮಣಿಗಳೇ ಸೂರ್ಯ ಚಂದ್ರರ ಸಂಕೇತ ಚಿಹ್ನೆಗಳು. ಯಜ್ಞ



ಕರ್ಮಗಳ ಋಷಿಗಳ ಮುಖ ಮುದ್ರೆಯ ಚಿಹ್ನೆಯಾಗಿದೆ. "ಋಷಿ ವದನ" ಅಂದರೆ ಪಂಚಜ್ಞಾನೇಂದ್ರಿಯಗಳಾದ ಶಬ್ಧ, ಸ್ಪರ್ಶ, ರೂಪ,ರಸ,ಗಂಧಗಳೆಂಬ ಐದು ಜ್ಞಾನೇಂದ್ರಿಯಗಳಲ್ಲಿ ಉತ್ಪನ್ನ ಗೊಂಡ ಜ್ಞಾನವು-ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ ಗಳೆಂಬ ಐದು ಕರ್ಮೇಂದ್ರಿಯಗಳ ಮುಖಾಂತರ ಹಾದು ಹೋಗುವ ಮಂತ್ರ "ವದನ"ವೇ ಋಷಿ ಮುಖಗಳು, ಕೆಳಗಿನಲ್ಲಿ ಕಾಣುವ "ಮಂಗಲಸೂತ್ರ"ವೇ ಹೆಡೆ ಎತ್ತಿದ "ನಾಗದೇವ" ನದ್ದಾಗಿದೆ.ಈ ಬ್ರಹ್ಮಾಂಡ ತತ್ವ ಹೋಲಿಕೆ ಇರುವ ಒಂದು ಶಕ್ತಿಯು ಮಾಂಗಲ್ಯದಲ್ಲಿದೆ. ಇದು ಸೃಷ್ಟಿಕರ್ತ ಪರಬ್ರಹ್ಮನ ಅನುಷ್ಠಾನದವರಿಗೆ ಮಾತ್ರ ಸಲ್ಲುತ್ತದೆ.

ದೋಸೆ, ರೊಟ್ಟಿಗಳನ್ನು ಕಬ್ಬಿಣದ ತವಾದಲ್ಲಿ ಮಾಡುತ್ತಿದ್ದರು. ಅವರಿಗೆ ಖನಿಜಾಂಶ,ಪೌಷ್ಟಿಕಾಂಶ, ಕಬ್ಬಿಣಾಂಶ, ವಿಟಮಿನ್, ಮಿನರಲ್‌ಗಳ ಕುರಿತಾಗಿ ಅರಿವು ಇತ್ತು. ಇದರ ಕುರಿತು ಚರ್ಚೆ ಸುತ್ತಿರಲಿಲ್ಲ. ಅದಕ್ಕೆ ಬದಲಾಗಿ ಬಗೆ ಬಗೆಯ ರೀತಿಯಲ್ಲಿ ಅವು ಗಳ ಅನುಷ್ಠಾನಕ್ಕೆ ಒತ್ತು ಕೊಟ್ಟಿದ್ದರು. ಇವುಗಳನ್ನು ಸಹಜ ವಾಗಿ,ಸರಳವಾಗಿ,ಸುಲಭವಾಗಿ ನೈಸರ್ಗಿಕವಾಗಿ ಪಡೆ ಯುವ ವ್ಯವಸ್ಥೆ ಮಾಡಿಕೊಂಡಿದ್ದರು. ಈ ನಿಟ್ಟಿನಲ್ಲಿ ಧಾರಣೆ ಮಾಡುತ್ತಿದ್ದ ಲೋಹದಿಂದ ಮಾಡಿದ ಬಳೆ-ಖಡಗ ಕೈಬಳೆಗಳ ಪಾತ್ರ ಹಿರಿದಾದದ್ದು, ಒದಗಿಸುವ ಶಕ್ತಿವಾಹನ ಇದಾಗಿದೆ.

ವೈದಿಕಾನುಷ್ಠಾನದವರು ಆಚರಿಸಿಕೊಂಡು ಬಂದರು. ಆಕಾಶತತ್ವ, ಭೂಮಿತತ್ವ, ಪಾತಾಳತತ್ವ ಈ ಮೂರು ತತ್ವಗಳು ಒಂದೇ ಮಾಂಗಲ್ಯದಲ್ಲಿರುವುದನ್ನು ಮೆಚ್ಚಿಕೊಂಡರು.ಇದನ್ನು ರೂಢಿಸಿಕೊಂಡರು.ಮತ್ತೊಂದು ವಿಚಾರವೆಂದರೆ ಇದರ ಮಣಿ ಗಳಿಗೆ ದಾರೆ ಇರುವುದರಿಂದಲೋ? ಅಥವಾ ಮುಹೂರ್ತಕ್ಕೆ ಕಟ್ಟುವುದರಿಂದಲೋ ಮಾಂಗ್ಯಕ್ಕೆ "ಧಾರಮಣಿ" ಎಂಬ ಹೆಸರು ನಾಣ್ಣುಡಿಯಾಗಿ ಬಂದಿರುತ್ತದೆ.



ಮನೆಯ ಮುಂದೆ ಸಗಣಿ ನೀರು ರಂಗೋಲಿ ಇಟ್ಟು ನಂತರ ತುಳಸಿಗಿಡ (ಬೃಂದಾವನ)ಕ್ಕೆ ಪ್ರದಕ್ಷಿಣೆ ನಮಸ್ಕಾರ ಹಾಕಿ ನಂತರ ತಮ್ಮ ಇತರ ನಿತ್ಯಕರ್ಮಗಳು ಮಾಡಬೇಕೆಂಬ ನಿಯಮ ಮಾಡಿದ್ದಾರೆ. ಇದರ ಉದ್ದೇಶ ಇಷ್ಟೇ. ಸೂರ್ಯೋದ ಯಕ್ಕೆ ಮೊದಲು ಎದ್ದು ಮನೆಯ ಮುಂದೆ ಸಗಣಿ ನೀರು ಹಾಕು ವುದು ಪೂರ್ಣ ಆರೋಗ್ಯ ದೃಷ್ಟಿಯಿಂದ ಮಾತ್ರ ಈ ನಿಯಮ. (ಸಗಣಿಗೆ) ಗೋಮಯ. ಸಾಂಕ್ರಾಮಿಕ ರೋಗಗಳನ್ನು ನಾಶ ಮಾಡುವ ಮತ್ತು ರೋಗಗಳನ್ನು ಗುಣಪಡಿಸುವ ಶಕ್ತಿ ಇದೆ. ಅಂದರೆ ಗೋಮಯದ ಸ್ಪರ್ಷ ಮತ್ತು ವಾಸನೆ ಈ ಎರಡ ರಿಂದಲೇ ಅನೇಕ ವಿಷಕ್ರಿಮಿಗಳು ನಾಶವಾಗಿ ಆರೋಗ್ಯವನ್ನು ಕಾಪಾಡುತ್ತೆ.

**ಆಯುರ್ವೇದ ಪ್ರಕಾರ:**

ಪುರುಷರ ಮೂಳೆಗಳಿಗಿಂತ ಸ್ತ್ರೀಯರ ಮೂಳೆಗಳಲ್ಲಿರುವ ಶಕ್ತಿಯು ಕಡಿಮೆ. ಈ ಕಾರಣ ಸ್ತ್ರೀಯರು ಮೂಳೆಗಳ ಶಕ್ತಿಯನ್ನು ಜಾಸ್ತಿ ಮಾಡಿಕೊಳ್ಳಲು ಬಳೆಗಳನ್ನು ಧರಿಸುತ್ತಿದ್ದರು. ಕೈಯಲ್ಲಿ ಹಾಕಿಕೊಳ್ಳುವ ಬಳೆ-ಕಡಗಳನ್ನು ಶುಭ ಚಿಹ್ನೆಗಳನ್ನು ಧಾರಣೆ ಮಾಡುವ ಸಂಪ್ರದಾಯ ನಮ್ಮಲ್ಲಿದೆ. ಬಗೆ ಬಗೆಯ ಬಣ್ಣಗಳಲ್ಲಿ ತಯಾರಾಗುವ ಬಳೆಗಳನ್ನು ಧರಿಸಿದಾಗ ಅವುಗಳಿಂದ ಕಣ್ಣಿಗೂ ಆನಂದ ಮನಸ್ಸಿಗೂ ಆನಂದ ಸಿಗುತ್ತಿತ್ತು. ದೇಹಕ್ಕೆ ರವಾನಿಸು ವಲ್ಲಿ ಬಳೆಗಳನ್ನು ಮಣಿಕಟ್ಟಿನ ಪ್ರದೇಶದಲ್ಲಿ ಧಾರಣೆ ಮಾಡ ಲಾಗುತ್ತದೆ. ರೋಗ ಪತ್ತೆ ಮಾಡುವ ಅಗತ್ಯವಿರುವ ನಾಡಿ ಇರು ವುದು. ಇದೇ ಜಾಗದಲ್ಲಿ ಕೆಲಸದ ಸಂದರ್ಭದಲ್ಲಿ ಕೈಗಳನ್ನು ಅತ್ತಿಂದಿತ್ತ ಮೇಲೆ, ಕೆಳಗೆ ಆಡಿಸುತ್ತ ಇರುತ್ತೇವೆ. ಈ ಸಂದರ್ಭ ದಲ್ಲಿ ಬಳೆಗಳು ಚಿಕಿತ್ಸಾ ವಿಧಾನದಲ್ಲಿ ಹದವಾಗಿ ದಿನಪೂರ್ತಿ ಕೆಲಸ ಮಾಡುತ್ತದೆ. ಈ ಕಾರಣದಿಂದ ನಾಡಿಯು ಚುರು ಕಾಗಿಯೂ ಕಾರ್ಯನಿರ್ವಹಿಸುತ್ತದೆ. ಬಳೆಗಳನ್ನು ಸದಾಕಾಲ ಧರಿಸುವುದರಿಂದ ಮಣಿ ಕಟ್ಟಿನ ಮೂಲಕ ದೇಹಕ್ಕೆ ಬೇಕಾದ ಮೂಳೆಗಳ ಸಾಮರ್ಥ್ಯವನ್ನು ಹೆಚ್ಚಿಸುವ ಪೋಷಕಾಂಶಗಳ ರವಾನೆ ನಿರಾಯಾಸವಾಗಿ ಆಗುತ್ತದೆ. ದೇಹಕ್ಕೆ ಬೇಕಾದ ಶಕ್ತಿ ಯನ್ನು ಒದಗಿಸುವ ಶಕ್ತಿವಾಹಕಗಳೆಂದು ಈ ಬಳೆಗಳನ್ನು ಕರೆಯಲಾಗಿದೆ. ಬಳೆಗಳು ಮಣಿಕಟ್ಟು ಪ್ರದೇಶವನ್ನು ಸಂರಕ್ಷಿ ಸುವ ಪ್ರತಿನಿಧಿಯಾಗಿ ಕೆಲಸ ಮಾಡುತ್ತದೆ.

ಆರೋಗ್ಯಕರ ದೇಹ ಪೋಷಣೆಗೆ ಬೇಕಾದ ಪೋಷಕಾಂಶ ಗಳು ಚಿನ್ನ/ಬೆಳ್ಳಿ ಇನ್ನಿತರ ಲೋಹಗಳಿವೆ. ಕೆಲವೊಮ್ಮೆ ದೇಹ ದಲ್ಲಿರುವ ಆರೋಗ್ಯಕರ ಪೋಷಕಾಂಶಗಳನ್ನು ಚರ್ಮದಲ್ಲಿರುವ ರಂಧ್ರಗಳು ಹೊರ ಹಾಕಿದಾಗ ಅವುಗಳನ್ನು ತಕ್ಷಣ ತನ್ನಲ್ಲಿ ಹೀರಿ ಕೊಂಡು ಅಗತ್ಯ ಬಿದ್ದಾಗ ಅವುಗಳನ್ನು ಪುನಃ ದೇಹಕ್ಕೆ ವಾಪಸ್ಸು ಕಳುಹಿಸುವ ಕೆಲಸವನ್ನು ನಾವು ಧರಿಸಿದ ಬಳೆಗಳು ಮಾಡು ತ್ತವೆ. ಧರಿಸಿದ ಬಳೆಗಳು ರಕ್ತ ಸಂಚಲನೆಗೂ ಸಹಕಾರಿ. ಅಪ ಕಾರಕ್ಕಿಂತ ಉಪಕಾರವೇ ಹೆಚ್ಚಿರುವ ಕಾರಣ ಬಳೆಗಳನ್ನು ಧಾರಣೆ ಮಾಡುವ ವಿಷಯದಲ್ಲಿ ಉದಾಸೀನ ಅಥವಾ ನಿರ್ಲಕ್ಷ್ಯ ಮಾಡಬಾರದು.



### ಮಾರ್ಚ್ ತಿಂಗಳ

# ರಾಶಿ ಫಲಗಳು



ಮೂಲ-ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ

ಅನುವಾದ- ಕೆ.ಎಸ್.ಎಸ್

**ಮೇಷ**

ಅಧಿಕ ಧನವ್ಯಯ, ಆರೋಗ್ಯ ವಿಷಯದಲ್ಲಿ ಶ್ರದ್ಧೆ ವಹಿಸಬೇಕು. ಆರ್ಥಿಕ ವಿಷಯಗಳ ಪ್ರೋತ್ಸಾಹಕರ ವಾಗಿರಲಿವೆ. ಕೆಲಸ-ಕಾರ್ಯಗಳಲ್ಲಿ ಪ್ರಗತಿ, ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಸಾಧ್ಯತೆ.

**ವೃಷಭ**

ಆಕಸ್ಮಿಕ ಧನಲಾಭ, ಆರ್ಥಿಕ ಪರಿಪುಷ್ಠಿ, ಉದ್ಯೋಗ ಕ್ಕಾಗಿ ಮಾಡುವ ಪ್ರಯತ್ನ ಸಫಲವಾಗಲಿವೆ. ದ್ರವ್ಯ-ಧನಲಾಭ, ಸಂಸಾರದಲ್ಲಿ ಸುಖ ಮತ್ತು ಸಂತೋಷ ಕಂಡು ಬರುತ್ತದೆ. ವಿದ್ಯಾರ್ಥಿಗಳಿಗೆ ಪ್ರಗತಿ ಸಾಧ್ಯತೆ.

**ಮಿಥುನ**

ವೃತ್ತಿ ಉದ್ಯೋಗಗಳಲ್ಲಿ ಕಷ್ಟ ವಹಿಸಿ ಕೆಲಸ ಮಾಡಬೇಕು. ಖರ್ಚುಗಳನ್ನು ಕಡಿಮೆ ಮಾಡಿಕೊಳ್ಳಬೇಕು. ಹಣವನ್ನು ಶೇಕರಿಸಿಟ್ಟುಕೊಳ್ಳುವುದು ಉತ್ತಮ. ಹಣಕಾಸಿನ ಪರಿಸ್ಥಿತಿಯಲ್ಲಿ ಉತ್ತಮ ಪ್ರಗತಿ,ಲಕ್ಷ್ಮಿ ಕಟಾಕ್ಷ, ವಿದ್ಯಾರ್ಥಿಗಳಿಗೆ ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶ.

**ಕರ್ಕಾಟಕ**

ಅದೃಷ್ಟವಂತ ಕಾಲ ನಿಮ್ಮ ಪ್ರಯತ್ನಗಳಲ್ಲಿ ವಿಜಯ ವಿದೆ. ಕೋರ್ಟು ವ್ಯವಹಾರಗಳಲ್ಲಿ ಉಪಶಮನ ವುಂಟಾಗಲಿದೆ. ಧನ - ಕನಕ ವೃದ್ಧಿ ಸಾಧ್ಯತೆ, ಶತ್ರು-ಮಿತ್ರರ ಭಯ, ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶಕ್ಕಾಗಿ ಹೆಚ್ಚಿನ ಶ್ರಮ ಅಗತ್ಯ.

**ಸಿಂಹ**

ನಿಮ್ಮ ಆರೋಗ್ಯ ವಿಷಯದಲ್ಲಿ ಶ್ರದ್ಧೆವಹಿಸಬೇಕು. ದೂರ ಪ್ರಯಾಣಗಳ ಯೋಜನೆ ಮಾಡಿಕೊಳ್ಳಿ ಆರ್ಥಿಕ ಲಾವಾದೇವಿ ವ್ಯವಹಾರಗಳಲ್ಲಿ ಜಾಗ್ರತೆ. ಸ್ಥಾನಪಲ್ಲಟ ಸಾಧ್ಯತೆ ಹೆಚ್ಚು ಕುಟುಂಬದಲ್ಲಿ ಸೌಖ್ಯವೃದ್ಧಿ, ವಿದ್ಯಾರ್ಥಿಗಳಿಗೆ ಸ್ವಪ್ರಯತ್ನ ಅಗತ್ಯ.

**ಕನ್ಯ**

ಕುಟುಂಬದಲ್ಲಿ ಸಾನುಕೂಲ ಪರಿಸ್ಥಿತಿಗಳು ಏರ್ಪಾಡುತ್ತವೆ.ವ್ಯವಹಾರಸ್ಥರಿಗೆ ಲಾಭಗಳು ಬರುತ್ತವೆ. ಉದ್ಯೋಗದಲ್ಲಿ ಮೇಲಿನವರಿಂದ ಪ್ರಶಂಸೆಗೊಳಾಗಾಗುವಿರಿ. ವೃತ್ತಿರಂಗದಲ್ಲಿ ಕಾರ್ಯದಕ್ಷತೆ ಮತ್ತು ಮನ್ನಣೆ, ಸಂಬಂಧ ಗಳಲ್ಲಿ ಭಿನ್ನಾಭಿಪ್ರಾಯ ದ್ರವ್ಯಲಾಭ.

**ತುಲಾ**

ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ರಾರಾಜಿಸುವರು ಓದಿನಲ್ಲಿ ಪ್ರಗತಿ ವ್ಯಾಪಾರ ಬೆಳವಣಿಗೆಯಾಗಲಿದೆ. ನಿಮ್ಮ ಅವಶ್ಯಕತೆಗಳಿಗನುಗುಣವಾಗಿ ಆದಾಯವಿರಲಿದೆ. ಕುಟುಂಬದಲ್ಲಿ ಅಧಿಕ ಸೌಖ್ಯ ಮತ್ತು ಸಂತೋಷ ಹೊರ ಸಂಚಾರದಲ್ಲಿ ಸಂತೋಷ ಮತ್ತು ನೆಮ್ಮದಿ.

**ವೃಶ್ಚಿಕ**

ನೂತನ ಗೃಹ ಪ್ರಾಪ್ತಿ ವಿದ್ಯಾರ್ಥಿಗಳು ಮುನ್ನಡೆ ಯಲ್ಲಿರುವರು, ಆಕಸ್ಮಿಕ ಧನಲಾಭ ಪ್ರಾಪ್ತಿಯಾಗ ಲಿದೆ. ಬಂಧು-ಬಾಂಧವರ ವಿರೋಧ,ಧನಾಗಮ, ಆರೋಗ್ಯದ ಕಡೆ ಗಮನ ಅಗತ್ಯ, ಹಿಡಿದ ಕಾರ್ಯ ಮುಗಿಸುವ ಛಲ ಇರುತ್ತದೆ.

**ಧನಸ್ಸು**

ಗೃಹಸ್ಥಿತಿ ಅನುಕೂಲಕರ ವ್ಯಾಪಾರವೃದ್ಧಿ ಆರೋಗ್ಯ ಚೆನ್ನಾಗಿರಲಿವೆ. ಜೀವನದಲ್ಲಿ ಹೊಸ ತರುವನ್ನು ಹೊಂದುವಿರಿ. ವೃತ್ತಿರಂಗದಲ್ಲಿ ಕಾರ್ಯ ಪ್ರಶಂಸೆ-ಧನಾಗಮ ಬಂಧು-ಬಾಂಧವರಲ್ಲಿ ಸೌಖ್ಯ ಮತ್ತು ನೆಮ್ಮದಿ.

**ಮಕರ**

ವಿದ್ಯೆಯ ವಿಷಯದಲ್ಲಿ ಉತ್ತೀರ್ಣರಾಗುವಿರಿ ನೂತನ ವಸ್ತು ವಸ್ತ್ರಾಭರಣಗಳ ಪ್ರಾಪ್ತಿ ನಿಮ್ಮ ವರ್ತನೆ ಎಲ್ಲರಿಗೂ ಸಂತಸ ತರಲಿದೆ. ವೃತ್ತಿ ರಂಗದಲ್ಲಿ ಕಾರ್ಯ ಪ್ರಶಂಸೆ-ಧನಾಗಮ ಬಂಧು-ಬಾಂಧವರಲ್ಲಿ ಸೌಖ್ಯ ಮತ್ತು ನೆಮ್ಮದಿ.

**ಕುಂಭ**

ಧನವನ್ನು ಹೇರಳವಾಗಿ ಖರ್ಚು ಮಾಡುವಿರಿ. ಆರೋಗ್ಯ ಚೆನ್ನಾಗಿರುತ್ತದೆ. ಕುಟುಂಬ ವಾತಾವರಣ ಶಾಂತಿಯುತವಾಗಿರಲಿದೆ. ವಾಕ್ಚಾತುರ್ಯವನ್ನು ಪ್ರದರ್ಶಿಸುವಿರಿ.ಆರೋಗ್ಯದಲ್ಲಿ ಉತ್ತಮ ಪ್ರಗತಿ ಬುದ್ಧಿ ವಿಕಲ್ಪ ಸಾಧ್ಯತೆ, ಬಂಧು ಮಿತ್ರರ ಜೊತೆ ಸೌಖ್ಯ.

**ಮೀನ**

ಜನ್ಮರಾಶಿಯಲ್ಲಿ ಬುಧ,ರಾಹುಗಳು ಬಂಧನ ಯೋಗವನ್ನು ತರಲಿದ್ದಾರೆ.ಮನೆಯಲ್ಲಿ ಶುಭ ಯೋಗಗಳು ಒದಗಿ ಬರುತ್ತವೆ. ಭೂ ಗೃಹ ಸ್ಥಿರಾಸ್ತಿಗಳನ್ನು ಖರೀದಿ ಮಾಡುವಿರಿ. ಹೊಸ ಸ್ಥಳಗಳ ಸಂದರ್ಶನ ಮತ್ತು ಪ್ರಯಾಣ ಸುಖಕರ. ಶುಭಫಲಗಳ ನಿರೀಕ್ಷೆ.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

- ಡಾ. ಅನಸೂಯ ಎಸ್.ರಾಜೀವ್

**1.ಶಿವರಾತ್ರಿಯ ಪೂಜೆಯಲ್ಲಿ ಅಭಿಷೇಕಕ್ಕೆ ಮಹತ್ವವಿರಲು ಕಾರಣವೇನು?**

**ಉತ್ತರ :** ಶಿವರಾತ್ರಿಯಂದು ಶಿವನಿಗೆ ರುದ್ರಾಭಿಷೇಕ ಮಾಡಿ ಬಿಲ್ವಪತ್ರೆಯಿಂದ ಅರ್ಚಿಸಲಾಗುತ್ತದೆ. ಅಭಿಷೇಕ ಪ್ರಿಯೋ ಶಿವಃ ಎಂದು ಹೇಳಲು ಕಾರಣವೆಂದರೆ ಹಿಂದೆ ದೇವಾಸುರ ಸಮುದ್ರಮಂಥನ ಮಾಡುತ್ತಿದ್ದಾಗ ಉದ್ಭವಿಸಿದ ಹಾಲಾಹಲವನ್ನು ಶಿವನು ಕುಡಿಯಬೇಕಾಗಿ ಬಂತು. ವಿಷದ ಉರಿಯನ್ನು ತಾಳಲಾರದೆ ಅವನು ತಲೆಯ ಮೇಲೆ ಚಂದ್ರನನ್ನು ಧರಿಸಿದನಾದರೂ ಉರಿಕಡಿಮೆಯಾಗದ ಕಾರಣ, ಗಂಗೆಯನ್ನು ತಲೆಯ ಮೇಲೆ ಧರಿಸಿದಾಗ ಉರಿ ಉಪಶಮನವಾಯಿತೆಂದೂ ಹಾಗಾಗಿ ಶಿವನಿಗೆ ಜಲಾಭಿಷೇಕ ಅತ್ಯಂತ ಪ್ರಿಯವೆಂದೂ ಪುರಾಣದಲ್ಲಿ ತಿಳಿಸಿದೆ. ಶಿವನೆಂದರೆ ದ್ವೈತ ಪ್ರಪಂಚದ ಸೋಂಕೇ ಇಲ್ಲದಿರುವ ನಿರ್ಗುಣ ಪರಬ್ರಹ್ಮವೆಂದರ್ಥ. ರಾತ್ರಿ ಎಂದರೆ ಅವಿದ್ಯೆ. ಜ್ಞಾನಸ್ವರೂಪಿಯಾದ ಶಿವನೇ ತಾನೆಂದು ಅರ್ಥಮಾಡಿಕೊಂಡರೆ ಅವಿದ್ಯೆಯು ನಾಶವಾಗಿ ಜ್ಞಾನೋದಯವಾಗುವುದೇ ಶಿವರಾತ್ರಿ. "ಅಹಂ ಬ್ರಹ್ಮಾಸ್ಮಿ" ಎಂದು ಅರ್ಥಮಾಡಿಕೊಳ್ಳುವುದೇ ಶಿವಪೂಜೆ, ಪಂಚಕೋಶಗಳೂ ಅನಾತ್ಮವೇ ಎಂದೂ ಪಂಚಕೋಶಗಳಿಗೂ ಸಾಕ್ಷಿಯಾದ ಆತ್ಮವೇ ತಾನೆಂದೂ ಮತ್ತೆ ಮತ್ತೆ ಅನುಸಂಧಾನ ಮಾಡುವುದೇ ಶಿವಾಭಿಷೇಕವು. ಅಭಿಷೇಕವೆಂದರೆ ಪವಿತ್ರ ಜಲದಿಂದ ಶಿವಲಿಂಗವನ್ನು ಅಭಿಷೇಕಿಸುವುದಷ್ಟೇ ಅಲ್ಲ ಪರಮಾತ್ಮನೇ ಸ್ವಯಂ ಬೋಧಿಸುತ್ತಿರುವ ಜ್ಞಾನಗಂಗೆಯಲ್ಲಿ ನಿತ್ಯವೂ ಅಭಿಷಿಕ್ತನಾಗಿ ಆತ್ಮಪ್ರಕ್ಷಾಳನ ಮಾಡಿಕೊಳ್ಳುವುದು.

**2.ಶಿವರಾತ್ರಿಯಂದು ಉಪವಾಸ ಮಾಡುವುದೇಕೆ?**

**ಉತ್ತರ:** ಶಿವರಾತ್ರಿಯ ದಿನದಂದು ಮುಸುರೆಯನ್ನಾಗಲೀ, ಬೇಯಿಸಿದ ಆಹಾರಗಳನ್ನಾಗಲೀ ತಿನ್ನಬಾರದು. ಕೇವಲ ಹಾಲು, ಹಣ್ಣುಗಳನ್ನು ಮಾತ್ರ ಸ್ವಲ್ಪ ಸೇವಿಸಬೇಕು. ಶಕ್ತಿಯಿದ್ದವರು ಕೇವಲ ನೀರನ್ನು ಕುಡಿದುಕೊಂಡಿರಬೇಕು. ರಜೋಗುಣ ತಮೋಗುಣ ಉಂಟುಮಾಡುವ ಆಹಾರವನ್ನು ಸೇವಿಸಬಾರದು. ಪ್ರಕೃತಿಯು ಹಗುರವಾಗಿರುವಂತೆ ಕಡಿಮೆಪ್ರಮಾಣದಲ್ಲಿ ಶಾಸ್ತ್ರವು ಅನುಮತಿಸಿರುವ ಆಹಾರವನ್ನು ಸೇವಿಸುವುದು ಒಳ್ಳೆಯದು. ಗುರುವಾದ ಮತ್ತು ಇಂದ್ರಿಯಕ್ಷೋಭೆಯನ್ನುಂಟು ಮಾಡುವ ಆಹಾರವನ್ನು ಸೇವಿಸಬಾರದು. ಕಾರಣ ಇಷ್ಟೆ ಯಾದೃಶಃಆಹಾರಃ ತಾದೃಶಃ ಮನಃ ಎಂಬಂತೆ ಧ್ಯಾನಕ್ಕೆ ಪೂರಕವಾದ ಮನಸ್ಥಿತಿ ಇರಬೇಕಾದಲ್ಲಿ ಸೇವಿಸುವ ಆಹಾರವೂ ಪೂರಕವಾಗಿರಬೇಕು. ಉಪ ಎಂದರೆ ಶಿವನ ಸಮೀಪದಲ್ಲಿ ವಾಸ ಎಂದರೆ ವಾಸಿಸುವುದು. ಇಂದ್ರಿಯ ಮನೋಬುದ್ಧಿಗಳನ್ನು ಅನಾತ್ಮವಿಷಯ ಚಿಂತನೆಯಿಂದ ಬಿಡಿಸಿ ಆತ್ಮನಲ್ಲಿಯೆ ನೆಲೆಗೊಳ್ಳುವುದೇ ಉಪವಾಸವು.

**3.ಶಿವರಾತ್ರಿಯಂದು ಜಾಗರಣೆ ಬಹು ಮುಖ್ಯವಾದುದು ಏಕೆ?**

**ಉತ್ತರ:** "ಕಲಿಯುಗದಲ್ಲಿ ಶಿವರಾತ್ರಿಯಂದು ನಾನು ರಾತ್ರಿ ಸಮಯದಲ್ಲಿ ಮಾತ್ರವೇ ಭೂಮಿಯಲ್ಲಿ ಸಂಚರಿಸುತ್ತಾ ಎಲ್ಲಾ ಸ್ಥಾವರ ಮತ್ತು ಜಂಗಮಲಿಂಗಗಳಲ್ಲೂ ಸಂಕ್ರಮಣ ಮಾಡುತ್ತೇನೆ. ಹಗಲು ಸಮಯದಲ್ಲಿ ಆ ಮಹಿಮೆ ಇರುವುದಿಲ್ಲ, ಎಂದು ಸ್ವಯಂಶಿವನೇ ಹೇಳಿದ್ದಾನೆ. ಹಾಗಾಗಿ ಶಿವರಾತ್ರಿಯಂದು ರಾತ್ರಿಯೆಲ್ಲ ಶಿವನನ್ನು ಪೂಜಿಸಿ ಶಿವನ ಧ್ಯಾನದಲ್ಲೇ ಮಗ್ನರಾಗಿರಬೇಕು. ಅವಿದ್ಯೆಯೇ ನಿದ್ರೆ. ನಿದ್ರೆಯನ್ನು ಮಾಡದೇ ಎಚ್ಚರವಾಗಿರುವುದು ಜಾಗರಣೆ. ಈ ಅವಿದ್ಯೆಯನ್ನು ದೂರ ಮಾಡಿಕೊಂಡು ಶಿವನೇ ತಾನೆಂದು ದೃಢವಾಗಿ ತಿಳಿಯುವುದೇ ಜಾಗರಣೆ.


**4. ಕಾಮದಹನ ಹೋಳಿಹಬ್ಬದ ಅರ್ಥವೇನು?**

**ಉತ್ತರ :** ಶಿವನು ಮನ್ಮಥನನ್ನು ತನ್ನ ತಪಸ್ಸಿಗೆ ಭಂಗ ಮಾಡಿದುದರ ಫಲವಾಗಿ ದಹಿಸಿದ ನೆನಪಿಗೆ ಹೋಳಿಹುಣ್ಣಿಮೆಯಂದು ರಾತ್ರಿ ಬೆಳದಿಂಗಳಿನಲ್ಲಿ ಒಣಗಿದ ರೆಂಬೆ, ಬೆರಣಿ, ಕಟ್ಟಿಗೆಗಳನ್ನೆಲ್ಲ ರಾಶಿ ಹಾಕಿ ಬೆಂಕಿ ಹಚ್ಚಿ ಅದರ ಸುತ್ತ ಕುಣಿದು ನಲಿಯುವುದು. ಜೀವನ ಸಾಧನೆಗೆ ಭಂಗವುಂಟು ಮಾಡುವ ಬಗೆಬಗೆಯ ಕಾಮನೆಗಳನ್ನು ಸುಟ್ಟು ಭಸ್ಮವಾಗಿಸಿದಾಗಷ್ಟೇ ದಿವ್ಯಾನಂದದ ತಂಪಿನ ಆಹ್ಲಾದದಲ್ಲಿ ನಲಿಯುವ ಸುಯೋಗ ಪ್ರಾಪ್ತಿ ಎಂಬುದರ ದ್ಯೋತಕ.

**5. ಹೋಳಿ ಬಣ್ಣಗಳ ಹಬ್ಬವೆಂದು ಕರೆಯಲು ಕಾರಣವೇನು?**

**ಉತ್ತರ :** ರಾಧಾ ಬಹಳ ರೂಪವಂತೆ, ಗೌರವರ್ಣದವಳು, ಕೃಷ್ಣ ಕಪ್ಪು, ಕೃಷ್ಣನು ಯಶೋದೆಯ ಬಳಿ ಹೋಗಿ ರಾಧಾ ಮಾತ್ರ ಬಿಳಿ ನಾನೇಕೆ ಕಪ್ಪು ಎಂದು ಕೇಳುತ್ತಾನೆ. ಯಶೋದೆಯು, ಕೃಷ್ಣನಿಗೆ , ನಿನಗಿಷ್ಟ ಬಂದ ಬಣ್ಣವನ್ನು ರಾಧೆಗೆ ಹಾಕೂ ಎನ್ನುತ್ತಾಳೆ, ಕೃಷ್ಣ ಹಾಗೇ ಮಾಡುತ್ತಾನೆ. ಅಂದಿನಿಂದ ಬಣ್ಣ ಹಾಕುವ ಸಂಪ್ರದಾಯ ಮುಂದುವರೆದುಕೊಂಡು ಬಂದಿದೆ ಎಂಬುದು ರೂಢಿ. ಹೀಗೆ ವಸಂತೋತ್ಸವವನ್ನು ಆಚರಿಸುವುದು ಅರ್ಥಪೂರ್ಣವಾಗಿದೆ.

ನೀತಿ ಕಥೆ



# ಜಾಗರಣೆ ಮತ್ತು ಉಪವಾಸ

-ಎ.ಆರ್, ರಘುರಾಮ
9916138436

ಜಾಗರಣೆ ಎಂಬ ಪದವನ್ನು ಹಲವು ಬಾರಿ ಕೇಳಿರುತ್ತೇವೆ. ಜಾಗರಣೆ ಎಂದರೆ ನಿದ್ರೆ ಮಾಡದಿರುವುದು. ನಿದ್ರೆ ಬಾರದಿರಲು ಏನು ಮಾಡಬೇಕು ಎಂದು ಹಲವಾರು ಕೇಳಬಹುದು. ಸುಲಭ ಉಪಾಯ ಎಂದರೆ ಸಿನಿಮಾ, ಟಿವಿ ನೋಡುವುದು, ಆಟ ಆಡುವುದು, ರಸ್ತೆಗಳಲ್ಲಿ ತಿರುಗುವುದು ಎಂದೇ ಹಲವರು ತಿಳಿದಿರುತ್ತಾರೆ. ಆದರೆ ನಾವು ಜಾಗರಣೆ ಮಾಡಬೇಕಾಗಿರುವುದು ಮನೋರಂಜನೆಯ ಕಾರ್ಯದಿಂದ ಅಲ್ಲ. ಆತ್ಮಕ್ಕೆ ರಂಜನೆ ನೀಡುವ ಸತ್ಕಾರ್ಯಗಳಿಂದ ಜಾಗರಣೆ ಮಾಡಿದ್ದೇ ಆದಲ್ಲಿ ಅದರ ಪರಿಣಾಮ ಮತ್ತು ಫಲ ಹೆಚ್ಚು.

ನಮ್ಮ ಕಣ್ಣು ಹೊರಮುಖಿಯಾಗದೇ ಒಳಮುಖಿ ಆಗಬೇಕು. ಹೊರಗಿನ ಶಬ್ದಗಳ ಜತೆಗೆ ಒಳಗಿರುವ ನಾದವನ್ನು ಕೇಳಬೇಕು. ಹೊರ ಪ್ರಪಂಚದ ಬಣ್ಣಬಣ್ಣದ ವಸ್ತುಗಳಿಗೆ ಅಭಿಮುಖವಾಗದೇ ನಮ್ಮ ಹೃದಯಕ್ಕೆ ಮನಸ್ಸಿಗೆ ಮುಖಾಮುಖಿಯಾಗಬೇಕು. ಇಂತಹಾ ಜಾಗ್ರೃತಿಗಳು ನಮ್ಮಲ್ಲಿ ಮನೆ ಮಾಡಿದಾಗ ಮಾತ್ರ ನಾವು ಮಾಡಿದ ಜಾಗರಣೆ ಸಾರ್ಥಕವಾಗುತ್ತದೆ.

ಅದರಂತೆಯೇ ಉಪವಾಸ. ಹೊಟ್ಟೆಗೆ ಏನನ್ನೂ ತಿನ್ನದೇ ಇರುವುದೇ ಉಪವಾಸ ಎಂದು ಹಲವರು ಅರ್ಥ ಮಾಡಿಕೊಂಡಿರುತ್ತಾರೆ.

ಯುಕ್ತಾಹಾರ ವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು।
ಯುಕ್ತಸ್ವಪ್ನಾವ ಬೋಧಸ್ಯ ಯೋಗೋ ಭವತಿ ದುಃಖಃ॥

ಯಾರು ನಿದ್ರೆ, ಸ್ವಪ್ನದಲ್ಲಿಯೂ ಆಹಾರ-ವಿಹಾರ ಕಾರ್ಯ ವಿಚಾರದಲ್ಲಿ ಸಾತ್ವಿಕನಾಗಿ ಇರುವನೋ ಅವನು ಮಾನಸಿಕ ಕಷ್ಟ- ದುಃಖ ಗಳಿಂದ ದೂರವಾಗಿ ಯೋಗಿಯಾಗುತ್ತಾನೆ ಎಂದು ಭಗವದ್ಗೀತೆ ತಿಳಿಸಿದ.

ಉಪವಾಸ ಎಂಬ ವಿಚಾರವನ್ನು ಸ್ವಲ್ಪ ಆಳವಾಗಿ ತಿಳಿಯೋಣ. ಉಪ ಎಂದರೆ ಹತ್ತಿರ. ವಾಸ ಎಂದರೆ ಇರುವುದು. ಪಂಚೇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡು ಕೆಟ್ಟ ಯೋಚನೆ ಮಾಡದೇ (ಭಗವಂತನ ಸಮೀಪ) ಇರುವುದು ಎಂಬುದೇ ನಿಜವಾದ ಅರ್ಥ. ಆ ಸಮಯದಲ್ಲಿ ಧ್ಯಾನ, ಭಜನೆ, ಇಷ್ಟ ದೇವರ ಸ್ತುತಿಗಳ ಪಠಣ ಮಾಡಬೇಕು. ಹೊಟ್ಟೆಗೆ ಸ್ವಲ್ಪ ಬಿಡುವು ಕೊಡುವುದರಿಂದ ಶಾಂತಿ, ತಾಳ್ಮೆ ಸಿಗುತ್ತದೆ. ರಕ್ತದೊತ್ತಡ, ರಕ್ತ ಹೀನತೆ ಮಾತ್ರವಲ್ಲದೇ ಹಲವು ಹತ್ತು ರೋಗ ರುಜಿನ ಇದ್ದರೆ ಗುಣ ಮುಖವಾಗುತ್ತದೆ.


ಶಿವರಾತ್ರಿ ಹತ್ತಿರ ಬಂತು, ಉಪವಾಸ ಮತ್ತು ಜಾಗರಣೆ ಬಗ್ಗೆ ಎಲ್ಲರೂ ಚರ್ಚೆ ಮಾಡುತ್ತಲೇ ಇರುತ್ತಾರೆ. ಧಾರ್ಮಿಕ ತಾಣಗಳಲ್ಲಿ ಈ ಸಂದರ್ಭ ವಿಶೇಷ ಆಚರಣೆಗಳೂ ನಡೆಯುತ್ತದೆ. ಇದೆಲ್ಲಕ್ಕಿಂತಾ ಹೆಚ್ಚಾಗಿ ಮನೋನಿಯಾಮಕನಾದ ಶಿವನಿಗೆ ಮನಸ್ಸನ್ನು ಅಭಿಮುಖವಾಗಿಸಿ ಕೊಂಡು ಶಿವರಾತ್ರಿ ಆಚರಣೆ ಮಾಡಬೇಕು, ಧ್ಯಾನದಲ್ಲಿ ತೊಡಗಬೇಕು ಎಂಬುದು ಮೂಲ ಉದ್ದೇಶ.

ಅಮಂಗಲದಲ್ಲಿ ಮನಸ್ಸನ್ನು ತೊಡಗಿಸದೇ ಮಂಗಲದಲ್ಲಿ ಲೀನಗೊಳಿಸಬೇಕು. ಕಣ್ಣು ಶಿವನ ರೂಪದಲ್ಲಿ ಇಡಬೇಕು. ಕಿವಿ ಶಿವನ ಗುಣಗಾನ ವನ್ನು ಆಲಿಸಬೇಕು. ಮೂಗು ಶಿವನ ಪೂಜಾಸಾಮಾಗ್ರಿಗಳ ಗಂಧವನ್ನು ಆಸ್ವಾದನೆ ಮಾಡಬೇಕು.ಚರ್ಮ ಶಿವನ ಪದಸ್ಪರ್ಶದಿಂದ ಪಾವನವಾಗ ಬೇಕು. ಕಾಲುಗಳು ಶಿವನ ಪ್ರದಕ್ಷಿಣೆ ಮಾಡಬೇಕು. ಕೈಗಳು ಶಿವನಿಗೆ ಜೋಡಿಸಬೇಕು. ಇಲ್ಲಿ ಶಿವ ಎಂದರೆ ಮಂಗಳಕರ ಎಂದು ಅರ್ಥ ಮಾಡಿ ಕೊಂಡಾಗ ನಮ್ಮ ಆಚರಣೆಗಳು ವಿಶಾಲ ಸ್ವರೂಪ ಪಡೆಯುತ್ತವೆ. ಮನಕ್ಕೆ ನಿಯಾಮಕನಾದ ರುದ್ರದೇವರ ಮಹಾಕೃಪೆ ನಮಗೆ ವರವಾಗಿ ಗಂಗೆಯಂತೆ ಹರಿದು ಬರುತ್ತದೆ.

ಕ್ಷಯಿಸೆ ಶಿವೇತರ ಕೃತಿಕೃತಿಯಲ್ಲಿ
ಮೂಡಲಿ ಮಂಗಳ ಮತಿಮತಿಯಲ್ಲಿ
ಕವಿಋಷಿ ಸಂತರ ಆದರ್ಶದಲಿ
ಸರ್ವೋದಯವಾಗಲಿ ಸರ್ವರಲಿ

ಹೃದಯಶಿವನನ್ನು ಆರಾಧಿಸುವ ನಿಟ್ಟಿನಲ್ಲಿ ಕವಿಯೊಬ್ಬರು ರಾಷ್ಟ್ರಕವಿ ಕುವೆಂಪು ನೀಡಿದ ದಿವ್ಯವಾಣಿ ಇದು. ಯಾವುದೇ ಹಬ್ಬ, ಹರಿದಿನಗಳ ಆಚರಣೆ ಹಿಂದೆ ಅಡಗಿರುವ ವಿಚಾರವನ್ನು ಅರಿತಾಗ ಅದರ ಮಹತ್ವ ಇಮ್ಮಡಿಸುತ್ತದೆ. ಜ್ಞಾನಶಾಖೆಗಳು ವಿಸ್ತರಿಸುತ್ತವೆ. ಬದುಕು ಭಿನ್ನಮಾರ್ಗದಲ್ಲಿ ಸಾಗಿ ಸಾರ್ಥಕತೆ ಕಂಡುಕೊಳ್ಳುತ್ತದೆ. ಈ ದಿಸೆಯಲ್ಲಿ ನಮ್ಮ ಪುಟ್ಟ ಹೆಜ್ಜೆಗಳು ಇಂದಿನಿಂದಲೇ ಆರಂಭಗೊಳ್ಳಲಿ.

ಬಾ
ಲ
ವಿ
ನೋ
ದಿ
ನಿ



ಈ ಗೊಂಬೆಗೆ ಚುಕ್ಕಿಯನ್ನು ಸೇರಿಸಿ ಹಾಗೂ ಬಣ್ಣವನ್ನು ತುಂಬಿರಿ.....

ಈ ಗೊಂಬೆಯನ್ನು ನೋಡಿ





ಬಣ್ಣವನ್ನು ತುಂಬಿರಿ.

**ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....**

ಲ್ಲ ಅ ಯಾ ಳಿ ತ ದ ಗೆ ಸು

ನ ವ ರ ಕೆ ಆ ವು ನಿ

ಆಳಿಲ್ಲದವನಿಗೆ ಅರಸು ತನವು ಯಾಕೆ?

ಉತ್ತರಗಳು:

## ಮಕ್ಕಳೆ ಈ ಪ್ರಶ್ನೆಗಳಿಗೆ ಉತ್ತರವನ್ನು ಕೊಡಿ ನೋಡೋಣ

1. ಈ ಕೆಳಗಿನವುಗಳಲ್ಲಿ ಗಣಪತಿಗೆ ಇಷ್ಟವಾದದ್ದು ಯಾವುದು?

1. ಬಿಲ್ವಪತ್ರೆ 2.ಕೇದಗೆ 3.ಗರಿಕೆ 4.ತುಳಸಿ

2.ಹಿಂದೂ ಧರ್ಮಗ್ರಂಥದಲ್ಲಿ ದೇವಿ ಲಕ್ಷ್ಮಿಯ ಪವಿತ್ರ ಹೆಸರೇನು?

1. ಸೌ 2. ಶ್ರೀ 3. ಓಂ 4. ಸಿರಿ

3. ಉಪಪಾಂಡವರನ್ನು ಕೊಂದ ಚಿರಂಜೀವಿ ಯಾರು?

1. ಪರಶುರಾಮ 2.ಅಶ್ವತ್ಥಾಮ 3.ಕೃಪಾಚಾರ್ಯ 4.ವೇದವ್ಯಾಸ


4. ಶ್ರೀ ಕೃಷ್ಣನ ಗುರುವಿನ ಹೆಸರೇನು?

1. ದ್ರೋಣ 2.ಶುಕ್ಲಚಾರ್ಯ 3.ಸಾಂದೀಪನಿ 4.ವಸಿಷ್ಠ

1.ಗರಿಕೆ 2. ಶ್ರೀ 3.ಅಶ್ವತ್ಥಾಮ 4. ಸಾಂದೀಪನಿ

## ತಿರುಮಲ ತಿರುಪತಿ ದೇವಸ್ಥಾನಗಳು

# ಮಕ್ಕಳೇ ಇದು ನಿಮಗಾಗಿ



## ರಸಪ್ರಶ್ನೆಗಳು

01.ಶ್ರೀ ವೈಷ್ಣವಾಲಯದ ಕ್ಷೇತ್ರಪಾಲಕನು ಯಾರು?..........................................................................................

02ವಿಭೂತಿ ಎಂದರೆ ಏನು ? .........................................................................................................................

03.ಮೈಸೂರಿನ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಸೂರ್ಯಸ್ಪರ್ಶಿಸುವ ದಿನ ಯಾವುದು? ...................................................

04.ಆನೆಕನ್ನಂಬಾಡಿಯ ಕೇಶವ ದೇವಾಲಯವನ್ನು ಸ್ಥಳೀಯರು ಏನೆಂದು ಕರೆಯುವರು? .........................................................

05.ಹೋಲಿಕಾಳ ದಹನವು ಅವಳ ತ್ಯಾಗ ಗುಣವನ್ನು ತಿಳಿಸುವ ಪರ್ವವಾಗಿ ಏನೆಂದು ಕರೆಯುತ್ತಾರೆ?...................................................

06.ಶಿವನು ಲಿಂಗಸ್ವರೂಪದಲ್ಲಿ ಉದ್ಭವಿಸಿದ ಪವಿತ್ರ ದಿನ ಯಾವುದು? .......................................................................

07.ರಾಮಾಯಣದಲ್ಲಿ ಸೀತಾದೇವಿಗೆ ಏನು ಮಾಡಿದ ಉಲ್ಲೇಖನವಿದೆ? ..........................................................................

08.ವಿಶ್ವಕ್ಸೇನ ತೀರ್ಥದ ಮೇಲೆ ಯಾವ ತೀರ್ಥಗಳು ಇವೆ? ...........................................................................

09.ಉಪವಾಸ ಎಂದರೆ ಏನು? .......................................................................................................

10.ಕುಬೇರನು ಯಾರ ಅಧಿಪತಿ? .......................................................................................................

11.ಮಧ್ಯಪ್ರದೇಶದಲ್ಲಿ ಒಬ್ಬ ಬ್ರಾಹ್ಮಣನಿದ್ದಾರೆ ಅವರ ಹೆಸರೇನು?.........................................................................

12. ಕುಜನನ್ನು ಏನೆಂದು ಕರೆಯುತ್ತಾರೆ? ...........................................................................................

13. ಹುಲಿಧ್ವಜ ಇದ್ದುದರಿಂದ ಇವರನ್ನು ಏನೆಂದು ಕರೆಯುತ್ತಿದ್ದರು? .........................................................................

14.ಬಾಲಕರಿಗೆ ಎಷ್ಟನೇ ವಯಸ್ಸಿನಲ್ಲಿ ಉಪನಯನ ಮಾಡುತ್ತಿದ್ದರು?..................................................................

15.ಶಿವನನ್ನು ನಾವು ಯಾವಾಗಲೂ ಯಾವ ರೂಪದಲ್ಲಿ ಆರಾಧಿಸಬೇಕು? ...........................................................




## ಸೂಚನೆಗಳು

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳಿಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ಉತ್ತರಗಳನ್ನು ನಮಗೆ ಕಳುಹಿಸುವ ಕೊನೆಯ ದಿನಾಂಕ 25.03.2024
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
**ತಿ.ತಿ.ದೇ. ಪ್ರಸ್ ಕಾಂಪೌಂಡ್**
**ಕೆ.ಟಿ. ರಸ್ತೆ, ತಿರುಪತಿ : 517 507**
**ಆಂಧ್ರ ಪ್ರದೇಶ್**

| | |
|---|---|
| **ಹೆಸರು :** | **ವಿಳಾಸ :** |
| **ಚಂದಾ ಸಂಖ್ಯೆ :** | |
| **ತಂದೆಯ ಹೆಸರು :** | |
| **ತಾಯಿಯ ಹೆಸರು:** | **ದೂರವಾಣಿ ಸಂಖ್ಯೆ:** |

# ಶ್ರೀ ವೇದಾಂತದೇಶಿಕರ ಜೀವನ ಹಾಗೂ ಹಂಸ ಸಂದೇಶ

- ಡಾ|| ಸಿ.ಎಸ್. ಊರ್ಮಿಳಾ



ತಸ್ಮಿನ್ ಸೀತಾಗತಿಮನುಗತೇ ತದ್ದುಕೂಲಾಂಕ ಮೂರ್ತ್ತಾ
ತನ್ಮಂಜೀರ ಪ್ರತಿಮನಿನಧೇ ನ್ಯಸ್ತ ನಿಸ್ಪಂದಃ ದೃಷ್ಟಿಃ
ವೀರಶ್ಚೇತೋ ವಿಲಯ ಮಗಮತ್ ತನ್ಮಯಾತ್ಮಾ ಮುಹೂರ್ತಂ
ಶಂಕೇ ತೀವ್ರಂ ಸಮಯೇ ಶಾಸನಂ ಮೀನಕೇತೋಃ ॥

ಶ್ರೀರಾಮ ತಾನು ಮಹಾವೀರ ಏಕಾಂಗ ವೀರ ಎಂದು ಈ ಹಿಂದೆಯೆ ತನ್ನ ಶೌರ್ಯವನ್ನು ಮೆರೆದಿದ್ದಾನೆ. ಇಂತಹ ಮಹಾ ಶೂರನೂ ಮನ್ಮಥನ ಪ್ರಭಾವದಿಂದ ಅದೆಷ್ಟು ವಿಚಲಿತನಾಗುತ್ತಾನೆ ಎಂಬುದನ್ನು ಕವಿ ಅತ್ಯಂತ ಸುಂದರವಾಗಿ ವರ್ಣಿಸಿದ್ದಾರೆ. ಶ್ರೀರಾಮನು ರಾಜಹಂಸವನ್ನು ಕಂಡೊಡನೆ ಸೀತೆಯ ನೆನಪು ಬಹಳಷ್ಟು ಜಾಸ್ತಿಯಾಯಿತು. ಏಕೆಂದರೆ ಆ ರಾಜ ಹಂಸದ ನಡಿಗೆ ಸೀತೆಯ ನಡಿಗೆಯಂತೆಯೇ ಇತ್ತು. ಅದರ ಬಣ್ಣವೋ ಸೀತೆಯು ಧರಿಸಿದ್ದ ಬಿಳಿಯ ವಸ್ತ್ರಕ್ಕೆ ಅಲಂಕಾರ ಪ್ರಾಯವಾಗಿದ್ದ ಜರಿಯ ರೇಖೆಗಳಂತೆ ಇದ್ದವು. ಅದನ್ನು ನೋಡಿ ಸೀತೆಯನ್ನು ನೆನೆದುಕೊಂಡು ಕೆಲಕಾಲ ಶ್ರೀರಾಮ ಮೂರ್ಛೆಗೊಂಡನಂತೆ.

**ಈ ಚಿತ್ರದಲ್ಲಿ ಒಟ್ಟು 7 ವ್ಯತ್ಯಾಸಗಳಿವೆ.** **ಮಕ್ಕಳೇ ಇದನ್ನು ಕಂಡು ಹಿಡಿಯಿರಿ ನೋಡೋಣ.**



**ಮಕ್ಕಳೇ ವ್ಯತ್ಯಾಸ ಗಳನ್ನು ಕಂಡು ಹಿಡಿಯಿರಿ ನೋಡೋಣ**




[illegible]

## ಚಿತ್ರಕಥೆ

# ಕುಬೇರನ ಗರ್ವಭಂಗ

ಕಥೆ: ತೆಲುಗು ಮೂಲ : ಶ್ರೀನಿವಾಸ ದೀಕ್ಷಿತರು
ಅನುವಾದ : ಆರ್.ಕೆ.ವಿ.
ಚಿತ್ರಗಳು : ದ್ವಾರಕನಾಥ್





ಮಾರನೆಯದಿನ ಗಣಪತಿಗೆ ಕುಬೇರನು ಔತಣವನ್ನು ಏರ್ಪಡಿಸಿದನು. ಬಗೆಬಗೆಯ ರೊಟ್ಟಿಗಳನ್ನು.... ಮೃಷ್ಟಾನ್ನವನ್ನು ಬಡಿಸುತ್ತಿದ್ದರು. ಗಣಪತಿಯು ಊಟ ಮಾಡುತ್ತಿದ್ದರು....
ಗಣಪತಿಯು ಬಡಿಸಿ! ಬೇಗ... ಬೇಗ
ಆಶ್ಚರ್ಯವಾಗಿದೆ.... ಇದೇನು ಇಷ್ಟು ತಿನ್ನುತ್ತಿದ್ದಾರೆ?
ನಿಲ್ಲಿಸು ಗಣಪತಿ ನಿನ್ನ ಹೊಟ್ಟೆ ಹೊಡೆದುಹೋಗುತ್ತದೆ.
ಅದಕ್ಕೆ ನನ್ನ ಹೊಟ್ಟೆಯ ಸುತ್ತ ಹಾವನ್ನು ಸುತ್ತಿ ಕೊಂಡಿರುವೆ....
ಕುಬೇರಾ!
ಸಾವಿರಾರು ಜನ ತಿನ್ನ ಬೇಕಿದ್ದ ಅನ್ನವನ್ನು ಗಣಪತಿ ಒಬ್ಬನೇ ತಿಂದಿದ್ದಾನೆ. ಅದನ್ನು ನೋಡಿ.
ಹಸಿವು ಕಡಿಮೆಯಾಯಿತೇ ಗಣಪತಿ!
ಇಲ್ಲ ಇನ್ನು ಬಡಿಸು
ಅಡುಗೆ ಭಟ್ಟರು ಕೈಕೊಟ್ಟು ಬಿಟ್ಟರು...... ಕುಬೇರನು.....
ಪರಮೇಶ್ವರಾ! ನನ್ನ ಅಹಂಕಾರ ಕಡಿಮೆಯಾಯಿತು. ಎಲ್ಲರಿಗೂ ಅನ್ನ ನೀಡುವ ನಿನಗೆ ನಾನು ಏನು ಕೊಡಲು ಸಾಧ್ಯ?
ಕುಬೇರನ ಅಹಂಕಾರ ಕಡಿಮೆಯಾಯಿತು... ಗಣಪತಿಯ ಹಸಿವು ಕಡಿಮೆಯಾಗುತ್ತದೆ. ಪರಮೇಶ್ವರನು ಕುಬೇರನನ್ನು ಆಶೀರ್ವದಿಸುತ್ತಾನೆ.
ನೀತಿ : ಅಹಂಕಾರ ಗುಣವಲ್ಲ..... ಅದು ಅವಲಕ್ಷಣ
ಶ್ರೀರಸ್ತು ...
ಶುಭಮಸ್ತು.....
ಸರ್ವೇಜನಃ
ಸುಖಿನೋಭವಂತು

**ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ**

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)



## ಚಂದಾ ನಮೂನೆ ಪತ್ರ

ಹೆಸರು ಮತ್ತು ವಿಳಾಸ :

(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ /ಆಜೀವಚಂದಾ : ☐ ರೂ.240/- ☐ ರೂ.2,400/-( 12 ವರ್ಷ),

ವಿದೇಶಿ ವಾರ್ಷಿಕ ಚಂದಾ ☐ ರೂ. 1030/-

ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಮಾತ್ರವೇ :

ಸ್ಥಳ :

ದಿನಾಂಕ: ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.240/-, ಆಜೀವಚಂದಾ (12 ವರ್ಷ) ರೂ.2,400/- ಗಳು ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯು ಬೇಕು. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು. ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ -"ಪ್ರಧಾನ ಸಂಪಾಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ. ಟಿ.ರೋಡ್ಡು, ತಿರುಪತಿ - 517 507".

ಸಪ್ತಗಿರಿ ಚಂದಾ ವಿವರಣೆಗಾಗಿ ಫೋನ್‌ನಂಬರ್:0877- 2264359,0877-2264543

**ತಿರುಮಲೆ ತಿರುಪತಿ ದೇವಸ್ಥಾನಗಳು**

## ಟೋಲ್ ಫ್ರಿ ನಂಬರ್

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥಕ್ಕಾಗಿ ತಿರುಮಲೆ ತಿರುಪತಿ ದೇವಸ್ಥಾನದವರು **ಟೋಲ್ ಫ್ರಿ ನಂಬರ್** ಅನ್ನು ಏರ್ಪಡಿಸಿದ್ದಾರೆ.

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪರ್ಕಿಸಬಹುದು.

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

**ಟೋಲ್ ಫ್ರಿ ನಂಬರ್**

**18004254141**

0877-2233333,

0877-2277777

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.

26-01-2024 ರಂದು ತಿ.ತಿ.ದೇ., ಆಡಳಿತ ಭವನದ ಮೈದಾನದಲ್ಲಿ ನಡೆದ 75 ನೇ ಗಣರಾಜ್ಯೋತ್ಸವದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಭೂಮನ ಕರುಣಾಕರರೆಡ್ಡಿಯವರು, ಈ ಕಾರ್ಯಕ್ರಮದಲ್ಲಿ ರಾಷ್ಟ್ರ ಧ್ವಜಾರೋಹಣ ಮಾಡುತ್ತಿರುವ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ ಐ.ಡಿ.ಈ.ಎಸ್., ರವರು, ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಹಿಂದಿನ ಶ್ರೀಮತಿ. ಎಸ್. ಭಾರ್ಗವಿ ಐ.ಎ.ಎಸ್., ಮತ್ತು ಶ್ರೀ ವಿ. ವೀರಬ್ರಹ್ಮ ಐ.ಎ.ಎಸ್., ಮತ್ತು ಸಿ.ವಿ.ಎಸ್.ಓ. ಶ್ರೀ ನರಸಿಂಹ ಕಿಶೋರ್, ಐ.ಪಿ.ಎಸ್., ಮತ್ತು ಇತರ ಉನ್ನತಾಧಿಕಾರಿಗಳು, ಸಿಬ್ಬಂದಿಯರು ಪಾಲ್ಗೊಂಡರು.















SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams
Printing on 25-02–2024 and Posting at Tirupati RMS.Regd. with the Registrar of Newspapers for India under
RNI. No. APKAN/2021/80589. Postal Regd.No.TRP/156/2024-2026 "Licenced toPost Without Prepayment
No. PMGK/RNP/WPP-04(6)/ 2024-2026" Posting on 5th of Every Month.

